|| ಶ್ರೀಃ ||

ಅದ್ವೈತ ವೇದಾಂತ ಅದರಲ್ಲಿ ಯೋಗಶಾಸ್ತ್ರದ ನಿಲುವು

(ಭಾಗ ೧)

: ಲೇಖಕರು :
ಶ್ರೀ ಬಿ. ಎಸ್. ಕಪನೀಪತಯ್ಯ ಬಿ. ಎ.

ಸೇವಾಸದನ
ಶ್ರೀ ಚಿದಂಬರಾಶ್ರಮ, ಗುಬ್ಬಿ.
1977

ಚಿ॥ರಾ॥ ಸೀತಾರಾಮಯ್ಯನಿಗೆ -
ಅನಂತ ಆಶೀರ್ವಾದಪೂರ್ವಕ -
ಕಾಣಿಕೆ ಪುತ್ರಯ್ಯ

ಅದ್ವೈತ ವೇದಾಂತ ಗ್ರಂಥದಿಂದ ಅದರಲ್ಲಿ ಯೋಗಶಾಸ್ತ್ರದ ನಿಲುವು

ಪ್ರಥಮಾಧ್ಯಾಯ

ಮಂಗಳಾಚರಣೆ

ಅಶುಭಾನಿ ನಿರಾಚಷ್ಟೇ ತನೋತಿ ಶುಭಸಂತತಿಂ ।
ಸ್ಮೃತಿಮಾತ್ರೇಣ ಯತ್ಪುಂಸಾಂ ಬ್ರಹ್ಮ ತನ್ಮಂಗಳಂ ವಿದುಃ ॥

ಯಾವ ಬ್ರಹ್ಮವು ಸ್ಮರಣಮಾತ್ರದಿಂದಲೇ, ಸರ್ವ ಅಶುಭಗಳ ನಿವೃತ್ತಿ ಪೂರ್ವಕ ಶುಭಪ್ರದವಾಗಿರುವುದೋ ಅಂತಹ ಬ್ರಹ್ಮನನ್ನೇ ವೇದಜ್ಞರು ಮಂಗಳ ವೆಂದು ಹೇಳುತ್ತಾರೆ. ಅಂತಹ ಮಂಗಳಕ್ಕೆ ನಮಸ್ಕಾರವು.

ಯಂ ವಿನಿದ್ರಾ ಜಿತಶ್ವಾಸಾಃ ಸಂತುಷ್ಟಾಃ ಸಂಯತೇಂದ್ರಿಯಾಃ ।
ಜ್ಯೋತಿಃ ಪಶ್ಯಂತಿ ಯುಂಜಾನಾಃ, ತಸ್ಮೈ ಯೋಗಾತ್ಮನೇ ನಮಃ ॥

ನಿದ್ರಾರಹಿತರಾಗಿಯೂ, ಪ್ರಾಣಗಳ ಜಯವನ್ನು ಪಡೆದವರಾಗಿಯೂ, ಸಂತುಷ್ಟಚಿತ್ತವುಳ್ಳವರಾಗಿಯೂ, ಇಂದ್ರಿಯಗಳನ್ನು ಜಯಿಸಿದವರಾಗಿಯೂ, ಇರುವ ಯೋಗಿಜನರು ಯಾವ ಪರಮಾತ್ಮನನ್ನು ತಮ್ಮ ಸಮಾಧಿಕಾಲದಲ್ಲಿ ಜ್ಯೋತಿ ರೂಪದಿಂದ ನೋಡುವರೋ ಆ ಯೋಗರೂಪಕ್ಕೆ ನಮಸ್ಕಾರವು.

ಸರ್ವಭೂತಾಂತರಸ್ಥಾಯ ನಿತ್ಯಮುಕ್ತಚಿದಾತ್ಮನೇ ।
ಪ್ರತ್ಯಕ್ ಚೈತನ್ಯರೂಪಾಯ ಮಹ್ಯಮೇವ ನಮೋನಮಃ ॥

ಸರ್ವಪ್ರಾಣಿಗಳ ಹೃದಯದೇಶದಲ್ಲಿ ಇರುವವನೂ ಸದಾ ಮುಕ್ತನೂ ಚಿತ್ ಪ್ರಕಾಶದಿಂದ ಸರ್ವವ್ಯಾಪ್ತನೂ ಶರೀರತ್ರಯ ಅವಸ್ಥಾತ್ರಯ ಪಂಚಕೋಶಚತುರ್ವಿಂಶತಿ ತತ್ವ ಮತ್ತು ಇವುಗಳೆಲ್ಲಕ್ಕೂ ಮೂಲಕಾರಣವಾದ ಅಜ್ಞಾನದಿಂದ ಉಂಟಾದ ಕರ್ತೃತ್ವ ಭೋಕ್ತೃತ್ವ ಪಾಪಪುಣ್ಯ ಮತ್ತು ಇವುಗಳ ಫಲವಾದ ಸುಖದುಃಖಾದಿಗಳ ಸ್ಪರ್ಶವಿಲ್ಲದೆ ಕೇವಲ ಸಾಕ್ಷಿರೂಪದಿಂದ ಚಿದ್ರೂಪನಾಗಿರುವ ಆತ್ಮನಿಗೋಸ್ಕರ ಪುನಃ ಪುನಃ ನಮಸ್ಕಾರವು. ಹೀಗೆ ಧ್ಯಾನಿಸಿ ನನ್ನ ಲೇಖನದಲ್ಲಿ ಪಂಡಿತರು ಕಾಣಬಹುದಾದ ಪ್ರಮಾದಗಳಿಗೆ ಕ್ಷಮೆ ಬೇಡಿ ಗ್ರಂಥವನ್ನು ಪ್ರಾರಂಭಿಸುವೆನು.

ಅದ್ವೈತ ವೇದಾಂತ ಸಾರಸಂಗ್ರಹ

ಬ್ರಹ್ಮದ ಲಕ್ಷಣ

ಸರ್ವಂ ಖಲ್ವಿದಂ ಬ್ರಹ್ಮ, ಅಸಂಗೋ ನ ಹಿ ಸಜ್ಜತಿ, ಆಕಾಶವತ್ ಸರ್ವಗತಶ್ಚ ನಿತ್ಯಃ, ಆಸ್ಥವಿರಂ ಶುದ್ಧಮಪಾಪವಿದ್ಧಂ, ಪ್ರಜ್ಞಾನ ಘನಃ, ವಿಮುಕ್ತಶ್ಚ ವಿಮುಚ್ಯತೇ, ನಿಷ್ಕಲಂ ನಿಷ್ಕ್ರಿಯಂ ಶಾಂತಂ, ಬ್ರಹ್ಮೈವೇದಂ ಸರ್ವಂ, ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ, ಅವಿಕಾರೋಽಯಮುಚ್ಯತೇ, ಸತ್ಯಂ ಜ್ಞಾನಮನಂತಂ ಬ್ರಹ್ಮ, ಪ್ರಜ್ಞಾನಮಾನಂದಂ ಬ್ರಹ್ಮ. ಶಾಂತಂ ಶಿವಂ ಅದ್ವೈತಂ ತತ್ತ್ವಮಸಿ, ನೇಹ ನಾನಾಸ್ತಿ ಕಿಂಚನ, ಮೃತ್ಯೋಃ ಸ ಮೃತ್ಯುಮಾಪ್ನೋತಿ, ಯ ಇಹ ನಾನೇವ ಪಶ್ಯತಿ, ನೇತಿ ನೇತಿ, ಅಯಮಾತ್ಮಾ ಬ್ರಹ್ಮ. ಯತ್ ಸಾಕ್ಷಾದಪರೋಕ್ಷಾದ್ಬ್ರಹ್ಮ, ನ ಜಾಯತೇ ಮ್ರಿಯತೇ ಯವಾ ಕದಾಚಿತ್, ಏಕಮೇವಾದ್ವಿತೀಯಂ. ಇತ್ಯಾದಿ ಶ್ರುತಿಸಹಸ್ರಗಳಲ್ಲಿ ನಿರೂಪಿಸಿರುವಂತೆ, ಪರಿಪೂರ್ಣವೂ, ಅಸಂಗವೂ, ನಿತ್ಯಶುದ್ಧಬುದ್ಧಮುಕ್ತ ಸ್ವರೂಪವೂ, ನಿಷ್ಕಲವೂ, ನಿಷ್ಕ್ರಿಯವೂ, ನಿರ್ಗುಣವೂ, ನಿರವಯವವೂ, ಸತ್ಯವೂ ಪರಮಾನಂದ ಸ್ವರೂಪವೂ, ಅದ್ವಿತೀಯವೂ ಆದ " ಪರಬ್ರಹ್ಮ " ವಸ್ತು ಒಂದುಂಟು.

ಅವ್ಯಕ್ತ ಶಕ್ತಿ ಮತ್ತು ಅದರ ಸ್ವರೂಪ

ಮಣ್ಣಿನಲ್ಲಿ ಮಡಿಕೆ ಆಗುವ ಶಕ್ತಿ ಇರುವಂತೆ, ಪರಬ್ರಹ್ಮವಸ್ತುವಿನಲ್ಲಿ ಒಂದು " ಅವ್ಯಕ್ತಶಕ್ತಿ " ಇದೆ. ಅದು ಪರಬ್ರಹ್ಮವನ್ನು ಅನಾದಿಯಾಗಿ ಆಶ್ರಯಿಸಿದೆ. ಆವರಣ ವಿಕ್ಷೇಪ ಶಕ್ತಿಗಳಿಂದ ಕೂಡಿದ, ಕಾಲಕ್ಕೂ ಮನಸ್ಸಿಗೂ ದೂರವಾದ, ಅನಾದಿಭಾವರೂಪದಿಂದ ತೋರಿಕೊಳ್ಳುವ, ಸತ್ವರಜಸ್ತಮೋಗುಣಾತ್ಮಕವಾದ. ಆ ಅವ್ಯಕ್ತ ಶಕ್ತಿಯನ್ನು ಪರಬ್ರಹ್ಮವೆಂದಾಗಲಿ, ಅದಕ್ಕಿಂತ ಬೇರೆಯೆಂದಾಗಲಿ ನಿರ್ಣಯಿಸಲು ಸಾಧ್ಯವಿಲ್ಲ. ಇದನ್ನು ಶ್ರುತಿಯಲ್ಲಿ 'ತೇ ಧ್ಯಾನಯೋಗಾನುಗತಾ ಅಪಶ್ಯನ್ ' ' ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ ' ಎಂಬಲ್ಲಿ ' ದೇವಾತ್ಮಶಕ್ತಿ ' ಎಂದಿದೆ ಮತ್ತು ಆ ಶಕ್ತಿಯು ತನ್ನ ಸತ್ವರಜಸ್ತಮೋಗುಣಗಳಿಂದ ಗೂಢವಾಗಿದೆ ಎಂದು ಹೇಳಿದೆ.

ಬ್ರಹ್ಮಸೂತ್ರ ಭಾಷ್ಯದಲ್ಲಿ ಇದನ್ನು ' ಪಾರಮೇಶ್ವರ್ಯಾ ಶಕ್ತೇಃ ಸಮಸ್ತಜಗದ್ವಿಧಾಯಿನ್ಯಾ ವಾಕ್ಯೋಪಕ್ರಮೇಽವಗಮಾತ್ ' ಎಂದಿದೆ

ಲಲಿತಾ ಸಹಸ್ರನಾಮದಲ್ಲಿ ಈ ಶಕ್ತಿಯನ್ನು ' ಈಶ ಶಕ್ತಯೇ ನಮಃ ' ಎಂದಿದೆ.

ಗೀತಾಭಾಷ್ಯ ಪ್ರಾರಂಭದಲ್ಲಿ ಶ್ರೀಮಚ್ಛಂಕರರು ಇದನ್ನು ' ಸ ಚ ಭಗವಾನ್ ತ್ರಿಗುಣಾತ್ಮಿಕಾಂ ಸ್ವಾಂ ಮಾಯಾಂ ಮೂಲಪ್ರಕೃತಿಂ ವಶೀಕೃತ್ಯ ' ಎಂದು ಹೇಳುವಲ್ಲಿ ಈ ಶಕ್ತಿಯನ್ನು ' ಮೂಲಪ್ರಕೃತಿ ' ಎಂದಿದ್ದಾರೆ.

ವಿವೇಕ ಚೂಡಾಮಣಿ ಎಂಬ ಗ್ರಂಥದಲ್ಲಿ ಇದನ್ನು 'ಅವ್ಯಕ್ತನಾಮ್ನೀ ಪರಮೇಶಶಕ್ತಿರನಾದ್ಯವಿದ್ಯಾ ತ್ರಿಗುಣಾತ್ಮಿಕಾ ಪರಾ ;॥ ಎಂದು ಹೇಳಿದೆ.

ಪ್ರಳಯಕಾಲದಲ್ಲಿ ಕೂಡ ಈ ಶಕ್ತಿಯೊಂದು ಬೀಜರೂಪವಾಗಿ ಉಳಿಯುವುದೆಂದೂ ಪುನಃ ಈ ಶಕ್ತಿಯಿಂದಲೇ ಜಗತ್ತಿನ ಸೃಷ್ಟಿಯಾಗುವುದೆಂದೂ, 'ಪ್ರಲೀಯಮಾನಂ ಚೇದಂ ಜಗತ್ ಶಕ್ತ್ಯವಶೇಷಮೇವ ಪ್ರಲೀಯತೇ ಶಕ್ತಿಮೂಲಮೇವ ಚ ಪ್ರಭವತಿ " ಎಂದು ಹೇಳಿದ್ದಾರೆ.

" ನಹಿ ತಯಾ ವಿನಾ ಪರಮೇಶ್ವರಸ್ಯ ಸ್ರಷ್ಟುತ್ವಂ ಸಂಭವತಿ, ಶಕ್ತಿರಹಿತಸ್ಯ, ತಸ್ಯ ಪ್ರವೃತ್ತ್ಯನುಪಪತ್ತೇಃ ಎಂಬಂತೆ ನಿರವಯವ, ನಿರ್ಗುಣ, ನಿಷ್ಕ್ರಿಯವಾದ ಬ್ರಹ್ಮವಸ್ತುವಿಗೆ ಈ ಅವ್ಯಕ್ತಶಕ್ತಿಯ ಜೊತೆಯಿಲ್ಲದಿದ್ದರೆ ಪ್ರಪಂಚ ಸೃಷ್ಟ್ಯಾದಿಗಳಲ್ಲಿ ಪ್ರವೃತ್ತಿಯೇ ಸಂಭವಿಸುತ್ತಿರಲಿಲ್ಲ.

" ಸಚ್ಚೇತ್ ನ ಬಾಧ್ಯೇ ಚ ।
ಅಸಚ್ಚೇತ್ ಬಾಧ್ಯೇ ಚ ।
ಪ್ರತೀಯತೇ ಚ ಬಾಧ್ಯತೇ ಚ ।
ಅತ ಏವ ಅನಿರ್ವಚನೀಯಂ ॥ ಎಂದು ಹೇಳಿರುವಂತೆ ಈ ಅವ್ಯಕ್ತ ಶಕ್ತಿಯು ನಾನಾರೂಪವಾಗಿಯೂ, ವ್ಯಾಕೃತವಾಗಿಯೂ ಅಂದರೆ ಬಿಡಿಬಿಡಿಯಾಗಿಯೂ ಕಾಣುವ ಜಗತ್ತು ಸೃಷ್ಟಿಯಾಗುವ ಪೂರ್ವದಲ್ಲಿ, ಅವ್ಯಾಕೃತವಾಗಿದ್ದು ತೋರದೇ ಇದ್ದುದರಿಂದ, ಇದನ್ನು 'ಸತ್' ಎಂಬುದಾಗಿ ಹೇಳಲಾಗುವುದಿಲ್ಲ. ಸೃಷ್ಟಿಯ ನಂತರ ಕಾರ್ಯರೂಪದಲ್ಲಿ ತೋರುವುದರಿಂದ 'ಅಸತ್' ಎಂದೂ ಹೇಳಲಾಗುವುದಿಲ್ಲ. ಸತ್ ಅಸತ್‌ಗಳು ಒಂದಕ್ಕೊಂದು ವಿರುದ್ಧವಾಗಿರುವುದರಿಂದ 'ಸದಸತ್' ಎಂದೂ ಹೇಳಲಾಗುವುದಿಲ್ಲ.

ಇದೇ ಅಭಿಪ್ರಾಯವನ್ನೇ ಶ್ರೀಮಚ್ಛಂಕರರು 'ವಿವೇಕಚೂಡಾಮಣಿ' ಎಂಬ ತಮ್ಮ ಗ್ರಂಥದಲ್ಲಿ

" ಸನ್ನಾಪ್ಯಸನ್ನಾಪ್ಯುಭಯಾತ್ಮಿಕಾ ನೋ ।
ಭಿನ್ನಾಪ್ಯಭಿನ್ನಾಪ್ಯುಭಯಾತ್ಮಿಕಾ ನೋ ।
ಸಂಗಾಪ್ಯಸಂಗಾಪ್ಯುಭಯಾತ್ಮಿಕಾ ನೋ ।
ಮಹಾದ್ಭುತಾನಿರ್ವಚನೀಯರೂಪಾ ॥

ಅಂದರೆ, ಈ ಅವ್ಯಕ್ತಶಕ್ತಿಯು 'ಸತ್' ಎನ್ನುವುದಾಗಿಯೂ ಇಲ್ಲ. ಅಸತ್ ಎನ್ನುವದಾಗಿಯೂ ಇಲ್ಲ. ಬ್ರಹ್ಮಕ್ಕಿಂತ ಭಿನ್ನವೆಂದೂ ಹೇಳುವಹಾಗಿಲ್ಲ, ಅಭಿನ್ನವೆಂದೂ ಹೇಳುವಹಾಗಿಲ್ಲ. ಸಾವಯವವೂ ಅಲ್ಲ ನಿರವಯವವೂ ಅಲ್ಲ ಇದನ್ನು ಹೀಗೆಂದು ನಿಶ್ಚಯಿಸಲು ಸಾಧ್ಯವಿಲ್ಲವಾಗಿ ಇದು ಆಶ್ಚರ್ಯಕರವಾದ, ಅಘಟಿತ

ಘಟನಾ ಪಟೀಯಸೀ ಎನಿಸಿಕೊಳ್ಳುವ ಅನಿರ್ವಚನೀಯವಾಗಿದೆ. ಎಂದಿದ್ದಾರೆ. ಅನಿರ್ವಚನೀಯವೆಂದರೆ, ಇದು ಹೀಗೆಯೇ ಸರಿ ಎಂದು ನಿರ್ಧರಿಸಲು ಆಗದೇ ಇರುವುದು ಎಂದರ್ಥ ಏಕೆಂದರೆ ಇದು ಬುದ್ಧಿಗೂ ಜನಕವಾಗಿ, ಆ ಬುದ್ಧಿಗೂ ನಿಲುಕದ್ದಾಗಿರುವುದು.

ಇಂತಹ ಸತ್ಯವೂ ಅಲ್ಲದ, ಅಸತ್ಯವೂ ಅಲ್ಲದ ಅನಿರ್ವಚನೀಯಕ್ಕೆ 'ಮಿಥ್ಯೆ' ಎಂದು ಹೆಸರು. 'ಮಿಥ್ಯೆ' ಎಂದರೆ ಶಶಶೃಂಗದಂತೆ ಕೇವಲ ಸುಳ್ಳು ಎಂದರ್ಥವಲ್ಲ.

ಈ ಅವ್ಯಕ್ತ ಶಕ್ತಿಯು, ಸೃಷ್ಟಿಗೆ ಪೂರ್ವದಲ್ಲಿ ಸತ್ವರಜಸ್ತಮೋ ಗುಣೋಪೇತವಾಗಿ, ಈ ಮೂರು ಗುಣಗಳ ಸಮಾನಾವಸ್ಥೆಯಲ್ಲಿ ಕಾರ್ಯೋನ್ಮುಖ ವಾಗದೇ ಇದ್ದಿತು

ಪ್ರಾಣಿಗಳ ಅನಾದಿಯಾದ ಪುಣ್ಯ ಪಾಪ ಕರ್ಮಗಳ ಫಲೋನ್ಮುಖತೆ ಯಿಂದ ಈ ಅವ್ಯಕ್ತ ಶಕ್ತಿಯು ತನ್ನ ಸ್ವಾಭಾವಿಕವಾದ ಸಮಾನಾವಸ್ಥೆಯನ್ನು ಬಿಟ್ಟು ಮೂರು ಭಾಗಗಳಾಯಿತು.

1) ಶುದ್ಧ ಸತ್ವ ಪ್ರಧಾನ ಮಾಯೆ.
2) ಮಲಿನ ಸತ್ವ ಪ್ರಧಾನ ಅವಿದ್ಯೆ
3) ತಮಃ ಪ್ರಧಾನ ತಾಮಸೀ

ಈ ಅವ್ಯಕ್ತ ಶಕ್ತಿಯೇ ತನ್ನ ಆವರಣ ವಿಕ್ಷೇಪ ಶಕ್ತಿಗಳಿಂದ ಕೂಡಿ, ಮಾಯೆ, ಮತ್ತು ಅವಿದ್ಯೆಗಳಲ್ಲಿ ಪ್ರಕಟವಾಯಿತು.

ಬ್ರಹ್ಮವು ಈಶ್ವರನೆನಿಸಿದುದು

ಶುದ್ಧ ಚೈತನ್ಯವಾದ ಬ್ರಹ್ಮವು ಶುದ್ಧ ಸತ್ವಗುಣ ಪ್ರಧಾನವಾದ ಮತ್ತು ಸ್ವಚ್ಛವಾದ ಮಾಯೆಯಲ್ಲಿ ಪ್ರತಿಬಿಂಬಿಸಿ ಆ ಮಾಯೆಯ ಆವರಣಶಕ್ತಿಯೊಡನೆ ಸಂಬಂಧಹೊಂದಿ 'ಈಶ್ವರ' ನೆನಿಸಿಕೊಂಡಿತು. ಸ್ವಚ್ಛವಾದ ಮಾಯೆಯಲ್ಲಿ ಪ್ರತಿಬಿಂಬಿ ಸಿದ್ದರಿಂದ ಈಶ್ವರನಿಗೆ ಸ್ವಸ್ವರೂಪ ತಿರೋಹಿತವಾಗಲಿಲ್ಲ. ಅಲ್ಲದೆ ಆ ಮಾಯೆಯು ಈಶ್ವರನಿಗೆ ಅಧೀನವಾಯಿತು. ಮತ್ತು ಅದರ ವಿಕ್ಷೇಪಶಕ್ತಿಯಿಂದ ಈಶ್ವರನು ಜಗತ್ತಿನ ಸೃಷ್ಟಿಗೆ ಕಾರಣನಾದನು.

ಬ್ರಹ್ಮವು ಜೀವನೆನಿಸಿದುದು.

ಪ್ರಾಣಿಗಳ ಅನಾದಿ ಪುಣ್ಯ ಪಾಪ ಕರ್ಮಗಳ ನಿಮಿತ್ತ, ಅವಿದ್ಯೆಯು ಅನೇಕ ಸೂಕ್ಷ್ಮಶರೀರಗಳಾಗಿ [ಸೂಕ್ಷ್ಮ ಶರೀರವೆಂದರೆ. 1) ಪಂಚಜ್ಞಾನೇಂದ್ರಿಯ 2) ಪಂಚಕರ್ಮೇಂದ್ರಿಯ 3) ಪಂಚಪ್ರಾಣ 4) ಬುದ್ಧಿ] ಮಾರ್ಪಟ್ಟಿತು

ಪ್ರತಿಯೊಂದು ಸೂಕ್ಷ್ಮ ಶರೀರದಲ್ಲೂ, ಪ್ರಧಾನವೂ, ಪ್ರಕಾಶಾತ್ಮಕವೂ, ಪ್ರಾಣಿಗಳ ಅನಾದಿಕರ್ಮ ಸಂಸ್ಕಾರಗಳಿಂದ ಕೂಡಿದುದೂ ಆದ ಬುದ್ಧಿಯನ್ನು, ತನ್ನ ಒಂದೊಂದು ಆವರಣ ವಿಕ್ಷೇಪ ಶಕ್ತಿಗಳಿಂದ ಹೊಂದಿಕೊಂಡಿತು. ಮಾಯಾವಿಶಿಷ್ಟಶುದ್ಧ ಚೈತನ್ಯನಾದ ಈಶ್ವರನು, ಪ್ರತಿಯೊಂದು ಬುದ್ಧಿಯಲ್ಲಿಯೂ, ಪ್ರವೇಶಮಾಡಿ ಅಲ್ಲಿ ಪ್ರಾಣಿಗಳ ಕರ್ಮಾನುಸಾರ ಫಲಕೊಡಲು, ಆ ಬುದ್ಧಿವೃತ್ತಿಗಳಾದ, ದೃಷ್ಟಿ, ಶ್ರವಣ, ಮನನ, ವಿಜ್ಞಾನಗಳಲ್ಲಿ, ಉಪಲಬ್ಧಮಾನನಾಗಿ, ಆ ಬುದ್ಧಿಗಳಿಗೆ ಪ್ರೇರಕನಾದನು.

ಈ ವಿಷಯದಲ್ಲಿ ಶ್ರೀಮಚ್ಛಂಕರರು 'ತದೇವಾನುಪ್ರಾವಿಶತ್' ಎಂಬ ತೈತ್ತಿರೀಯಶ್ರುತಿಗೆ ಅರ್ಥಮಾಡುವಾಗ 'ಅನ್ತರ್ಗುಹಾಯಾಂ ಬುದ್ಧೌ ದ್ರಷ್ಟೃ ಶ್ರೋತೃ ಮನ್ತೃ ವಿಜ್ಞಾತೃ ಇತ್ಯೇವಂ ವಿಶೇಷವದುಪಲಭ್ಯತೇ' ಎಂದು ಹೇಳಿದ್ದಾರೆ.

ಅಲ್ಲದೆ, ಜಡಗಳಾದ ಆ ಬುದ್ಧ್ಯಾದಿಗಳಲ್ಲಿ ಕರ್ತೃತ್ವ ಭೋಕ್ತೃತ್ವರೂಪ ಪ್ರವೃತ್ತಿಯುಂಟಾಗಲು, ಈಶ್ವರನು ತಾನೇ ಆ ಬುದ್ಧಿಯಲ್ಲಿ ಪ್ರತಿಬಿಂಬಿಸಿದನು.

ಆ ಈಶ್ವರನು ಬುದ್ಧಿಯಲ್ಲಿ ಪ್ರತಿಬಿಂಬಿಸಿದ ಫಲವಾಗಿ, ತಾನು ಬಿಂಬಸ್ಥಾನದಲ್ಲಿ "ಕೂಟಸ್ಥ"ನೆನಿಸಿದನು. ಅವನೇ "ಆತ್ಮ"ನೆಂಬುವವನು ಮತ್ತು ತಾನೇ ಪ್ರತಿಬಿಂಬಸ್ಥಾನದಲ್ಲಿ 'ಚಿದಾಭಾಸ' ನೆನಿಸಿದನು.

ಈ ಚಿದಾಭಾಸನು, ಬುದ್ಧಿಯನ್ನು ಆವರಿಸಿರುವ ಅವಿದ್ಯೆಯ 'ಆವರಣ' 'ವಿಕ್ಷೇಪ' ಶಕ್ತಿಗಳ ಹಿಡಿತಕ್ಕೆ ಸಿಕ್ಕಿದನು. ತನ್ನ ಸ್ವಸ್ವರೂಪವಾದ ಕೂಟಸ್ಥರೂಪವನ್ನು ಆವರಣ ಶಕ್ತಿಯ ಪ್ರಭಾವದಿಂದ ಮರೆತನು. ವಿಕ್ಷೇಪಶಕ್ತಿಯ ಪ್ರಭಾವದಿಂದ ತಾನೇ ಬುದ್ಧಿಯೆಂದೂ, ತಾನೇ ಶರೀರವೆಂದೂ ಅಭಿಮಾನಿಸಿ, ಬುದ್ಧಿಯಲ್ಲಿ ಮನೆ ಮಾಡಿದ ಅನಾದಿಕರ್ಮ ಸಂಸ್ಕಾರಗಳ ಫಲಭೋಕ್ತೃವು ತಾನೇ ಆದನು. ಹೀಗೆ, ಅಹಂಕಾರ ಮಮಕಾರಗಳಿಂದಕೂಡಿ, ಶರೀರದಲ್ಲಿ 'ಅಹಮಹಂ' (ನಾನು, ನಾನು) ಎಂಬ ಅನುಭವವೇದ್ಯನಾಗಿ, ಶರೀರಾದಿ ಧರ್ಮಗಳನ್ನು ತನ್ನದೆಂದು ಭ್ರಾಂತಿಯಿಂದ ತಿಳಿದು, ತಾನು ಅಲ್ಪಜ್ಞ, ನಿಯಮ್ಯ ಪರತಂತ್ರ ಸುಖಿ ದುಃಖಿ ಎಂದುಕೊಂಡು ಸಂಸಾರದಲ್ಲಿ ತೊಳಲುವವನಾಗಿ, 'ಜೀವಾತ್ಮ'ನೆನಿಸಿದನು.

ಬುದ್ಧಿಯೆಂಬ ಉಪಾಧಿಯ ಸಂಬಂಧದಿಂದ ಪರಿಕಲ್ಪಿತನಾದ ಚಿದಾಭಾಸ ಸ್ವರೂಪಕ್ಕಿಂತ ಬೇರೆಯಾದ ಜೀವಾತ್ಮನೇ ಇಲ್ಲ. ಬಿಂಬರೂಪಕೂಟಸ್ಥ ಚೈತನ್ಯ,

ಪ್ರತಿಬಿಂಬರೂಪ ಚಿದಾಭಾಸ, ಬುದ್ಧಿ, ಇವುಗಳ ಸಮುದಾಯದಿಂದ ಜೀವರೂಪ ಉಂಟಾಯಿತು.

ಬುದ್ಧಿಗೂ ಜೀವರೂಪಕ್ಕೂ ಇರುವ ಸಂಬಂಧವು ಮಹತ್ತರವಾದುದು. ಈ ವಿಷಯದಲ್ಲಿ ಸೂತ್ರಭಾಷ್ಯವು ಹೀಗೆ ಹೇಳಿದೆ:—

ಯಾವದೇವ ಚ ಅಯಂ ಬುದ್ಧ್ಯುಪಾಧಿಸಂಬಂಧಃ

ತಾವತ್ ಜೀವಸ್ಯ ಜೀವತ್ವಂ ಸಂಸಾರಿತ್ವಂಚ ।

ಪರಮಾರ್ಥತಸ್ತು ನ ಜೀವೋ ನಾಮ ಬುದ್ಧ್ಯುಪಾಧಿಪರಿಕಲ್ಪಿತ

ಸ್ವರೂಪ ವ್ಯತಿರೇಕೇಣ ಅಸ್ತಿ। ನಹಿ ನಿತ್ಯಮುಕ್ತ ಸ್ವರೂಪಾತ್

ಸರ್ವಜ್ಞಾತ್ ಈಶ್ವರಾತ್ ಅನ್ಯಃ ಚೇತನೋ ಧಾತುಃ

ದ್ವಿತೀಯಃ ವೇದಾಂತಾರ್ಥನಿರೂಪಣಾಯಾಂ ಉಪಲಭ್ಯತೇ ।

"ನಾನ್ಯೋಽತೋಽಸ್ತಿ ದ್ರಷ್ಟಾ ಶ್ರೋತಾ ಮಂತಾ ವಿಜ್ಞಾತಾ॥"

ಅಂದರೆ, ಎಲ್ಲಿಯ ವರಿಗೆ ಬುದ್ಧ್ಯುಪಾಧಿ ಸಂಬಂಧವಿರುವುದೋ ಅಲ್ಲಿಯ ವರಿಗೆ ಜೀವನಿಗೆ ಜೀವತ್ವ ಮತ್ತು ಸಂಸಾರಿತ್ವ. ಈ ಉಪಾಧಿಸಂಬಂಧದಿಂದ ಕಲ್ಪಿತವಾದ ಸ್ವರೂಪಕ್ಕೆ ಬೇರೆಯಾಗಿ ಜೀವನಿಲ್ಲ. ಸರ್ವಜ್ಞನೂ, ನಿತ್ಯಮುಕ್ತನೂ ಆಗಿರುವ ಈಶ್ವರನನ್ನು ಬಿಟ್ಟರೆ, ಬೇರೆ ದ್ವಿತೀಯ ಚೇತನವಸ್ತುವೇ ಇಲ್ಲ ಎಂಬುದು ವೇದಾಂತದ ನಿಶ್ಚಿತಾರ್ಥವಾಗಿದೆ, ಎಂದು ಹೇಳಿದೆ.

ನಾವು ಕನ್ನಡಿಯಲ್ಲಿ ನಮ್ಮ ಮುಖವನ್ನು ನೋಡುತ್ತಿರುವಾಗ ನಮ್ಮ ಮುಖದ ಪ್ರತಿಬಿಂಬವು ಕನ್ನಡಿಯಲ್ಲಿ ಕಾಣುತ್ತಿರುವುದು. ಕನ್ನಡಿಯನ್ನು ತೆಗೆದು ಬಿಟ್ಟರೆ, ಆ ಪ್ರತಿಬಿಂಬವು ಬಿಂಬವಾದ ನಮ್ಮ ಮುಖದಲ್ಲೇ ಸೇರಿಬಿಡುವುದು ಹಾಗೆಯೇ ಮಾಯಾವಿಶಿಷ್ಟ ಶುದ್ಧಚೈತನ್ಯದ (ಕೂಟಸ್ಥನ) ಪ್ರತಿಬಿಂಬವು ಬುದ್ಧ್ಯುಪಾಧಿ ಇರುವ ಪರ್ಯಂತ ಚಿದಾಭಾಸ ಜೀವಾತ್ಮನಾಗಿ ತೋರುತ್ತಿರುವುದು. ಆ ಉಪಾಧಿಯು, ಆತ್ಮಸಾಕ್ಷಾತ್ಕಾರದಿಂದ ಬಿಟ್ಟುಹೋಯಿತೆಂದರೆ, ಚಿದಾಭಾಸ ಜೀವಾತ್ಮನೇ ಕೂಟಸ್ಥ ಅಂದರೆ ಮಾಯಾವಿಶಿಷ್ಟ ಶುದ್ಧ ಚೈತನ್ಯನಾದ ಈಶ್ವರನೆನಿಸುವನು. ಅವನು "ಯೋ ಬುದ್ಧೇಃ ಪರತಸ್ತು ಸಃ" ಎಂಬ ಶ್ರುತಿಯಂತೆ, ಬುದ್ಧಿಯಿಂದ ಆಚೆ ಇರುವನು.

"ತಸ್ಯ ಭಾಸಾ ಸರ್ವಮಿದಂ-ವಿಭಾತಿ" ಎಂಬ ಶ್ರುತಿಯಂತೆ, ಹೇಗೆ ಅಗ್ನಿಯ ಸಂಬಂಧದಿಂದ, ಕಾಷ್ಠಗಳು ಅಗ್ನಿಯ ರೂಪವನ್ನು ಪಡೆದು ಅಗ್ನಿಯಂತೆಯೇ ಇತರ ಪದಾರ್ಥಗಳನ್ನು ದಹಿಸುವುವೋ ಹಾಗೆ. ಚಿದಾಭಾಸ ಪ್ರತಿಬಿಂಬವು ಮಾಯಾವಿಶಿಷ್ಟ ಶುದ್ಧ ಚೈತನ್ಯನಾದ 'ಕೂಟಸ್ಥ' ಈಶ್ವರನನ್ನು ಆಶ್ರಯಿಸಿ,

ಸಂಬಂಧಗೊಂಡು ಇರುವುದರಿಂದ, ಈಶ್ವರನಂತೆ ಚೇತನತ್ವವನ್ನು ಪಡೆದು, ನನ್ನ ಬುದ್ಧಿ, ನನ್ನ ದೇಹ ಎಂದು ತಿಳಿಯುವ ಜ್ಞಾನವನ್ನು ಸಂಪಾದನೆಮಾಡಿ, ಜೀವಾತ್ಮನೆಂಬ ವ್ಯವಹಾರವನ್ನು ಪಡೆಯಿತು. ಆತ್ಮನಾದ ಕೂಟಸ್ಥನ ಸಂಬಂಧ ವಿಲ್ಲದಿದ್ದರೆ, ಬುದ್ಧಿ ಮತ್ತು ಚಿದಾಭಾಸರು, ಜಡಪದಾರ್ಥಗಳಾಗುತ್ತಿದ್ದವು.

ಜಗತ್ತಿನ ಸೃಷ್ಟಿ

ಶುದ್ಧಚೈತನ್ಯವು ಈಶ್ವರಭಾವದಿಂದ, ಮಾಯೆಯನ್ನು ತತ್ಸಂಬಂಧಿಗಳಾದ ಅವಿದ್ಯೆ ತಾಮಸಿಗಳನ್ನೂ ತನ್ನ ಅಧೀನದಲ್ಲಿಟ್ಟುಕೊಂಡು, ಸಗುಣಬ್ರಹ್ಮವೆನಿಸಿ, ಈಶ್ವರತ್ವ, ಅಂತರ್ಯಾಮಿತ್ವ, ಸತ್ಯಕಾಮತ್ವ, ಸರ್ವಜ್ಞತ್ವ, ಸರ್ವನಿಯಂತೃತ್ವ, ಜಗತ್ಕಾರಣತ್ವ, ಮುಂತಾದ ಕಲ್ಪಿತ ಗುಣಗಳಿಂದ ಕೂಡಿ. ಬ್ರಹ್ಮ ವಿಷ್ಣು, ರುದ್ರಾದಿರೂಪಗಳಿಂದ, ಪ್ರಾಣಿಗಳಿಗೆ ಅವುಗಳ ಅನಾದಿ ಸಂಸ್ಕಾರ ಧ್ಯಾನ ಮತ್ತು ಕರ್ಮಗಳಿಗೆ ತಕ್ಕಂತೆ ಫಲಕೊಡಲು, ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣವಾಯಿತು. ಈಶ್ವರನೆನಿಸಿದ ಶುದ್ಧ ಚೈತನ್ಯವನ್ನು ಶ್ರುತಿಗಳು, 'ಏಷಯೋನಿಸ್ಸರ್ವಸ್ಯ', 'ಏಷ ಸರ್ವೇಶ್ವರಃ', 'ಏಷೋಂತರ್ಯಾಮಿ,' ಎಂದು ಹೇಳಿವೆ

ಇದು, ತನ್ನ ಅಧೀನವಾದ ಮಾಯೆಯ ವಿಕ್ಷೇಪ ಶಕ್ತಿಯಿಂದ, ತಮೋಗುಣ ಪ್ರಧಾನವಾದ, ತಾಮಸಿಯನ್ನು, ನಾಮರೂಪ ಕ್ರಿಯಾತ್ಮಕವಾದ (ನಾಮವೆಂದರೆ ಶಬ್ದಪ್ರಪಂಚ; ರೂಪವೆಂದರೆ ಅರ್ಥ ಪ್ರಪಂಚ; ಕ್ರಿಯೆ ಎಂದರೆ ನಾಮರೂಪಗಳಿಗೆ ಕಾರಣವಾದ ಕರ್ಮ) ಜಗದಾಕಾರವಾಗಿ ಪರಿಣಾಮಗೊಳ್ಳುವಂತೆ ಮಾಡಿ, ಆ ತಾಮಸಿಯನ್ನು, ಮಡಕೆಗೆ ಮಣ್ಣು ಕಾರಣವಾದಂತೆ, ಜಗತ್ತಿಗೆ 'ಪರಿಣಾಮ್ಯುಪಾದಾನಕಾರಣ'ವನ್ನಾಗಿ ಮಾಡಿತು ಇದನ್ನೇ.

'ಜಗತೋಯದುಪಾದಾನಂ ಮಾಯಾಮಾದಾಯ ತಾಮಸೀಂ|
ನಿಮಿತ್ತಂಶುದ್ಧಸತ್ವಾಂತಾ ಮುಚ್ಯತೇ ಬ್ರಹ್ಮ ತದ್ಗಿರಾ|| ಎಂಬ 'ಪ್ರತ್ಯಕ್ತತ್ವ ವಿವೇಕ' ವಚನವು ಸಮರ್ಥಿಸುತ್ತದೆ.

'ಆಕಾಶಾದಿ ಪ್ರಪಂಚೋತ್ಪತ್ತಿಹೇತುಃ ವಿಕ್ಷೇಪಶಕ್ತಿಃ|| ಎಂಬ ವಚನವು ಮಾಯೆಯ ವಿಕ್ಷೇಪ ಶಕ್ತಿಗೆ ಜಗತ್ತಿನ ಉತ್ಪತ್ತಿಹೇತುತ್ವವನ್ನ ಪ್ರತಿಪಾದಿಸಿದೆ.

'ಸ ಈಕ್ಷತ ಲೋಕಾನ್ನು ಸೃಜತ' ಎಂಬ ಐತರೇಯಶ್ರುತಿಯಂತೆ, ಮಾಯಾವಿಶಿಷ್ಟಶುದ್ಧಚೈತನ್ಯವು (ಈಶ್ವರನು) ಜೀವರುಗಳ ಪರಿಪಕ್ವವಾದ ಕರ್ಮ ರೂಪನಿಮಿತ್ತ, ಜಗತ್ತನ್ನು ಸೃಷ್ಟಿಸಲು, ಕುಂಬಾರನು ಮಡಕೆಗೆ ಕಾರಣವಾದಂತೆ ನಿಮಿತ್ತಕಾರಣವಾಯಿತು.

"ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ," ಎಂಬ ಶ್ರುತಿಯಲ್ಲಿ, ಜೇಡರಹುಳುವು, ತಾನು ನೇಯುವ ಬಲೆಗೆ, ತಾನೇ ತಂತುವೂ, ತಾನೇ ನಿರ್ಮಾಪಕವೂ, ಆಗಿರುವುದೆಂದು ಹೇಳಿರುವಂತೆ ಮಾಯಾವಿಶಿಷ್ಟ ಚೈತನ್ಯನಾದ ಈಶ್ವರನು, ತನ್ನ ಅಧೀನದಲ್ಲಿರುವ, 'ತಾಮಸೀ' ಉಪಾಧಿಪ್ರಾಧಾನ್ಯೇನ, ಉಪಾದಾನ ಕಾರಣನೂ, 'ಈಕ್ಷಣ' ವೆಂಬ ತನ್ನ ಸ್ವಪ್ರಧಾನ್ಯೇನ, ನಿಮಿತ್ತಕಾರಣನೂ ಆದನು. ಹೀಗೆ ಎರಡು ಕಾರಣವುಳಗಿ, ತಾನು, ಅಭಿನ್ನ ನಿಮಿತ್ತೋಪಾದಾನಕಾರಣ ನೆನಿಸಿದನು.

ಮಾಯಾರಹಿತ, ನಿರ್ವಿಕಾರ ಶುದ್ಧಚೈತನ್ಯಕ್ಕೆ, ಜಗತ್ತಿನ ಉಪಾದಾನತ್ವವು ಸಂಭವಿಸದೇ ಇದ್ದರೂ, ಮಾಯಾವಿಶಿಷ್ಟವಾಗಿ ಸಂಭವಿಸಿತು ಈ ಉಪಾದಾನತ್ವವು, ಆರಂಭಕತ್ವ ರೂಪವಾಗಲೀ (ಹೊಸದಾಗಿ ಹುಟ್ಟುವುದಾಗಲೀ) ಅಥವಾ ಪರಿಣಾಮತ್ವ ರೂಪವಾಗಲೀ (ಒಂದು ಇನ್ನೊಂದಾಗಿ ಮಾರ್ಪಡುವುದು) ಆಗದೆ ವಿವರ್ತಾಧಿಷ್ಠಾನ ಕಾಲ್ಪನಿಕ ಆಧಾರವಾಯಿತು. ಹೀಗಾಗಿ, ಶುದ್ಧಚೈತನ್ಯವು (ನಿರ್ಗುಣ ಬ್ರಹ್ಮವು) ತನ್ನ ಚೈತನ್ಯಾಂಶವಾದ, ಅಸ್ತಿ, ಭಾತಿ, ಪ್ರಿಯ (ಸಚ್ಚಿದಾನಂದ) ಧರ್ಮಗಳಿಂದ, ಕಲ್ಪನೆಯ ಹಾವು ಹಗ್ಗದಲ್ಲಿ ಕಾಣುವಂತೆ, ಕಲ್ಪನಾ ಜಗತ್ತಿಗೆ ಅಧಿಷ್ಠಾನ (ಅಧಾರ) ವಾಗಿ, ಜಗತ್ತಿಗೆ ವಿವರ್ತೋಪಾದಾನ ಕಾರಣ ವಾಯಿತು.

ಬ್ರಹ್ಮಚೈತನ್ಯದ ಆಧಾರವಿಲ್ಲದಿದ್ದರೆ ಕಲ್ಪನೆಯ ಜಗತ್ತಿನ ಸ್ಥಿತಿಯೇ ಇರುತ್ತಿರಲಿಲ್ಲ.

ಬ್ರಹ್ಮಚೈತನ್ಯದ ಸದ್ರೂಪವೇ ಜಗತ್ತಿಗೆ ಆಧಾರ.

ಹಗ್ಗದಲ್ಲಿ ಕಲ್ಪಿತವಾದ ಸರ್ಪವು, ಹಗ್ಗದಲ್ಲಿಯೇ ಕಾಣಿಸಿಕೊಂಡು, ಹಗ್ಗದಲ್ಲಿಯೇ ಸ್ಥಿತಿಯನ್ನು ಪಡೆದು, ಆ ಹಗ್ಗದಲ್ಲಿಯೇ ಮರೆಯಾಗುವಂತೆ, ಜಗತ್ತು ಶುದ್ಧ ಚೈತನ್ಯಾಂಶದಲ್ಲಿಯೇ ಕಾಣಿಸಿಕೊಂಡು. ಸ್ವಲ್ಪಕಾಲತೋರಿ, ಆ ಶುದ್ಧ ಚೈತನ್ಯಾಂಶದಲ್ಲಿಯೇ ಲಯಹೊಂದುವುದು,

ಇದನ್ನೇ ಶ್ರುತಿಯು:—

'ಯತೋವಾ ಇಮಾನಿಭೂತಾನಿ ಜಾಯಂತೇ।
ಯೇನಜಾತಾನಿಜೀವಂತಿ-ಯತ್ಪ್ರಯಂತ್ಯಭಿಸಂವಿಶಂತಿ।

ಎಂದು ಹೇಳಿದೆ.

ಈ ಉತ್ಪತ್ತಿ, ಸ್ಥಿತಿಲಯ ಲಕ್ಷಣಗಳು ಶುದ್ಧಚೈತನ್ಯದಲ್ಲಿ ಆದರ "ಸ್ವರೂಪ"ಲಕ್ಷಣವಾಗಿರುವುದಿಲ್ಲ, ಮತ್ತೇನೆಂದರೆ, ಅಧಿಷ್ಠಾನ ಕಾಲದಲ್ಲಿ ಮಾತ್ರ ಇರುವುದಾಗಿ, ಶುದ್ಧಚೈತನ್ಯದ "ತಟಸ್ಥ" ಲಕ್ಷಣವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ

'ನೇಹ ನಾನಾಸ್ತಿ ಕಿಂಚನ', "ವಾಚಾ"ರಂಭಣಂ ವಿಕಾರೋ ನಾಮಧೇಯಂ' ಎಂದು ಮುಂತಾಗಿ ಶ್ರುತಿಗಳು ಹೇಳುವಂತೆ, ಜಗತ್ತು ಕಾಲ್ಪನಿಕವಾಗಿರುವುದು.

ಈ ಕಾಲ್ಪನಿಕ ಜಗತ್ತಿನ ಸೃಷ್ಟಿಗೆ:—

1) 'ತಾಮಸಿ'ಯು ಪರಿಣಾಮ್ಯುಪಾದಾನ ಕಾರಣವಾಯಿತು.

2) 'ಈಶ್ವರನು' ಉಪಾದಾನ ಕಾರಣನೂ, ನಿಮಿತ್ತ ಕಾರಣನೂ ಆಗಿ, ಒಟ್ಟಿನಲ್ಲಿ, "ಅಭಿನ್ನನಿಮಿತ್ತೋಪಾದಾನ ಕಾರಣ" ನೆನಿಸಿದನು.

3 ಶುದ್ಧಚೈತನ್ಯವು ವಿವರ್ತೋಪಾದಾನ ಕಾರಣವಾಯಿತು.

4) ಶುದ್ಧಸತ್ವಪ್ರಧಾನವಾದ ಮಾಯೆಯ ಆವರಣಶಕ್ತಿಯಿಂದ ಶುದ್ಧ ಚೈತನ್ಯವು ಈಶ್ವರನೆನಿಸಿಕೊಂಡಿತು.

5) ಅದೇ ಮಾಯೆಯ ವಿಕ್ಷೇಪಶಕ್ತಿಪ್ರಧಾನನಾಗಿ, ಈಶ್ವರನು ಜಗತ್ತನ್ನು ಸೃಷ್ಟಿಸಿದನು.

ಹೀಗೆ ಈಶ್ವರನು ತನ್ನ ಸಂಕಲ್ಪಮಾತ್ರದಿಂದ ತಾಮಸಿಯನ್ನು ಪರಿಣಾಮ್ಯುಪಾದಾನಕಾರಣವನ್ನಾಗಿ ಮಾಡಿಕೊಂಡು, ತಾನು ಅಭಿನ್ನನಿಮಿತ್ತೋಪಾದಾನ ಕಾರಣನಾಗಿ, ಶುದ್ಧಚೈತನ್ಯದ ಸದ್ರೂಪದ ಆಧಾರದ ಮೇಲೆ ಜಗತ್ತನ್ನು ಕಲ್ಪಿಸಿದನು. ಸಾಂಖ್ಯರು ಅಚೇತನನಾದ ಪ್ರಧಾನದಿಂದ ಜಗತ್ತು ಎನ್ನುವರು. ವೈಶೇಷಿಕರು, ಅಚೇತನವಾದ ಅಣುಗಳ ಸಂಯೋಗದಿಂದ ಜಗದುತ್ಪತ್ತಿಯನ್ನು ಹೇಳುವರು. ಇವು ಸರಿಯಲ್ಲ. ನಮ್ಮ ಲಕ್ಷ್ಯವನ್ನು ಅಚೇತನದಿಂದ ಹಿಂತಿರುಗಿಸುವ ಅಭಿಪ್ರಾಯದಿಂದ ಶ್ರುತಿಯು 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯ' ಎಂಬಲ್ಲಿ, ಸೃಷ್ಟಿಗೆ ಪೂರ್ವದಲ್ಲಿ, ಮಾಯಾವಿಶಿಷ್ಟಚೈತನ್ಯವಾದ ಈಶ್ವರನು ಬಹುವಾಗಬೇಕೆಂದು ಯೋಚಿಸಿದನು ಎಂದು 'ಈಕ್ಷಣ' ಶಬ್ದೇನ ಹೇಳಿದೆ.

ಅಚೇತನವು ತಾನು ಏನನ್ನು ಮಾಡಲೂ ಸಾಧ್ಯವಿಲ್ಲ. ಚೈತನ್ಯದ ಸಾನ್ನಿಧ್ಯವಿದ್ದರೇನೇ ಅದಕ್ಕೆ ಅದು ಸಾಧ್ಯ ನ ವ್ಯಾಸರು ಬ್ರಹ್ಮಸೂತ್ರದಲ್ಲಿ, ಪ್ರಧಾನವನ್ನು ಜಗತ್ಕಾರಣವೆನ್ನುವ ಸಾಂಖ್ಯ ಕಪಿಲ ಮತಗಳನ್ನು ಖಂಡಿಸಿ 1) 'ಸ್ವಪ್ಯಯಾತ್', 2 ಗತಿಸಾಮಾನ್ಯಾತ್, 3) ಶ್ರುತತ್ವಾಚ್ಚ, 4 ಸರ್ವಧರ್ಮೋಪಪತ್ತೇಶ್ಚ ಎಂಬ ಸೂತ್ರಗಳಿಂದ, ಮಾಯಿಕ ಧರ್ಮಗಳಿಂದ ಕೂಡಿದ ಬ್ರಹ್ಮಕ್ಕೆ ಜಗತ್ಕಾರಣ ಧರ್ಮಗಳು ಇರಬಹುದೆಂದು ಹೇಳಿ, ಮಾಯಾವಿಶಿಷ್ಟ ಶುದ್ಧಚೈತನ್ಯನಾದ ಈಶ್ವರನಲ್ಲಿ ಜಗತ್ಕಾರಣತ್ವವನ್ನು ಅಧ್ಯಾರೋಪ ಮಾಡಿರುವರು.

ಸ್ಥೂಲ ಮತ್ತು ಸೂಕ್ಷ್ಮ ಪಂಚಭೂತಗಳು

ಮಾಯಾವಿಶಿಷ್ಟ ಶುದ್ಧ ಚೈತನ್ಯದ ಸಂಕಲ್ಪದಿಂದ ತಮಃಪ್ರಧಾನ ಕಾಮ ಸಿಯು, ಸೂಕ್ಷ್ಮ ಪಂಚಭೂತಗಳೆನಿಸುವ, ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿಗಳಾಗಿ ಪರಿಣಮಿಸಿತು. ಇವಕ್ಕೆ 'ತನ್ಮಾತ್ರ'ಗಳೆಂದು ಹೆಸರು.

ಸೂಕ್ಷ್ಮಪಂಚಭೂತಗಳ, ಸತ್ವಗುಣಭಾಗಗಳ ಪ್ರತ್ಯೇಕಗಳಿಂದ, ಪಂಚ ಜ್ಞಾನೇಂದ್ರಿಯಗಳೂ, ರಜೋಗುಣ ಭಾಗಗಳ ಪ್ರತ್ಯೇಕಗಳಿಂದ ಪಂಚಕರ್ಮೇಂದ್ರಿಯಗಳೂ, ಸತ್ವಗುಣೋಪೇತವಾಗಿ ಒಟ್ಟುಗೂಡಿದ ಈ ಸೂಕ್ಷ್ಮ ಪಂಚಭೂತಗಳಿಂದ ಅಂತಃಕರಣವೂ ಉಂಟಾದುವು. ಈ ಅಂತಃಕರಣವೇ ಸಂಕಲ್ಪ, ನಿಶ್ಚಯ, ಅಭಿಮಾನ, ಸ್ಮರಣವೆಂಬ 4 ವೃತ್ತಿಭೇದಗಳಿಂದ ಕ್ರಮವಾಗಿ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಎನ್ನಿಸಿಕೊಂಡಿತು. ಅಂತಃಕರಣವು ಒಂದು ವೃತ್ತಿಭೇದವೆಂದು ತೆಗೆದುಕೊಂಡು ಕೆಲವರು ಅದಕ್ಕೆ 'ಸ್ಫುರಣ'ವೆಂಬ ವೃತ್ತಿಯನ್ನು ಹೇಳಿರುವರು. ಹೀಗಾದರೆ ಅಂತಃಕರಣವು ಪಂಚ ಅಂತಃಕರಣವೇ ಆಗುತ್ತದೆ.

ರಜೋಗುಣೋಪೇತವಾಗಿ ಈ ಸೂಕ್ಷ್ಮ ಪಂಚಭೂತಗಳಿಂದ ಪಂಚ ಪ್ರಾಣಗಳಾದುವು. ಅಪಂಚೀಕೃತ ಸೂಕ್ಷ್ಮ ಪಂಚಭೂತಗಳಿಂದ ಸ್ಥೂಲ ಪಂಚ ಮಹಾಭೂತಗಳಾದುವು. ಅವುಗಳ ಪರಸ್ಪರ ಸೇರುವಿಕೆಯಿಂದ 25 ತತ್ವಗಳಾದುವು.

5 ಆಕಾಶತತ್ವಗಳು	5 ವಾಯು ತತ್ವಗಳು	5 ತೇಜಃ ತತ್ವಗಳು	5 ಅಪ್ ತತ್ವಗಳು	5 ಪೃಥಿವೀ ತತ್ವಗಳು
ಕಾಮ	ಚಲನ	ಕ್ಷುಧಾ	ಶುಕ್ಲ	ಅಸ್ಥಿ
ಕ್ರೋಧ	ವಲನ	ತೃಷಾ	ಶೋಣಿತ	ಮಾಂಸ
ಶೋಕ	ಧಾವನ	ಆಲಸ್ಯ	ಲಾಲಾ	ತ್ವಚಾ
ಮೋಹ	ಪ್ರಸಾರಣ	ನಿದ್ರಾ	ಮೂತ್ರ	ನಾಡಿ
ಭಯ	ಆಕುಂಚನ	ಕಾಂತಿ	ಸ್ವೇದ	ರೋಮ

ಜೀವನಿಗೆ ಸ್ಥೂಲ ಸೂಕ್ಷ್ಮ ಕಾರಣಗಳೆಂಬ 3 ಶರೀರಗಳುಂಟು. ಮೇಲ್ಕಂಡ 25 ತತ್ವಗಳಿಂದ ಸ್ಥೂಲದೇಹವು ರೂಪುಗೊಂಡಿತು.

ಸ್ಥೂಲದೇಹ

ಇದು; ರೇತ, ರಕ್ತ, ಮಾಂಸ, ಮಜ್ಜಾ, ಮೇದ, ಅಸ್ಥಿ, ಚರ್ಮ ಎಂಬ ಸಪ್ತ ಧಾತುಮಯವಾಗಿಯೂ, ಜಾಯತೇ, ಅಸ್ತಿ. ವರ್ಧತೇ, ವಿಪರಿಣಮತೇ, ಅಪಕ್ಷೀಯತೇ ವಿನಶ್ಯತಿ ಎಂಬ ಷಡ್ಭಾವ ವಿಕಾರದಿಂದ ಕೂಡಿಯೂ, ಅಶುದ್ಧ, ಅಶೌಚ, ದುರ್ಗಂಧ, ಅಸ್ಥಿರ, ಸ್ಥೂಲ, ಖಂಡ, ದಗದ, ಶಿಥಿಲ, ನಾನಾರೋಗಗ್ರಸ್ತ, ಆಮಿಷ ಎಂಬ ದಶ ದೋಷಗಳಿಂದ ಕೂಡಿಯೂ, ಇರುವುದು. ಇದು ನಾವು ಮಾಡುವ ಪುಣ್ಯಪಾಪಫಲಭೋಗ ಸ್ಥಾನ. ಸ್ಥೂಲದೇಹವು ಪಂಚೀಕೃತ ಪಂಚ ಮಹಾಭೂತಗಳ ಕಾರ್ಯವಾಗಿದೆ. ಆದ್ದರಿಂದ ಅದು ಜಡವೂ, ಪರಿಣಾಮಹೊಂದು ವುದೂ ಆಗಿದೆ, ಮತ್ತು ವಿಕಾರಿಯಾಗಿ, ಅಸತ್ಯವಾಗಿದೆ ಈ ಸ್ಥೂಲದೇಹಾಭಿಮಾನಿಯಾಗಿ, 'ನಾನು', 'ನಾನು', ಎಂದು ಪ್ರತಿಪ್ರಾಣಿಯ ದೇಹದಲ್ಲೂ, ಅನುಭವಕ್ಕೆ ಬರುವವನು, 'ಜೀವ'ನೆಂದೂ, 'ಗೌಣಾತ್ಮ'ನೆಂದು ಹೇಳಿಸಿಕೊಳ್ಳುವನು. ಈ ಜೀವನು ಜಡವಾದ ದೇಹವಲ್ಲ. ಆ ಸ್ಥೂಲದೇಹವನ್ನು ತಿಳಿಯುವ 'ದ್ರಷ್ಟಾ' ಮಾತ್ರ. ಏಕೆಂದರೆ, ಅವನ ನಿಜವಾದ ಸ್ವರೂಪ ಕೂಟಸ್ಥ ಚೈತನ್ಯನೆನಿಸುವ ಆತ್ಮಾ. ಅವನನ್ನು 'ಸಾಕ್ಷೀ ಚೈತನ್ಯ'ನೆಂದೂ ಕರೆಯುವರು. ಈ ಸಾಕ್ಷೀ ಚೈತನ್ಯನು ನಿರ್ವಿಕಾರಿ ಮತ್ತು ಅಸಂಗ. ಬುದ್ಧ್ಯುಪಾಧಿಯಿಂದ ದೇಹಾಭಿಮಾನಿಯಂತೆ ತೋರುವನು.

"ಘಟದ್ರಷ್ಟಾ ಘಟಾದ್ಭಿನ್ನಃ ।
ಸರ್ವಥಾ ನ ಘಟೋ ಯಥಾ ।
ದೇಹದ್ರಷ್ಟಾ ತಥಾ ದೇಹೋ ।
ನಾಹಮಿತ್ಯವ ಧಾರ ಯೇತ್ ॥

ಎಂದು 'ವಾಕ್ಯವೃತ್ತಿ'ಯಲ್ಲಿ ಶ್ರೀಮಚ್ಛಂಕರರು ಹೇಳಿರುವಂತೆ, ಘಟವನ್ನು ನೋಡುವವನು, ಘಟದಿಂದ ಬೇರೆಯಾಗಿದ್ದು, ತಾನೆಂದಿಗೂ ಘಟವಾಗಲಾರನು. ಹಾಗೆಯೇ ದೇಹವನ್ನು ನೋಡುವಾಗ, ಆ ದೇಹವಲ್ಲಿರುವ 'ನಾನು' ಎಂಬ ಜೀವಾತ್ಮನು ಆ ದೇಹವಾಗುವುದಿಲ್ಲ.

ಮಾಧ್ಯಮಿಕ, ಚಾರ್ವಾಕ, ಲೋಕಾಯತರುಗಳು, ದೇಹವೇ 'ನಾನು' ಎನ್ನುವರು.

ಇವರ ಅಭಿಪ್ರಾಯದಂತೆ ದೇಹ ನಷ್ಟವಾದರೆ 'ನಾನು' ಎನ್ನುವ ಜೀವಾತ್ಮನು ನಷ್ಟವಾದಂತೆ.

ಹೀಗಲ್ಲವೆಂದು, ಶ್ರೀಕೃಷ್ಣನು ಭಗವದ್ಗೀತೆಯಲ್ಲಿ 'ನ ಹನ್ಯತೇ ಹನ್ಯಮಾನೇ ಶರೀರೇ' ಎಂಬಲ್ಲಿಯೂ ಶ್ರುತಿಯಲ್ಲಿ 'ನ ಜೀವೋ ಮ್ರಿಯತೇ ಅವಿನಾಶೀವಾ ಅರೆಯಮಾತ್ಮಾ ಎಂಬಲ್ಲಿಯೂ ಹೇಳಿದೆ.

ಈ ಸ್ಥೂಲದೇಹವನ್ನು ಅನ್ನಮಯಕೋಶ ಎನ್ನುವರು.

ತಾಯಿತಂದೆಗಳು ಊಟಮಾಡುವ ಅನ್ನದ ಪರಿಣಾಮವಾದ ರಕ್ತ ವೀರ್ಯಗಳ ಸಂಯೋಗದಿಂದ ಈ ಸ್ಥೂಲದೇಹವು ಉತ್ಪನ್ನವಾಗುವುದು. 'ದೇಹೋಯಮನ್ನಭವನಃ' ಎಂಬಂತೆ. ದೇಹವು ಅನ್ನದ ಮನೆಯಾಗಿದೆ.

'ಅನ್ನೇನ ಜೀವತಿ, ವಿನಶ್ಯತಿ ತದ್ವಿಹೀನಃ' ಎಂಬಂತೆ ಅನ್ನದಿಂದಲೇ ಇದು ಬದುಕುತ್ತದೆ. ಕೆಲವು ಕಾಲ ಅನ್ನದೊರೆಯದೇ ಹೋದರೆ. ನಾಶಹೊಂದುತ್ತದೆ.

ಇದನ್ನು ಕೋಶವೆನ್ನುವುದಕ್ಕೆ ಕಾರಣವೇನೆಂದರೆ. ದ್ರವ್ಯವನ್ನಿಡುವ ಭಂಡಾರವು ಹೇಗೆ ಕೋಶವೆನ್ನಿಸಿಕೊಳ್ಳುವುದೋ ಹಾಗೆ, ಅಮೂಲ್ಯನಿಧಿ ಎನಿಸುವ ಕೂಟಸ್ಥ ಆತ್ಮನನ್ನೊಳಗೊಂಡಿರುವ ಈ ದೇಹವು ಕೋಶವು.

ಸೂಕ್ಷ್ಮದೇಹ

ಅಪಂಚೀಕೃತ ಪಂಚಮಹಾಭೂತಗಳ 17 ತತ್ವಗಳಿಂದ ಸೂಕ್ಷ್ಮದೇಹವು ಉತ್ಪನ್ನವಾಗಿದೆ.

ಅವುಗಳು ಯಾವುವೆಂದರೆ :— ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಪ್ರಾಣಗಳು, ಮನಸ್ಸು, ಬುದ್ಧಿ.

ಮನಸ್ಸು ಬುದ್ಧಿಗಳನ್ನು ಒಂದೇ ತತ್ವವೆಂದು ಗ್ರಹಿಸಿದರೆ ತತ್ವಗಳು ಒಟ್ಟು 16. ಈ ಸೂಕ್ಷ್ಮಶರೀರವನ್ನು 'ಶರೀರಂ ಸಪ್ತದಶಭಿಃ ಸೂಕ್ಷ್ಮಂ ತಲ್ಲಿಂಗಮುಚ್ಯತೇ.' ಇತ್ಯಾದಿ ವಾಕ್ಯಗಳಿಂದ ಲಿಂಗಶರೀರವೆಂದೂ ಹೇಳುವರು

ಈ ಸೂಕ್ಷ್ಮಶರೀರವನ್ನು ಪುರ್ಯಷ್ಟಕರೂಪದಿಂದ ಹೇಳುವುದುಂಟು.

ಪುರ್ಯಷ್ಟಕ ಸ್ವರೂಪ

ವಾಗಾದಿಪಂಚ, ಶ್ರವಣಾದಿ ಪಂಚ,
ಪ್ರಾಣಾದಿ ಪಂಚಾಭ್ರಮುಖಾನಿ ಪಂಚ॥
ಬುದ್ಧ್ಯಾದ್ಯವಿದ್ಯಾಪಿಚ ಕಾಮಕರ್ಮಣಿ।
ಪುರ್ಯಷ್ಟಕಂ ಸೂಕ್ಷ್ಮಶರೀರಮಾಹುಃ ॥

ಎಂಬಂತೆ 1) ಪಂಚಕರ್ಮೇಂದ್ರಿಯಗಳು, 2) ಪಂಚಜ್ಞಾನೇಂದ್ರಿಯಗಳು, 3) ಪಂಚಪ್ರಾಣಗಳು, 4) ಪಂಚಸೂಕ್ಷ್ಮಭೂತಗಳು, 5) ಪಂಚ ಅಂತಃಕರಣಗಳು, 6) ಅವಿದ್ಯೆ, 7) ಕಾಮ 8) ಕರ್ಮ ಈ ಎಂಟೂ ಅಷ್ಟಪುರಿಗಳು ಈ ಪುರ್ಯಷ್ಟಕ ತತ್ವಗಳು 28. ಈ ಸೂಕ್ಷ್ಮಶರೀರವು ಭೋಗಾನುಭವಕ್ಕೆ ಸಾಧನ. ಇದು ಇಂದ್ರಿಯಕ್ಕೆ ಅಗೋಚರ. ಇದು ಮೋಕ್ಷಪರ್ಯಂತ

ಸೂಕ್ಷ್ಮ ಶರೀರದಲ್ಲಿ ಅಭಿಮಾನಿಸುವ ಪ್ರಾಣಿಯು ಬುದ್ಧಿ, ರಾಗ, ದ್ವೇಷ, ಪ್ರಯತ್ನ ಸಂಸಾರ, ಧರ್ಮ, ಅಧರ್ಮ, ಸುಖ, ದುಃಖ ಎಂದು ಹೇಳುವ ನವಗುಣಗಳಿಂದ ಗ್ರಸಿತನಾಗಿರುವನು.

ಸ್ಥೂಲ ಶರೀರವು ಪ್ರಾಣಿಗಳ ಪಾಪ ಪುಣ್ಯಗಳ ಭೋಗ ಸ್ಥಾನವಾಗಿಯೂ, ಸೂಕ್ಷ್ಮ ಶರೀರವು ಭೋಗ ಸಾಧನವಾಗಿಯೂ, ಚಿದಾಭಾಸ ಯುಕ್ತ ಬುದ್ಧಿಯು ಭೋಕ್ತೃವಾಗಿಯೂ, ವಿಷಯಗಳು ಬೋಧ್ಯವಾಗಿಯೂ ಇರುವುವು.

ಮೇಲ್ಕಂಡ ಪುರ್‍ಯಷ್ಟಕದಲ್ಲಿ ಹೇಳಿರುವ ಕರ್ಮೇಂದ್ರಿಯಾದಿ ಪಂಚಕಗಳನ್ನು ಅಧ್ಯಾತ್ಮ, ಅಧಿಭೂತ, ಅಧಿದೈವಗಳೆಂಬ ತ್ರಿಪುಟಿಗಳಾಗಿ ವಿಂಗಡಿಸಿ, ಆ ತ್ರಿಪುಟಿಗಳ ಕೂಡುವಿಕೆಯಿಂದ ಕ್ರಿಯೆಯು ಆಗುವುದನ್ನು ಈ ಕೆಳಗೆ ತಿಳಿಸಿದೆ.

ಕ್ರಿಯಾಜನಕಕ್ಕೆ ಉದಾಹರಣೆ : ಅಧ್ಯಾತ್ಮವೆನಿಸಿರುವ ವಾಕ್ ಇಂದ್ರಿಯವನ್ನು ತೆಗೆದುಕೊಳ್ಳೋಣ. ಈ ಅಧ್ಯಾತ್ಮ 'ವಾಕ್' ಅಧಿಭೂತವೆನಿಸುವ 'ವಚನ' ಅಧಿದೈವವೆನಿಸುವ 'ಅಗ್ನಿ' ಈ ತ್ರಿಪುಟಿ ಯೋಗದಿಂದ ಮಾತನಾಡುವ ಕ್ರಿಯೆ ಲಭಿಸುವುದು.

ಹೀಗೆ ಅಧ್ಯಾತ್ಮ, ಅಧಿಭೂತ, ಅಧಿದೈವವೆನಿಸುವ ಈ ಮೂರು ತ್ರಿಪುಟಿಗಳು ಕೂಡಿದುದೇ ಆದರೆ ಕಾರ್ಯ ನಡೆಯುವುದು. ಒಂದು ಕಡಿಮೆಯಾದರೂ ಕಾರ್ಯ ನಡೆಯುವುದಿಲ್ಲ.

ಸ್ಥೂಲ ದೇಹದೊಳಗೆ, ಆ ದೇಹದ ಚಲನವಲನಾದಿಗಳಿಗೆ ಕಾರಣವಾಗಿ ಸೂಕ್ಷ್ಮದೇಹವಿರುವುದು. ಚಕ್ಷುರಿಂದ್ರಿಯದಿಂದ ನೋಡುವಿಕೆ, ಶ್ರವಣೇಂದ್ರಿಯದಿಂದ ಕೇಳುವಿಕೆ, ಇವೇ ಮುಂತಾದ ವ್ಯವಹಾರಗಳು ಸೂಕ್ಷ್ಮದೇಹದ ಇಂದ್ರಿಯಗಳ ಸಹಾಯದಿಂದಲೇ ಆಗುವುವು. ಪ್ರಾಣವುಳ್ಳ ಸೂಕ್ಷ್ಮದೇಹದ ಮೂಲಕವೇ ಸ್ಥೂಲದೇಹ ಜೀವಿಸುತ್ತದೆ. ಸ್ಥೂಲ ದೇಹದಲ್ಲಿ ಸೂಕ್ಷ್ಮದೇಹವಿರುವವರೆಗೆ ಜಗತ್ತಿನ ಸಂಬಂಧವಿರುತ್ತದೆ. ನಾನು ಹಸಿದಿರುವೆ, ನಾನು ಸುಖಿ, ನಾನು ದುಃಖಿ ಇನೆಲ್ಲಾ ಅಹಂಪ್ರತ್ಯಯಗಳೂ ಸೂಕ್ಷ್ಮದೇಹದಲ್ಲಿ ಕಾಣುವುವು.

ಪಂಚೀಕರಣ

ಸ್ಥೂಲ ಭೂತಗಳು ನಿರ್ಮಾಣಗೊಳ್ಳುವ ರೀತಿಯನ್ನು ವಿವರಿಸುವ ಪಾರಿಭಾಷಿಕ ಶಬ್ದಕ್ಕೆ 'ಪಂಚೀಕರಣ' ವೆನ್ನಬಹುದು.

ಪಂಚ ಜ್ಞಾನೇಂದಿಯ			ಪಂಚ ಕರ್ಮೇಂದ್ರಿಯ			ಪಂಚ ಪ್ರಾಣ			ಪಂಚ ಅಂತಂಕರಣ			ಪಂಚ ವಿಷಯ		
ಅಧ್ಯಾತ್ಮ	ಅಧಿ ಭೂತ	ಅಧಿ ದೈವ	ಅಧ್ಯಾತ್ಮ	ಅಧಿ ಭೂತ	ಅಧಿ ದೈವ	ಅಧ್ಯಾತ್ಮ	ಅಧಿ ಭತೂ	ಅಧಿ ದೈವ	ಅಧ್ಯಾತ್ಮ	ಅಧಿ ಭೂತ	ಅಧಿ ದೈವ	ಅಧ್ಯಾತ್ಮ	ಅಧಿಭೂತ	ಅಧಿದೈವ
ಶ್ರೋತ್ರ	ಶಬ್ದ	ದಿಶಾ	ವಾಕ್	ವಚನ	ಅಗ್ನಿ	ಪ್ರಾಣ	ಪಂಕ್ತವ್ಯ	ವಿತಿಷ್ಟಕ	ಅಂತಃಕರಣ	ಸ್ಫುರಣ	ವಿಷ್ಣು	ಶಬ್ದ	ಶಬ್ದಯಿತವ್ಯ	ಆಕಾಶ
ತ್ವಕ್	ಸ್ಪರ್ಶ	ವಾಯು	ಪಾಣಿ	ಗ್ರಹಣ	ಇಂದ್ರ	ಅಪಾನ	ವಿಸರ್ಜನ	ವಿಶ್ವಕರ್ತ	ಮನ	ಸಂಕಲ್ಪ ವಿಕಲ್ಪ	ಚಂದ್ರ	ಸ್ಪರ್ಶ	ಸ್ಪರ್ಶಯಿತವ್ಯ	ವಾಯು
ಚಕ್ಷು	ರೂಪ	ಸೂರ್ಯ	ಪಾದ	ಗಮನ	ಉಪೇಂದ್ರ	ಸಮಾನ	ವ್ಯಾಪ್ತಿ	ಜಯ	ಬುದ್ಧಿ	ನಿಶ್ಚಯ	ಬ್ರಹ್ಮ	ರೂಪ	ದ್ರಷ್ಟವ್ಯ	ಅಗ್ನಿ
ಜಿಹ್ವಾ	ರಸ	ವರುಣ	ಶಿಶ್ನ	ಆನಂದ	ಪ್ರಜಾಪತಿ	ಉದಾನ	ಕರ್ತವ್ಯ	ಅಜ	ಚಿತ್ತ	ಚಿಂತನ	ಕ್ಷೇತ್ರಜ್ಞ ಜೀವ	ರಸ	ರಸಯಿತವ್ಯ	ಜಲ
ಘ್ರಾಣ	ಗಂಧ	ಅಶ್ವಿನಿ ಕುಮಾರ	ಗುದ	ವಿಸರ್ಜನ	ಯಮ	ವ್ಯಾನ	ಭೋಕ್ತವ್ಯ	ವಿಶ್ವ ಯೋನಿ	ಅಹಂಕಾರ	ಅಭಿಮಾನ	ರುದ್ರ	ಗಂಧ	ಘ್ರಾತವ್ಯ	ಪೃಥಿವಿ

'ಪಂಚಾನಾಂ ಭೂತಾನಾಮೇಕೈಕಂ ದ್ವಿಧಾ ವಿಭಜ್ಯ, ಸ್ವಾರ್ಧಭಾಗಂ ವಿಹಾಯಾರ್ಧಭಾಗಂ ಚತುರ್ಧಾ ವಿಭಜ್ಯೇತರೇಷು ಯೋಜತೇಂ ಪಂಚೀಕರಣಂ ಎಂದು ಹೇಳಿಸುವಂತೆ ಪಂಚ ಸೂಕ್ಷ್ಮ ಭೂತಗಳಲ್ಲಿ ಪ್ರತಿಯೊಂದನ್ನೂ ಸರಿಯಾಗಿ ಎರಡು ಭಾಗಮಾಡಿ, ಆ ಎರಡು ಭಾಗಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದು ಭಾಗವನ್ನು ತೆಗೆದುಕೊಂಡು, ಅದರಲ್ಲಿ ನಾಲ್ಕು ಸರಿಯಾದ ಭಾಗಮಾಡಿ, ಆ ನಾಲ್ಕು ಭಾಗಗಳಲ್ಲಿ ಒಂದೊಂದನ್ನು ಉಳಿದ ನಾಲ್ಕು ಭೂತಗಳಲ್ಲಿ ಒಂದೊಂದಕ್ಕೆ ಸೇರಿಸಿದರೆ, ಪಂಚೀಕರಣವಾಗಿ ಸ್ಥೂಲ ಪಂಚಭೂತಗಳಾಗುವುವು.

ಉದಾಹರಣೆ :— ಆಕಾಶ $\frac{1}{2}$ + ವಾಯು $\frac{1}{8}$ + ತೇಜಸ್ಸು $\frac{1}{8}$ + ಅಪ್ಪು $\frac{1}{8}$ + ಪೃಥಿವಿ $\frac{1}{8}$ = ಪಂಚೀಕೃತ ಸ್ಥೂಲ ಆಕಾಶ. ಹೀಗೇ ಉಳಿದ ಪಂಚೀಕೃತ ಸ್ಥೂಲಭೂತಗಳೂ ಆಗುವುವು.

ಈ ಪಂಚೀಕರಣ ಭೂತಗಳಿಂದಲೂ, ಮಾಯಾವಿಶಿಷ್ಟ ಶುದ್ಧ ಚೈತನ್ಯದ ವೀಕ್ಷಣೆಯಿಂದಲೂ, ಬ್ರಹ್ಮಾಂಡವೂ 14 ಲೋಕಗಳೂ, ಆ ಲೋಕಗಳಿಗೆ ಉಚಿತ ವಾದ, ಉದ್ಭಿಜ್ಜ, ಸ್ವೇದಜ, ಅಂಡಜ, ಜರಾಯುಜಗಳೆಂಬ ಭೂತಗ್ರಾಮಗಳೂ ಹುಟ್ಟಿದುವು.

ಪಂಚ ಕರ್ಮೇಂದ್ರಿಯಗಳು

ವಾಗಿಂದ್ರಿಯ : ಇದು, ನಾಲಿಗೆ, ತಾಲುಮೂಲ, ತುಟಿಗಳು ನಾಸಿಕ ಕಂಠ, ಹೃದಯ, ಎಂಬ ಎಂಟು ಸ್ಥಾನಗಳನ್ನು ಆಶ್ರಯಿಸಿದೆ.

ಪಾಣೀಂದ್ರಿಯ : ಬಿಡುವುದು, ಗ್ರಹಿಸುವುದು ಮುಂತಾದ ಕ್ರಿಯಾ ಕಾರಕವಾಗಿದೆ. ಇದು ಅಂಗೈಯನ್ನು ಆಶ್ರಯಿಸಿರುತ್ತೆ.

ಪಾದೇಂದ್ರಿಯ : ಗಮನಾಗಮನ ಕ್ರಿಯಾಕಾರಕ ಅಂಗಾಲನ್ನು ಆಶ್ರ ಯಿಸಿದೆ.

ಶಿಶ್ನ : ಶುಕ್ಲ ಮೂತ್ರ ವಿಸರ್ಜನೆ

ಗುದ : ಮಲವಿಸರ್ಜನೆ

ಪಂಚ ಪ್ರಾಣೇಂದ್ರಿಯಗಳು

ಪ್ರಾಣ : ಹೃದಯದಲ್ಲಿದೆ, ಉಚ್ಛ್ವಾಸ ಕ್ರಿಯಾಕಾರಕ.

ಅಪಾನ : ಗುದೆಯಲ್ಲಿದೆ, ನಿಶ್ವಾಸ ಕ್ರಿಯಾಕಾರಕ.

ವ್ಯಾನ : ಶರೀರಾದ್ಯಂತವಿದೆ ಇಂದ್ರಿಯ ಬಲಕಾರಕ

ಉದಾನ : ಕಂಠದಲ್ಲಿದೆ ಸುಷುಪ್ತಿ ಅವಸ್ಥೆಯಲ್ಲಿ ಸಕಲ ಇಂದ್ರಿಯ ಗಳನ್ನೂ, ಉಪಸಂಹರಿಸಿಕೊಂಡು ತನಗೆ ಕಾರಣವಾದ ಅಜ್ಞಾನದಲ್ಲಿ ಲಯವನ್ನು ಹೊಂದಿ ಜಾಗ್ರದವಸ್ಥೆಯಲ್ಲಿ ಆಯಾ ಇಂದ್ರಿಯಗಳನ್ನು ಆಯಾ ಗೋಳಕ ದಲ್ಲಿ ನಿಲ್ಲಿಸುತ್ತಾ, ಉತ್ಕ್ರಮಣ ಕಾಲದಲ್ಲಿ ಸಕಲೇಂದ್ರಿಯ ಶಕ್ತಿಯನ್ನೂ ಗ್ರಹಿಸಿ ಕೊಂಡು, ಲೋಕಾಂತರವನ್ನು ಹೊಂದುತ್ತದೆ.

ಸಮಾನ : ನಾಭಿಯಲ್ಲಿದೆ. ಇದು ಜಠರಾಗ್ನಿಯಿಂದ ಕೂಡಿ ಆಹಾರ ವನ್ನು ಪಚನಮಾಡಿ ಶರೀರಕ್ಕೆ ಪುಷ್ಟಿಯನ್ನುಂಟುಮಾಡುತ್ತದೆ.

5. ಇತರ ವಾಯುಗಳು :—

ನಾಗ : ವಾಂತಿ ಮಾಡಿಸುತ್ತದೆ.

ಕೂರ್ಮ : ಕಣ್ಣಿನ ರೆಪ್ಪೆ ಆಡಿಸುತ್ತದೆ.

ಕೃಕರ : ಸೀನುವಂತೆ ಮಾಡುತ್ತದೆ.

ದೇವದತ್ತ : ಆಕಳಿಸಲು ಸಹಕಾರಿಯಾಗಿದೆ.

ಧನಂಜಯ : ಶರೀರವನ್ನು ಪೋಷಣೆಮಾಡುತ್ತದೆ.

ಈ ಮೇಲೆ ಹೇಳಿದ 5 ಇತರ ವಾಯುಗಳು ಮೇಲ್ಕಂಡ ಪಂಚಪ್ರಾಣ ಗಳಲ್ಲಿಯೇ ಅಂತರ್ಭೂತವಾಗಿವೆ. ಮತ್ತು ಆ ಪಂಚಪ್ರಾಣಗಳ ಸ್ಥಾನಗಳು ಮತ್ತು ಭೂತಗಳು ಇವಕ್ಕೂ ಆಗಿವೆ.

ಅಂತಃಕರಣ ಪಂಚಕ

ಅಂತಃಕರಣ ಪಂಚಕ ಹೇಗೆಂಬುವನ್ನು ಹಿಂದೆಯೇ ತಿಳಿಸಿದೆ. ಈಗ ಅವುಗಳ ವಿವರವನ್ನು ತಿಳಿಯೋಣ

1) ಮನಸ್ಸು— ಕಂಠಾಂತದಲ್ಲಿದೆ, ಸಂಕಲ್ಪ ಕ್ರಿಯಾಕಾರಕ, ಅಧಿದೈವತೆ ಚಂದ್ರ.
2) ಬುದ್ಧಿ— ಮುಖದಲ್ಲಿದೆ, ನಿಶ್ಚಯ ಕ್ರಿಯಾಕಾರಕ, ,, ಬ್ರಹ್ಮ.
3) ಅಹಂಕಾರ - ಹೃದಯದಲ್ಲಿದೆ, ಅಭಿಮಾನ ಕ್ರಿಯಾಕಾರಕ, ,, ಗೌರೀರಮಣ
4) ಅಂತಃಕರಣ— ಹೃದಯದಲ್ಲಿದೆ, ಸ್ಫುರಣ ಕ್ರಿಯಾಕಾರಕ, ,, ವಿಷ್ಣು.
5) ಚಿತ್ತ—ನಾಭಿಯಲ್ಲಿದೆ, ಸ್ಮರಣ ಕ್ರಿಯಾಕಾರಕ, ,, ಕ್ಷೇತ್ರಜ್ಞ ಜೀವ.

ಅಂತಃಕರಣವೇ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಎಂಬುವ 4 ಭಾಗ ಗಳಾಗಿರುವುವು. ಈ ನಾಲ್ಕರಿಂದಲೇ ಜೀವರಿಗೆ ಪ್ರಾಪಂಚಿಕ ಜ್ಞಾನವಾಗುತ್ತಿರುವುದು.

ಈ ಅಂತಃಕರಣವು ಬುದ್ಧಿರೂಪದಿಂದ ಹೃದಯದಲ್ಲಿದ್ದು ಚಿದಾಭಾಸ ಜೀವನ ಸಾನ್ನಿಧ್ಯದಿಂದ ಸುಖದುಃಖಗಳ ಭೊಕ್ತನೆನಿಸಿ, ತನ್ನ ಭಾಗಗಳಾದ ಮನಸ್ಸು ಬುದ್ಧಿ, ಅಹಂಕಾರ, ಚಿತ್ತಗಳ ಮೂಲಕ, ಕಂಠಾಂತ, ಮುಖ, ನಾಭಿಗಳಲ್ಲಿ ಸಂಚರಿಸುತ್ತದೆ. ಈ ದೇಹದಲ್ಲಿರುವ, ಅಂತಕರಣವೂ ಸೇರಿದಂತೆ, ಪಂಚ, ಅಂತಃಕರಣಗಳು ಈ ರೀತಿಯಾಗಿ "ಕರ್ತಾ" "ಭೋಕ್ತಾ" ಎನಿಸುವುವು. ಪಂಚ ಪ್ರಾಣಗಳು ಅವುಗಳ ವಾಹನಗಳೆನಿಸುವುವು. ಪಂಚ ಜ್ಞಾನೇಂದ್ರಿಯಗಳು ಅವುಗಳ ದ್ವಾರವೆನಿಸುವುವು. ಪಂಚ ವಿಷಯಗಳು ಅವುಗಳ ಭೋಗವೆನಿಸುವುವು. ಪಂಚ ಕರ್ಮೇಂದ್ರಿಯಗಳು ಅವುಗಳ ಸೇವಕರೆನಿಸುವುವು. ಚಿದಾಭಾಸ ಜೀವಾತ್ಮನಾದ ನಾನು ಇವುಗಳೊಂದೂ ಅಲ್ಲ. ಇವುಗಳನ್ನು ತಿಳಿಯುವ ಅಕರ್ತಾ, ಅಭೋಕ್ತಾ ಅಸಂಗ ಕೂಟಸ್ಥ ಈಶ್ವರನಾಗಿರುವೆನು. ಅಂತಃಕರಣ ಪಂಚಕ, ಪಂಚ ಜ್ಞಾನೇಂದ್ರಿಯಗಳು ಪಂಚ ಪ್ರಾಣಗಳು, ಪಂಚ ಕರ್ಮೇಂದ್ರಿಯಗಳು ಮತ್ತು ಪಂಚ ವಿಷಯಗಳು ಇವುಗಳೆಲ್ಲಾ ಅಪಂಚೀಕೃತ ಪಂಚಮಹಾ ಭೂತಗಳ ಸಾತ್ವಿಕ, ರಾಜಸ, ತಾಮಸಭಾಗಗಳಿಂದ ಈ ಕೆಳಗೆ ಕಂಡಂತೆ ಹುಟ್ಟಿರುವುವು.

ಅಪಂಚೀಕೃತಪಂಚ ಮಹಾ ಭೂತಗಳು	ಸಾತ್ವಿಕಾಂಶಗಳಿಂದ ಹುಟ್ಟಿದ್ದು		ರಾಜಸಾಂಶಗಳಿಂದ ಹುಟ್ಟಿದ್ದು		ತಾಮಸಾಂಶಗಳಿಂದ ಹುಟ್ಟಿದ್ದು
	ಪಂಚ ಅಂತಃಕರಣಗಳು	ಪಂಚ ಜ್ಞಾನೇಂದ್ರಿಯಗಳು	ಪಂಚ ಪ್ರಾಣಗಳು	ಪಂಚ ಕರ್ಮೇಂದ್ರಿಯಗಳ	ಪಂಚ ವಿಷಯಗಳು
ಆಕಾಶ	ಅಂತಃಕರಣ	ಶ್ರೋತ್ರ	ವ್ಯಾನ	ವಾಕ್	ಶಬ್ದ
ವಾಯು	ಮನಸ್ಸು	ತ್ವಚ	ಸಮಾನ	ಪಾಣಿ	ಸ್ಪರ್ಶ
ತೇಜ	ಬುದ್ಧಿ	ಚಕ್ಷು	ಉದಾನ	ಪಾದ	ರೂಪ
ಅಪ್ಪು	ಚಿತ್ತ	ಜಿಹ್ವಾ	ಪ್ರಾಣ	ಶಿಶ್ನ	ರಸ
ಪೃಥಿವಿ	ಅಹಂಕಾರ	ಘ್ರಾಣ	ಅಪಾನ	ಗುದ	ಗಂಧ

ಪಂಚಕೋಶಗಳು

ಪ್ರಾಣಾದಿ 10 ವಾಯುಗಳೂ ಪ್ರಾಣ ರೂಪವಾಗಿವೆ. ಇವಕ್ಕೆ 'ಪ್ರಾಣ ಮಯ' ಎನ್ನುವರು. ಪ್ರಾಣವಾಯುವು ಜೀವಾತ್ಮನನ್ನು ಮುಚ್ಚಿರುವುದು. ಅದರಿಂದ ಇದಕ್ಕೆ ಪ್ರಾಣಮಯ ಕೋಶವೆಂದು ಹೆಸರು ಬಂದಿತು.

ಈ ಪ್ರಾಣಮಯ ಕೋಶದೊಳಗೆ ಮನೋಮಯ ಕೋಶವಿದೆ. ಪಂಚ ಜ್ಞಾನೇಂದ್ರಿಯಗಳು ಮನಸ್ಸೂ ಸೇರಿದ ಈ 6 ತತ್ವಗಳಿಂದ ಕೂಡಿ ಈ ಮನೋ ಮಯಕೋಶವಾಗಿದೆ.

ಈ ಮನೋಮಯ ಕೋಶದೊಳಗೆ ವಿಜ್ಞಾನಮಯ ಕೋಶವಿದೆ. ಪಂಚ ಜ್ಞಾನೇದ್ರಿಯಗಳೂ ಬುದ್ಧಿಯೂ ಕೂಡಿ ಈ ಕೋಶವು 6 ತತ್ವಗನ್ನೊಳ ಗೊಂಡಿದೆ.

ಈ ಪ್ರಾಣಮಯ, ಮನೋಮಯ, ವಿಜ್ಞಾನಮಯ ಕೋಶಗಳು ಸೂಕ್ಷ್ಮ ಶರೀರದ ಅಂತರ್ಭಾವವಾಗಿವೆ.

ಈ ಸೂಕ್ಷ್ಮ ಶರೀರವು ಮರಣವಾದ ಬಳಿಕ ಪುಣ್ಯ ಪಾಪ ಕರ್ಮಗಳ ವಶ ದಿಂದ, ಉತ್ಕೃಷ್ಟ, ನಿಕೃಷ್ಟ ಲೋಕಗಳಿಗೆ ಹೋಗಿ ಬರುತ್ತಿರುವುದು. ಇದನ್ನೇ ಬೃಹದಾರಣ್ಯಕ ಉಪನಿಷತ್ತಿನಲ್ಲಿ 'ತಂ ವಿದ್ಯಾ ಕರ್ಮಣೀ ಸಮನ್ವಾರಭೇತೇ ಪೂರ್ವ ಪ್ರಜ್ಞಾ ಚ' ಎಂದು ಹೇಳಿ ಪ್ರಾಣೋತ್ಕ್ರಮಣ ಕಾಲದಲ್ಲಿ ಜೀವಾತ್ಮನ ಜೊತೆಯಲ್ಲಿ ಅವನು ಮಾಡಿದ ವಿದ್ಯೆ, ಕರ್ಮ ಮತ್ತು ಅವನ ಪೂರ್ವದ ಸಂಸ್ಕಾರ ಗಳು ಅವನ ಜೊತೆಯಲ್ಲಿ ಹೋಗುತ್ತವೆ, ಎಂದು ವಿವರಿಸಿದೆ.

ಈ ಸೂಕ್ಷ್ಮ ಶರೀರವು ಮೋಕ್ಷ ಪರಿಯಂತ ಇದ್ದುಕೊಂಡು, ವಿದೇಹ ಮುಕ್ತಿಯಲ್ಲಿ ಆತ್ಯಂತಿಕವಾಗಿ ನಾಶವಾಗುವುದು. ಜೀವಾತ್ಮ, ಈಶ್ವರರ ಅಭೇದ ವನ್ನುಂಟುಮಾಡುವ ದೃಢ ಅಪರೋಕ್ಷಜ್ಞಾನದಿಂದಲೇ ಈ ಸೂಕ್ಷ್ಮದೇಹಕ್ಕೆ ಭಂಗವಾಗುವುದು.

ಮತ್ತೇನೆಂದು ಈ ಸೂಕ್ಷ್ಮಶರೀರಭಂಗವಾಗಲು, ಅಜ್ಞಾನವೂ, ಪ್ರಿಯ, ಮೋದ, ಪ್ರಮೋದಗಳೆಂಬ ಮೂರು ಬಗೆಯ ಸಂತೋಷಗಳೂ ಕೂಡಿ ಇರುವ 'ಆನಂದಮಯಕೋಶ'ವೆನ್ನಲ್ಪಡುವ ಕಾರಣಶರೀರವು ನಾಶವಾಗಬೇಕು.

ಈ ಆನಂದಮಯ ಕೋಶವು ಬುದ್ಧಿಯ ಒಳಗಿನದು. ಸುಖವನ್ನು ಬಯಸಿ ಹೊರಗಡೆಗೆ ಬಗ್ಗಿದ ಬುದ್ಧಿವೃತ್ತಿಯು ತನ್ನ ಪುಣ್ಯದ ಫಲವಾಗಿ, ಆ ಸುಖ ವನ್ನು ಪಡೆದ ಬಂದಾನೊಂದು ಸಮಯದಲ್ಲಿ, ಒಳಗಡೆಗೆ ಹಿಂತಿರುಗುತ್ತದೆ. ಆಗ ಒಳಗಿರುವ ಆತ್ಮಸ್ವರೂಪದ ಆನಂದಾಂಶವು ಅದರಲ್ಲಿ ಪ್ರತಿಬಿಂಬಿಸುವುದು. ಆ

ಸಮಯವು ಬಯಸಿದ ವಸ್ತುವನ್ನು ಕಂಡುದ್ದಾದರೆ 'ಪ್ರಿಯ'ವೆಂಬ ರೂಪದಿಂದಲೂ, ಆ ವಸ್ತುವನ್ನು ಪಡೆದಿದ್ದಾದರೆ 'ಮೋದ'ವೆಂಬ ರೂಪದಿಂದಲೂ, ಅದೇ ವಸ್ತುವನ್ನು ಭೋಗಿಸಿದ್ದಾಗಿದ್ದರೆ 'ಪ್ರಮೋದ'ವೆಂಬ ರೂಪದಿಂದಲೂ ಆನಂದವು ತೋರುವುದು. ಈ ವೃತ್ತಿಯೇ 'ಆನಂದಮಯಕೋಶವು! ಇದು ಜೀವಾತ್ಮನಲ್ಲ, ಏಕೆಂದರೆ, ಆ ಭೋಗವು ಮುಗಿಯುತ್ತಲೆ, ಆ ಬುದ್ಧಿವೃತ್ತಿಗಳು ಅವಿದ್ಯಾರೂಪವಾದ ನಿದ್ರೆಯಲ್ಲಿ ಅಡಗುವುವು. ಯಾವಾಗಲೋ ಒಮ್ಮೊಮ್ಮೆ ಹುಟ್ಟುವುವು. ಅಜ್ಞಾನ, ಪ್ರಿಯ, ಮೋದ, ಆನಂದಗಳು ಆನಂದಮಯಕೋಶದ ಅವಯವಗಳು. ಇಷ್ಟೂ ಜಾಗ್ರತ್ ಸ್ವಪ್ನಕಾಲಗಳಲ್ಲಿ ಆನಂದಮಯಕೋಶದ ವಿಚಾರದಲ್ಲಿ ಹೇಳಿದ ಮಾತು.

ಈ ಕೋಶದ ವಿಷಯವಾಗಿ ಸುಷುಪ್ತಿಕಾಲದಲ್ಲಿ ಹೇಳುವುದಾದರೆ :— ಸುಷುಪ್ತಿಯಲ್ಲಿರುವ ಅಜ್ಞಾನದಿಂದ ಆವರಿಸಲ್ಪಟ್ಟ, ಪ್ರತಿಬಿಂಬರೂಪ ಆನಂದಾಭಿಮಾನವು, ಆನಂದಮಯಕೋಶವೆನಿಸುವುದು.

ಸುಷುಪ್ತಿಯಲ್ಲಿ ಆನಂದಮಯವು ಸ್ಪಷ್ಟವಾಗಿಯೂ, ಜಾಗ್ರತ್ಸ್ವಪ್ನಗಳಲ್ಲಿ ಕಿಂಚಿತ್ತಾಗಿಯೂ ತೋರಿಬರುವುದು. ಬುದ್ಧಿಯ ಯಾವ ವೃತ್ತಿಗಳೂ ಇಲ್ಲದ ಸುಷುಪ್ತಿಯಲ್ಲಿ, ಅವಿದ್ಯೆಯ ವೃತ್ತಿಗಳು ಎದ್ದುಕೊಂಡು. ಅವುಗಳಲ್ಲಿ ಆನಂದಾಂಶವು ಪ್ರತಿಬಿಂಬಿಸುವುದು. ಆಗ ಎಡಬಿಡದ ಆನಂದವು ಅನುಭವಕ್ಕೆ ಬರುವುದು. ಇದರಿಂದ ಅವಿದ್ಯಾವೃತ್ತಿಗಳೇ ಸುಷುಪ್ತಿಯಲ್ಲಿ ಆನಂದಮಯಕೋಶವೆನಿಸುವುದು.

ಪೈಂಗಲೋಪನಿಷತ್ತಿನಲ್ಲಿ, 'ಸ್ವರೂಪಾಜ್ಞಾನಮಾನಂದಮಯಕೋಶಃ' ಎಂದು ಹೇಳಿದೆ. ಒಟ್ಟಿನಲ್ಲಿ, ಅಜ್ಞಾನವೂ, ಪ್ರಿಯ, ಮೋದ, ಪ್ರಮೋದಗಳೆಂಬ ಮೂರು ಬಗೆಯ ಸಂತೋಷಗಳೂ ಕೂಡಿ ಆನಂದಮಯಕೋಶವೆನಿಸುವುದು.

ತೈತ್ತಿರೀಯ ಉಪನಿಷತ್ತಿನಲ್ಲಿ 'ತಸ್ಯ ಪ್ರಿಯಮೇವ ಶಿರಃ। ಮೋದೋ ದಕ್ಷಿಣಃ ಪಕ್ಷಃ। ಪ್ರಮೋದ ಉತ್ತರಃ ಪಕ್ಷಃ। ಆನಂದ ಆತ್ಮಾ। ಬ್ರಹ್ಮಪುಚ್ಛಂ ಪ್ರತಿಷ್ಠಾ ॥' ಎಂದು ಆನಂದಮಯಕೋಶದ ಅವಯವಗಳನ್ನು ಹೇಳಿದೆ.

ಬುದ್ಧಿವೃತ್ತಿಯಲ್ಲಿ ಆತ್ಮಸ್ವರೂಪ ಭೂತವಾದ ಆನಂದದ ಪ್ರತಿಬಿಂಬವು ಯಾವುದರ ಸ್ವರೂಪವೋ ಅದು ಆನಂದಮಯಕೋಶದ ಮುಖ್ಯ ಸ್ವರೂಪವು.

ಅನ್ನಮಯಕೋಶದ ಸಂಬಂಧವಾದ, ಜಾತಿ, ಕುಲ, ಗೋತ್ರ, ರೂಪ, ನಾಮಾದಿ ವಿಕಾರಗಳೂ ಪ್ರಾಣಮಯಕೋಶ ಸಂಬಂಧವಾದ, ಹಸಿವು, ಬಾಯಾರಿಕೆ ಮೊದಲಾದ ವಿಕಾರಗಳೂ, ಮನೋಮಯಕೋಶ ಸಂಬಂಧವಾದ ಸಂಕಲ್ಪ, ವಿಕಲ್ಪಾದಿ, ವಿಕಾರಗಳೂ ವಿಜ್ಞಾನಮಯಕೋಶಸಂಬಂಧವಾದ ಕರ್ತೃತ್ವಾದಿ ವಿಕಾರ

ಗಳೂ, ಆನಂದಮಯಕೋಶ ಸಂಬಂಧವಾದ ಭೋಕ್ತೃತ್ವಾದಿವಿಕಾರಗಳೂ ಸಹ ಜೀವಾತ್ಮನಿಗೆ ಇಲ್ಲ. ಅವಿದ್ಯಾತ್ಮಕವಾದ, ಕಾಲ್ಪನಿಕ ಬುದ್ಧ್ಯುಪಾಧಿ ಸಂಬಂಧ ದಿಂದ, 'ನಾನು, ನಾನು,' ಎಂದು ಪ್ರತಿಪ್ರಾಣಿಗಳ ಶರೀರದಲ್ಲೂ ಅನುಭವ ವೇದ್ಯನಾಗಿರುವ, 'ಆತ್ಮ'ನೆನಿಸುವ ಈಶ್ವರನೇ ಚಿದಾಭಾಸ ಜೀವಾತ್ಮನಾಗಿ ಕಾಣುವನು. ಇಂತು ಈಶ್ವರನೇ ಆದ ಜೀವಾತ್ಮನಿಗೆ, ಮೇಲೆ ಹೇಳಿರುವ ವಿಕಾರಗಳಾವುವೂ ಇಲ್ಲ. ಅವನು ನಿರ್ವಿಕಾರಿ. ವಿಕಾರಗಳೆಲ್ಲಾ ಕೇವಲ ಅವಿದ್ಯಾ ಕಲ್ಪಿತಗಳು.

ಅವಸ್ಥಾತ್ರಯ

ಜೀವಾತ್ಮನಿಗೆ ಜಾಗ್ರತ್-ಸ್ವಪ್ನ-ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ಅನುಭವರಾಶಿ ಸಂಗ್ರಹವಾಗುತ್ತದೆ. ಜೀವಾತ್ಮನ ಜ್ಞಾನಸಂಗ್ರಹವೆಲ್ಲಾ ಈ ಮೂರು ಅವಸ್ಥೆಗಳಲ್ಲಿಯೇ. ಅದ್ವೈತ ವಿಚಾರಸರಣಿಯಲ್ಲಿ, ಈ ಅವಸ್ಥಾತ್ರಯ ವಿವೇಕವು ಬಹುಮುಖ್ಯವಾದುದು.

ಜಾಗ್ರದವಸ್ಥೆ :— ಇಂದ್ರಿಯ ಜನ್ಯವೃತ್ತಿಗಳಿಂದ, ಯಾವಾಗ ಜೀವನು (ಜೀವಾತ್ಮನು) ವಸ್ತುವನ್ನು ತಿಳಿಯುತ್ತಾನೋ, ಅಂದರೆ ಯಾವಾಗ ಇಂದ್ರಿಯ ಗಳ ಮೂಲಕ ವಿಷಯಗಳನ್ನು ಸಂಗ್ರಹಿಸುತ್ತಾ, ಸ್ಥೂಲಶರೀರದ ಭೋಗಗಳನ್ನು ಅನುಭವಿಸುವನೋ, ಆಗ ಅವನಿಗಿರುವ ಅವಸ್ಥೆಗೆ 'ಜಾಗ್ರತ್' ಎನ್ನುವರು. ಆಗ ಜೀವನು ಮೂರ್ತನಾದ ಅಂದರೆ ವ್ಯಾವಹಾರಿಕವಾದ ಪದಾರ್ಥ ಭೋಕ್ತನಾದ 'ವಿಶ್ವ' ನೆನಿಸುವನು ಏಕೆಂದರೆ ಆಗ ಅವನು, ಸಮಸ್ತ ದೇಹೇಂದ್ರಿಯಾದಿ ಗಳಲ್ಲಿ ಪ್ರವೇಶಗೊಂಡಿರುವನು ಮತ್ತು ಶರೀರದಲ್ಲಿ ವ್ಯಾಪಕನಾಗಿರುವನು. ಆ ಕಾಲದಲ್ಲಿ ಅವನು ವ್ಯಾವಹಾರಿಕ ಪದಾರ್ಥಗಳನ್ನು "ಷಡ್ವಿಧಪ್ರಮಾಣ" ಗಳಿಂದ, ಅಂದರೆ, ಪ್ರತ್ಯಕ್ಷ, ಅನುಮಾನ. ಶಬ್ದ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ, ಎಂಬ ಪ್ರಮಾಣಗಳಿಂದ ತಿಳಿಯುವನು.

ಸ್ವಪ್ನಾವಸ್ಥೆ :— ನಿದ್ರಾರೂಪವಾದ ತಾಮಸೀವೃತ್ತಿಯಿಂದ ಸ್ಥೂಲ ದೇಹದ ಅಭಿಮಾನವು ದೂರವಾಗಿ, ಇಂದ್ರಿಯ ಸಮೂಹವು, ನಿರ್ವ್ಯಾಪಾರದಿಂದ ಲೀನವಾಗಿ, ಯಾವ ವಿಷಯದೊಡನೆಯೂ ಸಂಬಂಧ ಹೊಂದದೆ ಇಂದ್ರಿಯ ಜನ್ಯವಲ್ಲದ ಬುದ್ಧಿವೃತ್ತಿಗಳಿಂದ, ಸೂಕ್ಷ್ಮದೇಹದ ಭೋಗಗಳನ್ನು ಅನುಭವಿಸುವ ಕಾಲವೇ ಸ್ವಪ್ನಾವಸ್ಥೆಯು. ಇಲ್ಲಿ ಭೋಕ್ತೃತ್ವಾದಿಸಕಲ ಪ್ರಪಂಚವನ್ನೂ. ಜೀವನು ಮನಸ್ಸಿನಿಂದಲೇ ಕಲ್ಪಿಸಿಕೊಂಡು ಇರುವನು. ಮನಸ್ಸೇ ವಿಷಯಾಕಾರವೂ ಆಗು ವುದು. ಆ ವಿಷಯವನ್ನು ನೋಡುವುದೂ ಮನಸ್ಸೇ. ಸ್ವಪ್ನದ ಅಭಿಮಾನಿಗೆ

ಸೂರ್ಯಾದಿಪ್ರಕಾಶಗಳಿಲ್ಲದೇನೇ, ಮನಸ್ಸು ಸಮಸ್ತ ವಿಷಯಗಳನ್ನೂ ಸ್ವಪ್ನದಲ್ಲಿ ಪ್ರಕಾಶಗೊಳಿಸುವುದರಿಂದ, ಸ್ವಪ್ನದಲ್ಲಿ ಭೋಕ್ತನಾದ ಜೀವನಿಗೆ 'ತೈಜಸ'ನೆನ್ನುವರು. ಆಗ ಅವನು ಅಮೂರ್ತಪದಾರ್ಥದ ಭೋಕ್ತನಾಗಿರುತ್ತಾನೆ. ಸ್ವಪ್ನವು, ಕೇಳಲ್ಪಟ್ಟ ಮತ್ತು ಭೋಗಿಸಲ್ಪಟ್ಟ ಸಂಸ್ಕಾರಜನ್ಯವಾದುದು. ಅಲ್ಲದೆ, ನಿದ್ರಾದೋಷ, ಪ್ರಾರಬ್ಧಕರ್ಮಗಳಿಂದಲೂ ಅನ್ಯವಾದುದಾಗಿರುತ್ತದೆ.

ಈ ಸ್ವಪ್ನಾವಸ್ಥೆಯ ಸ್ಥಾನವು ಕಂಠವು. ಕಂಠದಲ್ಲಿ 'ಹಿತಾ' ಎಂಬ ಹೆಸರಿನ ನಾಡಿಯಿದೆ. ಅದರಲ್ಲಿ ಸ್ವಪ್ನವು ತೋರುವುದು. ಇದನ್ನೇ ಬೃಹದಾರಣ್ಯಕೋಪನಿಷತ್ತಿನಲ್ಲಿ 'ತಾವಾ ಅಸ್ಯೈತಾ ಹಿತಾ ನಾಮ ನಾಡ್ಯೋ ಯಥಾ ಕೇಶಃ ಸಹಸ್ರಧಾ' ಅಂದರೆ ಸಾವಿರ ಪಾಲಾಗಿ ಒಡೆದ ಕೇಶದಂತೆ ಸೂಕ್ಷ್ಮವಾದ ಹಿತಾ ಎಂಬ ನಾಡಿಗಳು ರಸವಿಶೇಷಗಳಿಂದ ತುಂಬಿರುತ್ತವೆಯೆಂದೂ, ಅವುಗಳ ಸಂಬಂಧದಿಂದಲೂ ಅವಿದ್ಯಾಕಾಮಕರ್ಮಗಳಿಂದಲೂ, ಸ್ವಪ್ನದಲ್ಲಿ ಕಲ್ಪನೆಗಳಾಗುತ್ತವೆಯೆಂದೂ ಹೇಳಿದೆ.

ಈ ಸ್ವಪ್ನಾವಸ್ಥೆಯಲ್ಲಿ, 'ಮಧ್ಯಮಾ' ಎಂಬ ವಾಣಿಯು ಇರುವುದು. 'ಪ್ರವಿಕ್ತ' ಎಂಬ ಭೋಗವಿರುವುದು. ಎಂದರೆ ಸೂಕ್ಷ್ಮವಾಸನಾಮಯ ಭೋಗವಿರುತ್ತದೆ. ಸ್ವಪ್ನಕಾಲದಲ್ಲಿ, ಜಾಗ್ರತ್ತಿನ ಸ್ಥೂಲಭೋಗಗಳೆಲ್ಲಾ ನಿವೃತ್ತವಾಗಿದ್ದರೂ, ಆ ಸ್ಥೂಲಭೋಗದ ಸಂಸ್ಕಾರರೂಪ ಸೂಕ್ಷ್ಮಭೋಗಗಳು ಕಂಡುಬರುತ್ತವೆ. ಈ ಸ್ವಪ್ನದಲ್ಲಿ ಅಲ್ಲಿಯ ಪದಾರ್ಥಗಳನ್ನು ತಿಳಿಯಬಲ್ಲ ಮತ್ತು ಬೆಳಗಬಲ್ಲ ಜ್ಞಾನಶಕ್ತಿಗೆ 'ಸಂವಿತ್' ಎಂದು ಹೆಸರು.

ಸುಷುಪ್ತ್ಯವಸ್ಥೆ :— ಸುಷುಪ್ತಿಅವಸ್ಥೆಯಲ್ಲಿ, ಜಾಗ್ರತ್, ಸ್ವಪ್ನಗಳಲ್ಲಿ ಭೋಗವನ್ನು ಕೊಡುವ ಕಾಮ, ಕರ್ಮಗಳು ಉಪರಮವಾಗಿರುತ್ತವೆ.

ಗಿಡುಗಪಕ್ಷಿಯು ತನ್ನ ರೆಕ್ಕೆಗಳಿಂದ ಅಂತರಿಕ್ಷದಲ್ಲೆಲ್ಲಾ ಹಾರಿ, ಹಾರಿ, ಸೋತುಬಳಲಿ, ಕೊನೆಗೆ ತನ್ನ ರೆಕ್ಕೆಗಳನ್ನು ಮುದುರಿಕೊಂಡು, ಗೂಡಿನಲ್ಲಿ ಕುಳಿತುಕೊಳ್ಳಲು ಅಪೇಕ್ಷಿಸುವಂತೆ, ಪ್ರತಿಬಿಂಬ ಚಿದಾಭಾಸನಾದ ಜೀವಾತ್ಮನು, ಜಾಗ್ರತ್ ಸ್ವಪ್ನಗಳಲ್ಲಿ, ಶರೀರೇಂದ್ರಿಯಗಳ ಸಂಯೋಗದಿಂದ ಉಂಟಾದ ಕ್ರಿಯೆಯ ಫಲದಿಂದ ಬಳಲಿರುತ್ತಾನೆ. ಆದ ಕಾರಣ ತನ್ನ ಆಯಾಸವನ್ನು ಪರಿಹರಿಸಿಕೊಳ್ಳಲು, ಸರ್ವಸಂಸಾರಧರ್ಮವರ್ಜಿತನಾದ, ಸರ್ವಕ್ರಿಯಾಕಾರಕ ಫಲಗಳ ಆಯಾಸವಿಲ್ಲದ, ಸುಖಸ್ವರೂಪವಾದ ತನ್ನ ಗೂಡಿಗೆ ಎಂದರೆ ತನ್ನಬಿಂಬರೂಪಕೂಟಸ್ಥಚೈತನ್ಯದ ಬಳಿಗೆ ಹಿಂತಿರುಗುತ್ತಾನೆ. ಅಲ್ಲಿ ಅವನಿಗೆ ಅವಿದ್ಯಾ–ಕಾಮ–ಕರ್ಮಗಳಿಂದ ವರ್ಜಿತವಾದ ಕೂಟಸ್ಥ ಆತ್ಮನ 'ಅತಿಚ್ಛಂದ' (ಕಾಮವರ್ಜಿತ) ರೂಪದ ಸುಖಾನುಭವವು ಉಂಟಾಗುವುದು.

ಹೀಗೆ ಜೀವಾತ್ಮನು ಪ್ರತಿದಿನವೂ ಸುಷುಪ್ತಿಯಲ್ಲಿ ಸದ್ವಸ್ತುವಾದ ಕೂಟಸ್ಥ ನನ್ನು ಸೇರುತ್ತಾನೆ. ಆದರೂ ಅವನಿಗೆ ಹಾಗೆ ತಾನು ಸೇರಿದೆನೆಂಬ ಅರಿವು ಇರುವುದಿಲ್ಲ.

ಎಚ್ಚೆತ್ತ ಕೂಡಲೆ 'ಏತಾವತ್ಕಾಲಪರ್ಯಂತಮಹಂ ಮುಖಮಸ್ವಾಪಸಂ, ನ ಕಿಂಚಿದವೇದಿಷಂ' ಅಂದರೆ ಇದುವರೆಗೆ ನಾನು ಸುಖವಾಗಿ ಮಲಗಿದ್ದೆ. ಸುಖದ ಹೊರತು ನನಗೇನೂ ತಿಳಿಯದು ಎಂದು ಹೇಳುತ್ತಾನೆ. ಇದರಿಂದ ಸ್ಥಿರ ಪಡುವುದೇನೆಂದರೆ, ಸುಷುಪ್ತಿಯಲ್ಲಿನ ನಿದ್ರೆಯನ್ನು ತಿಳಿಯುವಂಥಾ, ಜ್ಞಾನರೂಪ ನಾದ ಕೂಟಸ್ಥನು ಆ ನಿದ್ರಾಕಾಲದಲ್ಲೂ ಇದ್ದಾನೆ. ನಿದ್ರಾಕಾಲದಲ್ಲಿ ಅವನು ಇಲ್ಲದಿದ್ದರೆ, ನಿದ್ರೆಯಿಂದ ಎಚ್ಚತ್ತ ಮೇಲೆ 'ನಾನು ಸುಖವಾಗಿ ನಿದ್ರೆಮಾಡುತ್ತಿದ್ದೆ.' 'ನನಗೆ ಇನ್ನೇನೂ ತಿಳಿಯದು' ಎಂಬ ಸ್ಮರಣೆ ಬರುತ್ತಿರಲಿಲ್ಲ. ಯಾವ ವಸ್ತುವು ಪೂರ್ವದಲ್ಲಿ ತಿಳಿಯಲ್ಪಟ್ಟಿರುವುದೋ, ಅದರದೇ ಸ್ಮರಣೆಯಾಗುವುದೆಂಬ ನಿಯಮವಿದೆ. ಹೀಗಾಗಿ ನಿದ್ರಾಕಾಲದಲ್ಲೂ, ಸುಖವನ್ನೂ, ಅಜ್ಞಾನವನ್ನೂ ಪ್ರಕಾಶಪಡಿಸಿದ್ದು ಕೂಟಸ್ಥದೆಂದು ಸಿದ್ಧವಾಯಿತು.

ಹೀಗೆ ಕೂಟಸ್ಥ ಚೈತನ್ಯವು, ಅವಸ್ಥಾತ್ರಯಗಳಲ್ಲಿ (ಜಾಗ್ರತ್, ಸ್ವಪ್ನ, ಸುಷುಪ್ತಿ ಅಂದರೆ ಗಾಢನಿದ್ರೆ ಅವಸ್ಥೆಗಳಲ್ಲಿ) 'ಸಾಕ್ಷಿ' ರೂಪದಲ್ಲಿದ್ದು (ಕೇವಲ 'ದ್ರಷ್ಟಾ' ಆಗಿದ್ದು) ತಾನು ಸ್ವಯಂಪ್ರಕಾಶವಾದ್ದರಿಂದ, ತನ್ನ ಸ್ವರೂಪಜ್ಞಾನ ದಿಂದ, (ಸಾಮಾನ್ಯಜ್ಞಾನದಿಂದ) ಸರ್ವದ್ವೈತಪ್ರಪಂಚವನ್ನೂ ಪ್ರಕಾಶಪಡಿಸು ವುದು.

ಜಾಗ್ರತ್ ಸ್ವಪ್ನಗಳಲ್ಲಿ ಕೂಟಸ್ಥ ಚೈತನ್ಯದ ಸ್ವರೂಪಜ್ಞಾನವು ಬುದ್ಧಿ ವೃತ್ತಿಗಳಲ್ಲಿ ಪ್ರವೇಶಿಸಿ, ವಿಷಯುಗಳನ್ನು ಪ್ರಕಾಶಪಡಿಸುವುದು. ಆಗಿನ ಆ ಪ್ರಕಾಶಕ್ಕೆ ವೃತ್ತಿಜ್ಞಾನ (ವಿಶೇಷ ಜ್ಞಾನ) ವೆಂದು ಹೆಸರು.

ಸುಷುಪ್ತಿಯಲ್ಲಿ ಕೂಟಸ್ಥನಿಗೆ ವಿಶೇಷಜ್ಞಾನ (ವೃತ್ತಿಜ್ಞಾನ) ವಿರುವು ದಿಲ್ಲ. ಏಕೆಂದರೆ ವಿಶೇಷದರ್ಶನಕ್ಕೆ ಕಾರಣವಾದ, ಬುದ್ಧಿ, ಮನಸ್ಸು, ಚಕ್ಷುಸ್ಸು, ರೂಪಗಳು, ವಿಷಯುಗಳು, ಬೀಜರೂಪಪೂರ್ವಸಂಸ್ಕಾರಗಳು ಇವುಗಳೆಲ್ಲಾ ಕೂಟಸ್ಥ ಚೈತನ್ಯಕ್ಕೆ ಅನ್ಯವಾಗಿ ಉಪಸ್ಥಾಪಿತವಾಗಿರುವುದಿಲ್ಲ. ಹೀಗಿರುವುದರಿಂದಲೂ, ಮತ್ತು ಚಿದಾಭಾಸನೆನಿಸಿದ ಜೀವಾತ್ಮನು ಬುದ್ಧಿ ಸಂಬಂಧವನ್ನು ಬಿಟ್ಟು ಕೂಟಸ್ಥನೊಡನೆ ಸೇರಿರುವುದರಿಂದಲೂ, ಚಿದಾಭಾಸನ ಬಿಂಬವಾದ ಕೂಟಸ್ಥನ ಸ್ವರೂಪ ಜ್ಞಾನಕ್ಕೆ ವಿಷಯುವಾಗಿ, ಯಾವ ದ್ವಿತೀಯ ವಸ್ತುವೂ 'ವಿಭಕ್ತ'ವಾಗಿ (ವಿಂಗಡವಾಗಿ) ಇರುವುದಿಲ್ಲ. ಜೀವರೂಪಕ್ಕೆ ಮೂಲ ಕಾರಣವಾದ ಆವರಣರೂಪ ಅವಿದ್ಯೆಯು ಇದ್ದರೂ ಅದು ಬುದ್ಧಿಯನ್ನೂ, ಅದರಲ್ಲಿರುವ ಬೀಜರೂಪ ಸಂಸ್ಕಾರಗಳನ್ನೂ

ಅದಕ್ಕೆ ಪ್ರಚೋದಕವಾದ ವಿಕ್ಷೇಪಶಕ್ತಿಗಳನ್ನೂ, ಇವೆಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡು, ಕೂಟಸ್ಥನಾದ ಈಶ್ವರನನ್ನು ಆಶ್ರಯಿಸಿರುವ ಆವರಣಾತ್ಮಕ ಮಾಯೆಯಲ್ಲಿ ಬೀಜರೂಪದಿಂದ ಇರುವುದು (ಅವಿಭಕ್ತವಾಗಿರುವುದು) ಇದರಿಂದ ಜೀವಾತ್ಮನು ತನ್ನ ಪ್ರತಿಬಿಂಬರೂಪ ಚಿದಾಭಾಸತ್ವವನ್ನು ಬಿಟ್ಟು ಬಿಂಬರೂಪ ಕೂಟಸ್ಥನೊಡನೆ ಸೇರಿದರೂ, ತನಗೆ ಏನೂ ತಿಳಿಯಲಿಲ್ಲವೆಂದು, ಆ ಆವರಣಾತ್ಮ ಅವಿದ್ಯೆಯ ಪ್ರಭಾವದಿಂದ ಹೇಳುತ್ತಾನೆ.

ಬೃಹದಾರಣ್ಯಕ ಶ್ರುತಿಯು ಈ ಸಂದರ್ಭವಲ್ಲಿ :

'ಯದ್ವೈ ತನ್ನ ಪಶ್ಯತಿ, ಪಶ್ಯನ್ ವೈ ತನ್ನ ಪಶ್ಯತಿ, ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾತ್ । ನ ತು ತದ್ ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ ಪಶ್ಯೇತ್ ॥' ಅಂದರೆ

ಆ ಕೂಟಸ್ಥನು ಸುಷುಪ್ತಿಯಲ್ಲಿ ನೋಡದಿರುವುದಕ್ಕೆ ಕಾರಣವೇನೆಂದರೆ ಆಗ ಅವನು ತನ್ನ ನಿಜವಾದ ಸ್ವರೂಪದೃಷ್ಟಿಯಿಂದ ನೋಡುತ್ತಿದ್ದರೂ ನೋಡುವುದಿಲ್ಲ ಅಂದರೆ ಆತನ ದೃಷ್ಟಿಗೆ ನಾಶವಿಲ್ಲದಿದ್ದರೂ, ನೋಡಬಹುದಾದ ಎರಡನೇ ವಸ್ತುವು ಅಂದರೆ ಅರಿಯಲ್ಪಡಬೇಕಾದ ವಿಷಯಗಳು ಬೇರೆಯಾಗಿ ವಿಂಗಡವಾಗಿ ಇರುವುದಿಲ್ಲ.

ಏಕೆಂದರೆ, ಎರಡನೇ ವಸ್ತುವೆಂಬುದೆಲ್ಲಾ ಸೂಕ್ಷ್ಮರೂಪದಿಂದ ಕಾರಣ ವಿದ್ಯೆಯೊಳಗೆ ಸೇರಿ ಕೂಟಸ್ಥವನ್ನಾಶ್ರಯಿಸಿರುವ ಮಾಯೆಯಲ್ಲಿ ಸೇರಿರುತ್ತವೆ. ಇದರಿಂದ ಫಲಿತಾಂಶವೇನಾಯಿತೆಂಪರೆ, ಸುಷುಪ್ತಿಯಲ್ಲಿ ಅವಿದ್ಯೆಯು ನಾಶವಾಗಲಿಲ್ಲ. ಆದರೆ ಅಭಿವ್ಯಕ್ತತೆ ಮಾತ್ರ ಇರುವುದಿಲ್ಲ. ಸುಷುಪ್ತ್ಯನುಭವದಿಂದ ಕೂಟಸ್ಥ ಸಿದ್ಧನಾಗುತ್ತಿದ್ದರೂ, ಆಗ ಆವರಣರೂಪ ಅಜ್ಞಾನವು ಇದ್ದೇ ಇರುವುದರಿಂದ, ಯಾರಿಗೂ ಕೂಟಸ್ಥನ ಸ್ವರೂಪಜ್ಞಾನವಾಗುವುದಿಲ್ಲ.

ಅವಿದ್ಯೆಯ ಶಕ್ತಿಗಳೆರಡು, 1) ವಿಕ್ಷೇಪ 2) ಆವರಣ. ಆವರಣ ಶಕ್ತಿಯೆಂದರೆ, ಚಿದಾಭಾಸ ಪ್ರತಿಬಿಂಬ ಚೈತನ್ಯವನ್ನು ಆವರಿಸಿಕೊಂಡು, ಅದಕ್ಕೆ ತನ್ನ ಬಿಂಬವಾದ ಕೂಟಸ್ಥನು ಕಾಣದಂತೆ ಮಾಡುವುದು.

ವಿಕ್ಷೇಪ ಶಕ್ತಿಯೆಂದರೆ ಚಿದಾಭಾಸನು ತನ್ನನ್ನು ವಿಪರೀತವಾಗಿ ಬುದ್ಧಿ ದೇಹಾದಿಗಳೆಂದು ಭಾವಿಸಿಕೊಂಡು ಸುಖ, ದುಃಖ, ಅಲ್ಪಜ್ಞ, ಸಂಸಾರಿಯಾದ ಜೀವಾತ್ಮನೆಂದು ಕಾಣುವಂತೆ ಮಾಡುವುದು.

ಎಚ್ಚರ ಕನಸುಗಳಲ್ಲಿ ವಿಕ್ಷೇಪ ಶಕ್ತಿಯು ತೀರ ಸ್ಪಷ್ಟವಾಗಿ ಪ್ರಕಟವಾಗುತ್ತದೆ. ಆದರೆ ಸುಷುಪ್ತಿಯಲ್ಲಿ ಮಾತ್ರ ಆವರಣ ಶಕ್ತಿಯೊಂದೇ ಇರು

ತ್ತದೆ. ವಿಕ್ಷೇಪಶಕ್ತಿಯು ಬುದ್ಧಿ ಮತ್ತು ಬುದ್ಧಿವೃತ್ತಿಗಳೊಡನೆ ಆ ಆವರಣ ಶಕ್ತಿಯಲ್ಲಿ ಬೀಜರೂಪದಿಂದ ಸೇರಿಹೋಗಿರುತ್ತದೆ.

ಆವರಣ ಶಕ್ತಿಯೇ ಎಲ್ಲಾ ಕಾರ್ಯ ಪ್ರಪಂಚಕ್ಕೂ ಮೂಲ ಕಾರಣವು. ಆವರಣವಿದ್ದ ಹೊರತು ವಿಕ್ಷೇಪವು ಪ್ರಕಟವಾಗಲಾರದು. ಕೂಟಸ್ಥ ಚೈತನ್ಯವು ಮೊದಲು ಕಾಣದಂತಾಗದ ಹೊರತು, ಅದು ವಿಪರೀತವಾಗಿ ಜೀವಾತ್ಮರೂಪದಿಂದ ತೋರಲು ಶಕ್ಯವಿಲ್ಲ. ಸುಷುಪ್ತಿಯಲ್ಲಿನ ಆವರಣ ಶಕ್ತ್ಯಾತ್ಮಕ ಅಜ್ಞಾನ ರೂಪ ಕತ್ತಲೆಯೇ ಎಚ್ಚರ ಕನಸುಗಳಿಗೂ ಬೀಜವಾಗಿದೆಯೆಂದೂ ಅದು ಕೂಟಸ್ಥನ ಯಥಾರ್ಥ ಜ್ಞಾನದಿಂದ ಪೂರ್ಣವಾಗಿ ಸುಟ್ಟುಹೋಯಿತೆಂದರೆ ಸುಟ್ಟುಹೋದ ಬೀಜದಂತೆ, ಅದು ಮುಂದೆ ಯಾವುದೇ ತರದ ಪರಿಣಾಮಗಳನ್ನೂ ಹುಟ್ಟಿಸ ಲಾರದೆಂದೂ ಶ್ರೀಮಚ್ಛಂಕರರು 'ಉಪದೇಶ ಸಾಹಸ್ರಿ'ಯೊಳಗೆ ೧೭ ನೇ ಪ್ರಕರಣದ ೨೬ ನೇ ಶ್ಲೋಕದಲ್ಲಿ

"ಸುಷುಪ್ತಾಖ್ಯಂ ತಮೋಽಜ್ಞಾನಂ ಬೀಜಂ ಸ್ವಪ್ನಪ್ರಬೋಧಯೋಃ ।
ಸ್ವಾತ್ಮಬೋಧಪ್ರದಗ್ಧಂ ಸ್ಯಾದ್ಬೀಜಂ ದಗ್ಧಂ ಯಥಾಭವಮ್ ॥

ಎಂಬಲ್ಲಿ ಹೇಳಿದ್ದಾರೆ.

ಸುಷುಪ್ತಿಯಲ್ಲಿ ಆವರಣಾಜ್ಞಾನವಿತ್ತೆಂಬುದನ್ನು ಗೌಡಪಾದಕಾರಿಕಾ ಭಾಷ್ಯದಲ್ಲಿ 'ಯಸ್ಮಾತ್ಸುಷುಪ್ತೇಃ ಅನ್ಯಃ ಪ್ರಚಾರಃ ಅವಿದ್ಯಾಮೋಹತಮೋಗ ಸ್ತಸ್ಯ, ಅಂತರ್ಲೀನಾನೇಕಾನರ್ಥಪ್ರವೃತ್ತಿಬೀಜವಾಸನಾವತೋ ಮನಸಃ,' ಎಂದು ಹೇಳಿದೆ.

ಗೌಡಪಾದಕಾರಿಕೆಯಲ್ಲಿ ಆಗಮ ಪ್ರಕರಣ ೧೧ ನೇ ಶ್ಲೋಕದಲ್ಲಿ ಸುಷುಪ್ತ್ಯವಸ್ಥೆಯಲ್ಲಿನ 'ಪ್ರಾಜ್ಞನು' ಕಾರಣಬದ್ಧನಾಗಿರುವನು ಎಂದಿದ್ದಾರೆ.

ಅಂದರೆ ಜೀವನು ಸುಷುಪ್ತ್ಯವಸ್ಥೆಯಲ್ಲಿ, ಕಾರಣ ಶರೀರದ ಅಂದರೆ ಕಾರಣಾವಿದ್ಯೆಯ ಅಭಿಮಾನಿಯಾಗಿ 'ಪ್ರಾಜ್ಞ' ನೆಂದು ಕರೆಯಲ್ಪಡುತ್ತಾನೆ. ಈ ಪ್ರಾಜ್ಞನನ್ನು ಕಾರಣಾವಿದ್ಯೆಯೊಂದೇ ಕಟ್ಟಿಹಾಕಿರುತ್ತದೆ.

ಈ ಕಾರಣಾವಿದ್ಯೆಯ ಪ್ರಭಾವದಿಂದಲೇ ನಾವು ಸುಷುಪ್ತಿಯಿಂದ ಎಚ್ಚೆತ್ತಾಗ 'ನನಗೆ ಏನೂ ಗೊತ್ತಾಗಲಿಲ್ಲ' ಎಂದು ಹೇಳುತ್ತೇವೆ. ಈ ರೀತಿಯಾದ ಸ್ಮೃತಿಗೆ ನಾವು ಗಾಢನಿದ್ರೆಯಲ್ಲಿ ಅಜ್ಞಾನವನ್ನು ಅನುಭವಿಸಿರಬೇಕು. ಇದರಿಂದ ಗಾಢನಿದ್ರೆಯಲ್ಲಿ ತಮೋಗುಣಸ್ವರೂಪವಾದ ಕಾರಣಾವಿದ್ಯೆಯು ಇರುತ್ತೆಂದೂ, ಅದು ಸಾಕ್ಷಿಯಾದ ಕೂಟಸ್ಥ ಚೈತನ್ಯಕ್ಕೆ ಭಾಸ್ಯವಾಗಿರುತ್ತೆಂದೂ ಆಗ ವಿಶೇಷ ಜ್ಞಾನಕ್ಕೆ ಸಾಧನವಾದ ಇಂದ್ರಿಯ ಬುದ್ಧ್ಯಾದಿಗಳು ಇರುವುದಿಲ್ಲವಾಗಿ ಜೀವಾತ್ಮನಿಗೆ ಭಾಸವಾಗಲಿಲ್ಲವೆಂದು ತಿಳಿಯಬೇಕು.

ನಿದ್ರೆಯಿಂದ ಎದ್ದಾಗ ಇಂದ್ರಿಯ ಅಂತಃಕರಣಗಳು ಹೊರಗೆ ಬರುತ್ತವೆ. ಆಗ ಸುಷುಪ್ತಿಯಲ್ಲಿ ಅನುಭವ ಮಾಡಿದ ಸಾಕ್ಷೀರೂಪವಾದ ಸುಖರೂಪ ಕೂಟಸ್ಥ ಚೈತನ್ಯಸಂಬಂಧವಾದ ಸ್ಮೃತಿ ಮತ್ತು ಭಾವ ರೂಪವಾದ ಕಾರಣಾವಿದ್ಯೆಯ ಸ್ಮೃತಿ ಇವುಗಳು ಬುದ್ಧಿಯ ವಿಶೇಷ ಜ್ಞಾನಕ್ಕೆ ಭಾಸವಾಗಿ ಆಗ ನಾವು ಅಜ್ಞಾನ ಮತ್ತು ಸುಖಾನುಭವಗಳನ್ನು ಹೇಳಿಕೊಳ್ಳುತ್ತೇವೆ.

ಶ್ರುತಿಯಲ್ಲಿ ' ಸುಷುಪ್ತಿಕಾಲೇ ಸಕಲೇ ವಿಲೀನೇ ತಮೋಭಿಭೂತಃ ಸುಖ ರೂಪಮೇತಿ ' ಎಂದಿರುವಂತೆ ಕಾರಣಾವಿದ್ಯೆಯಲ್ಲಿ ಬುದ್ಧಿ ಮೊದಲುಗೊಂಡು ಸಮಸ್ತವೂ ಸೂಕ್ಷ್ಮರೂಪದಲ್ಲಿ ಅಡಗುವುವು. ಆದರೆ ' ತಮೋಭಿಭೂತಃ ' ಎಂದು ಹೇಳಿರುವಂತೆ ಭಾವ ರೂಪವಾದ ಈ 'ಅನಾದಿ ಕಾರಣಾವಿದ್ಯೆ ' ಮಾತ್ರ ಇದ್ದು ಜೀವನಿಗೆ ಏನೂ ಗೊತ್ತಾಗದಂತೆ ಮಾಡಿ ಪ್ರಾರಬ್ಧಕರ್ಮಗಳ ಫಲೋನ್ಮುಖತೆ ಯಿಂದ ಎಚ್ಚರವಾದ ಕೂಡಲೆ, ಪ್ರಪಂಚದ ಕಾರ್ಯದಲ್ಲಿ ತನ್ನ ವಿಕ್ಷೇಪ ಶಕ್ತಿಯ ಮೂಲಕ ತೊಡಗಿಸುತ್ತದೆ. ಸುಷುಪ್ತಿಯಲ್ಲಿ, ಲಿಂಗ ಶರೀರವು ಸೂಕ್ಷ್ಮರೂಪದಿಂದ ಕಾರಣ ಶರೀರವಾದ ಕಾರಣಾವಿದ್ಯೆಯಲ್ಲಿರುತ್ತದೆ. ಪುಣ್ಯ ಪಾಪಗಳೂ ಇದರಲ್ಲೇ ಅಡಗಿರುತ್ತವೆ.

ಈ ಕಾರಣ ರೂಪವಾದ ತಮೋ ಆವರಣವೇ (ಅವಿದ್ಯಾತ್ಮಿಕ ಆವ ರಣ ಶಕ್ತಿಯೇ) ಮರಣ ಕಾಲದಲ್ಲಿ ಸೂಕ್ಷ್ಮ ಶರೀರವೆನಿಸುವುಗಳನ್ನೆಲ್ಲಾ, ಚೆಲ್ಲಾ ಪಿಲ್ಲಿಯಾಗದಂತೆ ಕಟ್ಟಿ ಹಾಕಿಕೊಂಡು ಮುಂದಿನ ಜನ್ಮಕ್ಕೆ ಕಾರಣವಾಗುತ್ತದೆ. ಅಲ್ಲದೆ, ಪ್ರಳಯದಲ್ಲಿ ಈಶ್ವರನ ಮಾಯೆಯಲ್ಲಿ ಸೂಕ್ಷ್ಮರೂಪದಿಂದ ಅಡಗಿರುತ್ತದೆ. ಈ ಕಾರಣಾವಿದ್ಯೆಯು ಸಂಪೂರ್ಣ ಇಲ್ಲನಂತಾಗುವುದು ಮುಕ್ತಾವಸ್ಥೆಯಲ್ಲಿಯೇ. ವಿದೇಹ ಕೈವಲ್ಯದಲ್ಲಿ ಅವಿದ್ಯಾತ್ಮಕ ವಿಕ್ಷೇಪಶಕ್ತಿಯು ತನಗೆ ಕಾರಣವಾದ, ಮೇಲ್ಕಂಡ ಕಾರಣಾವಿದ್ಯೆಯಲ್ಲಿ ಸೇರಿ ಅಲ್ಲಿ ಕಾರಣಾವಿದ್ಯಾಸ್ವರೂಪವೇ ಆದ ಬುದ್ಧಿಯೊಡನೆ ಬೆರೆತು ಬ್ರಹ್ಮಾಶ್ರಯವೆನಿಸಿದ ಅವ್ಯಕ್ತ ಶಕ್ತಿಯಲ್ಲಿ ಲಯ ಹೊಂದು ವುದು.

ಸ್ವಪ್ನವು ಜಾಗೃತ್ತಿನಲ್ಲಿ ಸುಳ್ಳಾಗಿರುವುದು ಮತ್ತು ಜಾಗೃತ್ತು, ಸ್ವಪ್ನ ಸುಷುಪ್ತಿಗಳಲ್ಲಿರುವುದಿಲ್ಲ. ಹೀಗೆ ಮೂರು ಅವಸ್ಥೆಗಳೂ ಒಂದಕ್ಕೊಂದು ವ್ಯತಿ ರೇಕವಾಗಿದೆ. ಈ ಮೂರು ಅವಸ್ಥೆಗಳಿಗೂ ಸಾಕ್ಷಿಯಾದ ಕೂಟಸ್ಥನು ಮೂರು ಅವಸ್ಥೆ ಗಳಲ್ಲೂ ಅನ್ವಯವಾಗಿರುವನು. ಹೀಗಾಗಿ ಈ ಅವಸ್ಥೆಗಳು ಜೀವನಿಗಿಲ್ಲ.

ಅದ್ವೈತ ವಿಚಾರ ಸರಣಿಯಲ್ಲಿ ಈ ಅವಸ್ಥಾತ್ರಯವು ಬಹು ಮುಖ್ಯವಾದುದು. ಏಕೆಂದರೆ ಜೀವನ ವಿಚಾರ—ಅನುಭವಗಳ ಮೂಲವೇ ಇಲ್ಲಿದೆ.

ಕಾರಣಾಽವಿದ್ಯೆ—ಕಾರ್ಯಾಽವಿದ್ಯೆ

ಜೀವನ ಬಂಧನಕ್ಕೆ ಬುದ್ಧಿಯಲ್ಲಿ ಸಂಬಂಧಗೊಂಡ ಅವಿದ್ಯಾತ್ಮಕ, 'ಆವರಣ' ವಿಕ್ಷೇಪ ಶಕ್ತಿಗಳೇ ಕಾರಣವೆಂದು, ಶ್ರೀ ಮದ್ಭಗವದ್ಗೀತೆಯಲ್ಲಿ

'ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ'

ಎಂಬಲ್ಲಿ ಹೇಳಿದೆ. ಕೂಟಸ್ಥ ಚೈತನ್ಯದ ಯಥಾರ್ಥ ಜ್ಞಾನವು ಅವಿದ್ಯೆಯ ಆವರಣ ಶಕ್ತಿಯಾದ ಕಾರಣಾಽವಿದ್ಯೆಯಿಂದ ಮುಚ್ಚಿರುವುದೆಂದೂ ಮತ್ತು ಅದರ ವಿಕ್ಷೇಪ ಶಕ್ತಿಯಿಂದ ಅಂದರೆ ಕಾರ್ಯಾಽವಿದ್ಯೆಯಿಂದ ಜೀವನು ತಾನು ಮಾಡುತ್ತೇನೆ, ತಾನು ಅನುಭವಿಸುತ್ತೇನೆ ಎಂದು ಮೋಹಗೊಂಡು, ಸುಖ ದುಃಖಗಳಿಗೆ ಗುರಿಯಾದವನೆಂದು ಹೇಳಿದೆ. ಹೀಗೆ ಕಾರಣಾಽವಿದ್ಯೆಯು ಕೂಟಸ್ಥ ಚೈತನ್ಯನಾದ ಈಶ್ವರನನ್ನು ಆವರಿಸಿರುವುದು. ಈ ಆವರಣತ್ವವು ಭಾವ ಪದಾರ್ಥಗಳಲ್ಲಿಯೇ ಇರುವುದು. ಆದ ಕಾರಣ ಕಾರಣಾಽವಿದ್ಯೆಯನ್ನು ಭಾವರೂಪವೆಂದೇ ಅಂಗೀಕರಿಸಬೇಕು.

ಇದೇ ವಿಷಯವನ್ನೇ ಗೀತಾಭಾಷ್ಯ (13 ನೇ ಅಧ್ಯಾಯ 2 ನೇ ಶ್ಲೋಕ)ದಲ್ಲಿ ಶ್ರೀಮಚ್ಛಂಕರರು—'ತಾಮಸೋ ಹಿ ಪ್ರತ್ಯಯಃ ಆವರಣಾತ್ಮಕತ್ವಾದವಿದ್ಯಾ ವಿಪರೀತಗ್ರಾಹಕಃ, ಸಂಶಯೋಪಸ್ಥಾಪಕೋ ವಾ, ಅಗ್ರಹಣಾತ್ಮಕೋ ವಾ' ಎಂದು ಹೇಳಿ ವಿಪರೀತ ಗ್ರಹಣಾದಿಗಳು ಆವರಣಾತ್ಮಕವಾದ ಕಾರಣಾಽವಿದ್ಯೆಯಿಂದ ಹುಟ್ಟಿದುವೆಂದೂ, ಕಾರಣಾಽವಿದ್ಯೆಯು, ಕಾರ್ಯಾಽವಿದ್ಯೆಗೆ ಕಾರಣವೆಂದು ಹೇಳುತ್ತಾರೆ.

ಅದೇ ಗೀತಾಭಾಷ್ಯದಲ್ಲಿ ಉಪೋದ್ಘಾತದಲ್ಲಿ, ಮೋಕ್ಷವೆಂದರೆ, 'ಸಹೇತುಕಸ್ಯ ಸಂಸಾರಸ್ಯ ಅತ್ಯಂತೋಪರಮಲಕ್ಷಣ' ಎಂದಿದ್ದಾರೆ.

ಇಲ್ಲಿ 'ಸಹೇತುಕಸ್ಯ' 'ಅತ್ಯಂತ ಉಪರಮ' ಎಂಬುವುಗಳಿಂದ 'ಕಾರಣಾವಿದ್ಯೆ'ಯನ್ನು ಸೂಚಿಸಿದ್ದಾರೆ.

ದಿನವೂ, ಸುಷುಪ್ತಿಯಲ್ಲಿ ಸಂಸಾರವು ಉಪರಮವಾದರೂ, ಆಗ ಜೀವನ ಬುದ್ಧಿ, ವಾಸನ, ಸಂಸ್ಕಾರಗಳು, ಅವಿದ್ಯಾವಿಕ್ಷೇಪ ಶಕ್ತಿ ಸಹಿತವಾಗಿ, ಅವಿದ್ಯೆಯ ಆವರಣ ಶಕ್ತಿಯಲ್ಲಿ ಬೀಜ ಭಾವವನ್ನು ಪಡೆದು ಕೂಟಸ್ಥನೆನಿಸುವ ಈಶ್ವರನಿಗೆ ಆಶ್ರಯವಾದ ಆವರಣಾತ್ಮಕ ಮಾಯೆಯಲ್ಲಿ ಸೇರಿರುವುವು ಮತ್ತು ಸುಷುಪ್ತ್ಯವಸ್ಥೆಯು ಕಳೆದ ಕೂಡಲೇ ಪುನಃ ತಮ್ಮ ತಮ್ಮ ಸ್ವಸ್ಥಾನಗಳಿಗೆ ಬಂದು ಸೇರುವುವು.

ಪ್ರಳಯದಲ್ಲೂ, ಮೂರ್ಛಾವಸ್ಥೆಯಲ್ಲಿಯೂ ಈ ಕ್ರಮವೇ ಅನುಸರಿಸಲ್ಪಡುವುದು. ಮುಕ್ತಿಯಾದಾಗ ಮಾತ್ರ ಎಲ್ಲವೂ ನಿರ್ಗುಣ ಬ್ರಹ್ಮಚೈತನ್ಯವನ್ನು ಆಶ್ರಯಿಸಿರುವ 'ಅವ್ಯಕ್ತ ಶಕ್ತಿ' ಯಲ್ಲಿ ಅತ್ಯಂತ ಉಪರಮವನ್ನು ಹೊಂದುವುದು ಮತ್ತು ಅವುಗಳು ಪುನಃ ಹಿಂದಿರುಗುವುದಿಲ್ಲ. ಪ್ರತಿಬಿಂಬರೂಪ ಚಿದಾಭಾಸನು ಬುದ್ಧ್ಯಾದಿಗಳಿಲ್ಲದ ಪ್ರಯುಕ್ತ, ಕನ್ನಡಿಯಿಲ್ಲದ ಪ್ರತಿಬಿಂಬದಂತೆ ತನ್ನ ಬಿಂಬರೂಪವಾದ ಕೂಟಸ್ಥ ಈಶ್ವರನೊಡನೆ ಏಕೀಭಾವವನ್ನು ಹೊಂದುವನು. ಹೀಗೆ ಶಂಕರರು ಭಾಷ್ಯದಲ್ಲಿ ಕಾರಣಾವಿದ್ಯಾ ಸಹಿತವಾಗಿ ಅತ್ಯಂತ ಉಪರಮವಾಗುವುದು ಮೋಕ್ಷದಲ್ಲೇ ಎಂದು ಸೂಚಿಸಿರುವರು. ಈ ಕಾರಣಾವಿದ್ಯೆಯ ಲಕ್ಷಣವನ್ನು ಶ್ರುತಿಯು 'ಸದಸದ್ವಿಲಕ್ಷಣಂ' ಎಂದು ಹೇಳಿದೆ.

ಈ ಕಾರಣಾವಿದ್ಯೆಗೆ ಸತ್ಯತ್ವವಿಲ್ಲ. ಇದು ಬ್ರಹ್ಮ ಜೀವನ ನಿಜ ಸ್ವರೂಪಜ್ಞಾನದಿಂದ ನಾಶವಾಗುತ್ತದೆ. ಜೀವನ ಸಂಸಾರಕ್ಕೆ ಇದೇ ಆದಿಕಾರಣ.

ಅಹಂಕಾರವನ್ನು ಉಪಾಧಿಯಾಗಿ ಹೊಂದಿ, ಕರ್ತೃತ್ವ, ಭೋಕ್ತೃತ್ವ ರೂಪದಲ್ಲಿ ಈ ಕಾರಣಾವಿದ್ಯೆಯು ತೋರುವುದರಿಂದ ವಿಕ್ಷೇಪ ರೂಪವಾದ ಕಾರ್ಯಾವಿದ್ಯೆಗೆ ಉಪಾದಾನ ಕಾರಣವಾಗಿ ಆವರಣ ಶಕ್ತಿ ರೂಪವಾದ ಕಾರಣಾವಿದ್ಯೆಯಿದೆ ಎಂದು ಗೊತ್ತಾಗುತ್ತದೆ.

ಈ ಕಾರಣಾಜ್ಞಾನದ ನಿವೃತ್ತಿಯು ಜೀವನಿಗೆ ತನ್ನ ನಿಜ ಸ್ವರೂಪವಾದ ಕೂಟಸ್ಥನ ಜ್ಞಾನ ಸಂಪಾದನೆ (ಆತ್ಮಜ್ಞಾನ) ಯಿಂದಲೇ ಆಗಬೇಕು.

ಅಂಧಕಾರವು ಸೂರ್ಯನ ಉದಯವನ್ನೇ ಕೊನೆಯಾಗಿ ಉಳ್ಳಂತೆ ಕಾರಣಾವಿದ್ಯೆಯು ಆತ್ಮಜ್ಞಾನ ಸಂಪಾದನೆಯೆಂಬ ಸೂರ್ಯನ ಉದಯವನ್ನೇ ಕೊನೆಯಾಗಿ ಉಳ್ಳದ್ದಾಗಿದೆ. ಆತ್ಮ ಜ್ಞಾನ ಸಂಪಾದನೆಯಿಂದ ಕೂಟಸ್ಥನೇ ತಾನೆಂಬ ನಿಶ್ಚಯ ಜ್ಞಾನವು ಜೀವನಿಗೆ ಬಂದಿತೆಂದರೆ, ಕಾರಣಾಜ್ಞಾನವೂ ಅದರ ಸಂಬಂಧಿಗಳಾದ ಕಾರ್ಯಾವಿದ್ಯೆ, ಅಹಂಕಾರ ಮಮಕಾರಗಳಿಂದ ಕೂಡಿದ ಬುದ್ಧಿ ಮತ್ತು ಅದರ ವೃತ್ತಿಗಳೂ, ಎಲ್ಲವೂ, ತಮ್ಮೆಲ್ಲಕ್ಕೂ ಮೂಲವಾದ ಅವ್ಯಕ್ತ ಶಕ್ತಿಯಲ್ಲಿ ಲೀನವಾಗಿ ಇಲ್ಲವೆಂತಾಗುವುವು ಶ್ರುತಿಯಲ್ಲಿ 'ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ' ಎಂದು ಹೇಳಿರುವಂತೆ ಜೀವನ್ಮುಕ್ತಿ ಸ್ಥಿತಿಯಲ್ಲಿ ಕಾರಣಾವಿದ್ಯೆ ಸ್ವಲ್ಪ ಕಾಲವಿದ್ದು ಅದೂ ಕೊನೆಗೆ ವಿದೇಹ ಕೈವಲ್ಯದಲ್ಲಿ ಸಂಪೂರ್ಣವಾಗಿ ಹೋಗಿಬಿಡುವುದು. ಬುದ್ಧಿಯಲ್ಲಿನ ಕರ್ಮ ಸಂಸ್ಕಾರಾದಿಗಳ ನಾಶದಿಂದ ಬುದ್ಧಿ ಸಂಬಂಧವು ಕಡಿಮೆಯಾಗುವುದರಿಂದ ಜೀವನು ಪ್ರತಿಬಿಂಬ ಚಿದಾಭಾಸನಾಗನನು. ಬುದ್ಧಿಯೂ ಅವ್ಯಕ್ತಶಕ್ತಿಯಗ ಅಡಗುವುದರಿಂದ ಆ ಬುದ್ಧಿಯಲ್ಲಿ ಪ್ರತಿಫಲನ ವಿಲ್ಲ

ದ್ದಾಗಿ, ಪ್ರತಿಬಿಂಬ ಚಿದಾಭಾಸನು, ಪ್ರತಿಬಿಂಬತ್ವವನ್ನು ಕಳೆದುಕೊಂಡು ಬಿಂಬರೂಪ ಕೂಟಸ್ಥ ಈಶ್ವರನನ್ನು ಸೇರುವನು. ಬಿಂಬಕ್ಕೂ ಪ್ರತಿಬಿಂಬಕ್ಕೂ ಕನ್ನಡಿಯಂತಿದ್ದ ಬುದ್ಧಿ ಇಲ್ಲವಾಗಿ ಕೂಟಸ್ಥ ಚೈತನ್ಯಕ್ಕೆ 'ಕೂಟಸ್ಥ' ನಾಮವೂ ಹೋಗಿ, ಕೇವಲ ಈಶ್ವರ (ಮಾಯಾ ವಿಶಿಷ್ಟಶುದ್ಧ ಚೈತನ್ಯ) ನೇ ಆಗುವನು.

ಕಾರಣಾವಿದ್ಯೆಯು ಶುದ್ಧ ಚೈತನ್ಯದಂತೆ ಅನಾದಿ ಭಾವರೂಪವಾದರೂ ಅದಕ್ಕೆ ನಾಶವುಂಟು. ಏಕೆಂದರೆ ಅದು ಕೂಟಸ್ಥ ಚೈತನ್ಯದಲ್ಲಿ ಆರೋಪಿತವಾಗಿರುವುದು. ಶುದ್ಧ ಚೈತನ್ಯವಾದರೋ ಅದು ಅನಾರೋಪಿತ ಭಾವ ಪದಾರ್ಥ. ಅದರಿಂದ ಶುದ್ಧ ಚೈತನ್ಯಕ್ಕೆ ನಾಶವಿಲ್ಲ.

ಅನಾದಿಭಾವ ಪದಾರ್ಥಕ್ಕೆ ನಾಶವುಂಟೆಂದು ಸಮರ್ಥಿಸಲು ಘಟಪ್ರಾಗಭಾವವನ್ನು (ಘಟ ಹುಟ್ಟುವುದಕ್ಕೆ ಮುಂಚೆ ಇದ್ದ ಅವಸ್ಥೆಯನ್ನು) ತೆಗೆದುಕೊಳ್ಳೋಣ. ಈ ಅವಸ್ಥೆಯು ಘಟ ಹುಟ್ಟುವಿಕೆಯಿಂದ ನಾಶವಾಗುವುದು. ಘಟಪ್ರಾಗಭಾವವು "ಭಾವ" ಪದಾರ್ಥವಲ್ಲವೆನ್ನುವುದಾದರೆ ಅದನ್ನು "ಅಭಾವ" ಎನ್ನಬೇಕು. ಹಾಗೆಂದರೆ ಅಭಾವದಿಂದ ಏನು ಬೇಕಾದರೂ ಹುಟ್ಟಬಹುದು. ಇದು ಅನುಭವ ವಿರುದ್ಧ. ಇದರಿಂದ ಘಟ ಪ್ರಾಗಭಾವವನ್ನು ಭಾವಪದಾರ್ಥವೆಂದೇ ಹೇಳಬೇಕು.

ಘಟಪ್ರಾಗಭಾವವು 'ಅನಾದಿ' ಅಲ್ಲವೆನ್ನುವುದಾದರೆ, ಘಟ ಹುಟ್ಟುವುದಕ್ಕೆ ಮುಂಚೆ ಯಾವಾಗಿನಿಂದ ಘಟಪ್ರಾಗಭಾವವು ಇದ್ದಿತೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಪ್ರಾಗಭಾವವನ್ನು 'ಅನಾದಿ' ಎನ್ನಬೇಕು.

ಈ ರೀತಿ ಅನಾದಿ ಭಾವ ಪದಾರ್ಥವಾದ ಘಟಪ್ರಾಗಭಾವವು ಘಟ ಹುಟ್ಟಿದರೆ ನಾಶವಾಗುವಂತೆ, ಅನಾದಿ ಭಾವರೂಪವಾದ ಶುದ್ಧ ಚೈತನ್ಯದಲ್ಲಿ ಆರೋಪಿತವಾದ ಕಾರಣಾವಿದ್ಯೆಯು ಬ್ರಹ್ಮ ಜ್ಞಾನದಿಂದ ನಿವೃತ್ತವಾಗುವುದು.★

[ಕಾರಣ ದೇಹದಲ್ಲಿ ಆನಂದಮಯಕೋಶವಿದೆ. ಆನಂದದೊಡನೆ ಬೆರೆತ ಅವಿದ್ಯೆಯೊಳಗಿನ ಮಲಿನಸತ್ವಕ್ಕೆ ಆನಂದಮಯಕೋಶವೆಂದು ಹೆಸರು.]

ಮಾಯಾ ವಿಶಿಷ್ಟ ಶುದ್ಧ ಚೈತನ್ಯವೇ (ಈಶ್ವರನೇ) ಸಮಷ್ಟಿಸೂಕ್ಷ್ಮ ಪ್ರಪಂಚದ (ಎಲ್ಲಾ ಸೂಕ್ಷ್ಮ ಶರೀರ ಸಮೂಹ ಪ್ರಪಂಚದ) ತಾದಾತ್ಮ್ಯಾಭಿಮಾನದಿಂದ 'ಹಿರಣ್ಯಗರ್ಭ' ನೆಂದೂ, ಸಮಷ್ಟಿಸ್ಥೂಲ ಪ್ರಪಂಚದ (ಎಲ್ಲಾ ಸ್ಥೂಲ ಶರೀರಗಳ ಸಮೂಹ ಪ್ರಪಂಚದ) ತಾದಾತ್ಮ್ಯಾಭಿಮಾನದಿಂದ 'ವಿರಾಟ್' ಎಂದೂ ಹೇಳಿಸಿಕೊಳ್ಳುವನು.

[ಸಮಷ್ಟಿ ಎಂದರೆ ಸಕಲ ಜೀವರುಗಳ ಏಕೀಭೂತ ಶರೀರ. ವ್ಯಷ್ಟಿ ಎಂದರೆ ಪ್ರತಿಯೊಂದು ಬೇರೆ ಇರುವ ಶರೀರ.]

★ ಅವಸ್ಥಾತ್ರಯದ ಗುಣಾದಿ ವಿಭಾಗಗಳು

ದೇಹ	ಅವಸ್ಥಾ	ಗುಣ	ಅಭಿಮಾನಿ	ಭೋಗ	ಮಾತ್ರಾ	ಸ್ಥಾನ	ವಾಕ್	ಚರಣ	ದೇವತಾ
ಸ್ಥೂಲ	ಜಾಗ್ರತ್	ರಜ	ವಿಶ್ವ	ಸ್ಥೂಲ	ಅಕಾರ	ನಯನ	ವೈಖ	ಪ್ರಥಮ	ಬ್ರಹ್ಮ
ಸೂಕ್ಷ್ಮ	ಸ್ವಪ್ನ	ಸತ್ವ	ತೈಜಸ	ಪ್ರವಿವಿಕ್ತ	ಉಕಾರ	ಕಂಠ	ಮಾಧ್ಯಮ	ದ್ವಿತೀಯ	ವಿಷ್ಣು
ಕಾರಣ	ಸುಷುಪ್ತಿ	ತಮ	ಪ್ರಾಜ್ಞ	ಆನಂದ	ಮಕಾರ	ಹೃದಯ	ಪಶ್ಯಂತಿ	ತೃತೀಯ	ರುದ್ರ

ದೇಹಗಳಿಗೆ ಸಾಕ್ಷಿಯಾದ ನಾಲ್ಕನೆಯ ಮಹಾಕಾರಣ ದೇಹದ ವಿಭಾಗಗಳು

ದೇಹ	ಅವಸ್ಥಾ	ಗುಣ	ಅಭಿಮಾನಿ	ಭೋಗ	ಮಾತ್ರ	ಸ್ಥಾನ	ವಾಕ್	ಚರಣ	ದೇವತಾ
ಮಹಾಕಾರಣ ದೇಹ	ತುರ್ಯ	ಶುದ್ಧ ಸತ್ವ	ಪ್ರತ್ಯಗಾತ್ಮ	ಅಕ್ಷಯ ಭೋಗ	ಓಂಕಾರ	ಮೂರ್ಧನ್ಯ	ಪರಾವಾಕ್	ಚತುರ್ಥ	ಈಶ್ವರ

ಈಶ್ವರನ ಹಿರಣ್ಯಗರ್ಭಾದಿ ದೇಹಗಳ ವಿವರಣೆ

ಇವುಗಳನ್ನು ವಿಶದವಾಗಿ ಈ ಕೆಳಗೆ ಕಂಡಂತೆ ಹೇಳಬಹುದು. ಮಾಯೋಪಾಧಿಯಿಂದ ಶುದ್ಧ ಚೈತನ್ಯಕ್ಕೆ ಈ ಶರೀರಗಳು ಕಲ್ಪಿತವಾದವುಗಳು. ಮಾಯಾ ವಿಶಿಷ್ಟ ಶುದ್ಧ ಚೈತನ್ಯಕ್ಕೆ 4 ದೇಹಗಳನ್ನು ಕಲ್ಪಿಸಿದೆ.

1	2	3	4
ವಿರಾಟ್	ಹಿರಣ್ಯಗರ್ಭ	ಅವ್ಯಾಕೃತ	ಮೂಲಪ್ರಕೃತಿ
ಉಪಾಧಿ:			
ಸಮಷ್ಟಿ ಸ್ಥೂಲ ಶರೀರೋಪಾಧಿಕ	ಸಮಷ್ಟಿ ಸೂಕ್ಷ್ಮಶರೀರೋಪಾಧಿಕ	ಸಮಷ್ಟಿ ಕಾರಣ ದೇಹೋಪಾಧಿಕ	ಮಹಾಕಾರಣ ದೇಹೋಪಾಧಿಕ
ಹೆಸರುಗಳು :—			
ವೈರಾಜಸ ವೈಶ್ವಾನರ (ವಿಶ್ವ ಸಮಷ್ಟಿ)	ಸೂತ್ರಾತ್ಮ ಮಹಾಪ್ರಾಣ (ತೈಜಸ ಸಮಷ್ಟಿ)	ಅಂತರ್ಯಾಮಿ ಈಶ್ವರ (ಪ್ರಾಜ್ಞ ಸಮಷ್ಟಿ)	ಪರಮಾತ್ಮ

ಈಶ್ವರನ 4 ದೇಹಗಳ ವಿವರ

ವಿರಾಟ್ :—

ಪೃಥಿವಿ, ಅಪ್ಪು, ಅಗ್ನಿ, ವಾಯು, ಸೂರ್ಯ, ಚಂದ್ರ, ಪರಬ್ರಹ್ಮ ಚೈತನ್ಯದ ಪ್ರತಿಬಿಂಬ, ಪರಮಾತ್ಮ ಈ 8 ಈಶ್ವರನಿಗೆ ಸ್ಥೂಲ ದೇಹಗಳು. ಪಿಂಡ ಬ್ರಹ್ಮಾಂಡಗಳಲ್ಲೆಲ್ಲಾ ಈ ಅಷ್ಟಮೂರ್ತಿಗಳೇ ತುಂಬಿವೆ. ಇವೇ ಈಶ್ವರನಿಗೆ ಅಷ್ಟತನುಗಳು. ಈ ಶರೀರಾಭಿಮಾನಿಯೇ ವಿರಾಟ್‌ಪುರುಷನು. ಇವನ ರೂಪವೇ ಜಗತ್ತು. ಸಮಸ್ತ ನಾಮಗಳೂ ಸಮಸ್ತ ಕ್ರಿಯೆಗಳೂ ಸಕಲ ವ್ಯವಹಾರಗಳೂ ಇವನಲ್ಲೇ ತೋರಿ ಅಡಗುವುವು. ಈ ವಿರಾಟ್ ಪುರುಷನಿಗೇ ಅವಸ್ಥೆ ಉತ್ಪತ್ತಿ. ಸ್ಥಾನ ಸೂರ್ಯ. ಭೋಗ—ಸರ್ವಕರ್ತೃತ್ವ. ಗುಣ—ರಾಜಸ, ಅಹಂಕಾರ. ಶಕ್ತಿ—ಕ್ರಿಯೆ. ಅಭಿಮಾನ ದೇವತೆ - ಬ್ರಹ್ಮ. ಅಕ್ಷರ - ಅಕಾರ. ಇದರಲ್ಲಿ ವ್ಯಾಪಕನಾದ ಆತ್ಮ—ಭೂತಾತ್ಮ. ಇವನ ಶರೀರವೇ ವಿರಾಟ್

ಹಿರಣ್ಯ ಗರ್ಭ :—

ಪಂಚಃ ಅಂತಃಕರಣಗಳು. ಪಂಚ ಪ್ರಾಣ, ದಶೇಂದ್ರಿಯಗಳು ಪಂಚ ತನ್ಮಾತ್ರೆಗಳು ಇವುಗಳೆಲ್ಲಾ ಒಟ್ಟಾಗಿ ಕೂಡಿದ ಶರೀರವೇ ಈಶ್ವರನಿಗೆ ಶರೀರ. ಇದರ ಅಭಿಮಾನಿ ಹಿರಣ್ಯಗರ್ಭ. ಈ ಹಿರಣ್ಯಗರ್ಭನಿಗೆ:— ಶ್ರೋತೇಂದ್ರಿಯ—ದಶದಿಕ್ಕುಗಳು. ತ್ವಗಿಂದ್ರಿಯ ವಾಯು. ನೇತ್ರ – ಸೂರ್ಯ. ಜಿಹ್ವೆ – ವರುಣ ಘ್ರಾಣೇಂದ್ರಿಯ – ಅಶ್ವಿನಿದೇವತೆಗಳು. ವಾಕ್ ಅಗ್ನಿ. ಪಾಣಿ ಇಂದ್ರ. ಪಾದ—ಉಪೇಂದ್ರ. ಗುಹ್ಯ— ಬ್ರಹ್ಮ. ಪಾಯು–ಮೃತ್ಯು. ಜ್ಞಾತೃ—ಅಂತಃಕರಣ ಮನಸ್ಸು—ಚಂದ್ರ. ಬುದ್ಧಿ—ಬ್ರಹ್ಮ. ಚಿತ್ತ—ಕ್ಷೇತ್ರಜ್ಞ. ಅಹಂಕಾರ—ರುದ್ರ. ಈ 14 ದೇವತೆಗಳಿಂದ ತುಂಬಿದ ಶರೀರವೇ ಹಿರಣ್ಯಗರ್ಭ ಶರೀರ ಅವಸ್ಥೆ— ಸ್ಥಿತಿ ಸ್ಥಾನ—ಚಂದ್ರ. ಭೋಗ—ಸರ್ವಪಾಲಕತ್ವ. ಗುಣ—ಸಾತ್ವಿಕಾಹಂಕಾರ ಶಕ್ತಿ—ಇಚ್ಛಾ. ಅಭಿಮಾನದೇವತೆ –ವಿಷ್ಣು ಅಕ್ಷರ ಉಕಾರ. ಇವನೇ ಆದಿಜೀವನಾದ ಹಿರಣ್ಯಗರ್ಭ.

ಅವ್ಯಾಕೃತ :—

ಅವ್ಯಾಕೃತವು ಈಶ್ವರನ ಕಾರಣದೇಹ ಅವಸ್ಥೆ— ಪ್ರಳಯ. ಸ್ಥಾನ-ಅಗ್ನಿ ಭೋಗ—ಸರ್ವಸಂಹಾರಕತ್ವ. ಗುಣ— ತಾಮಸಾಹಂಕಾರ. ಶಕ್ತಿ— ಜ್ಞಾನ. ಅಭಿಮಾನಿ – ರುದ್ರ. ಅಕ್ಷರ ಮಕಾರ. ಈ ದೇಹದಲ್ಲಿ ವ್ಯಾಪಕನಾದ. ಆತ್ಮನೇ ಶುದ್ಧಾತ್ಮನೆನಿಸಿ ಕೊಳ್ಳುವನು.

ಮೂಲಪ್ರಕೃತಿ :—

(ಮೂಲ ಪ್ರಕೃತಿಯೇ ಮಹಾಕಾರಣ ದೇಹ ' ಇದು ತನ್ನ ವಿಲಾಸ ದಿಂದ ಪಂಚ ಭೂತಾದಿ ದೇಹೇಂದ್ರಿಯಾದಿ ಪಂಚಕಗಳಿಗೆ ಆದಿ ಕಾರಣವಾಗಿ ವಿರಾಟ್ ಹಿರಣ್ಯ ಗರ್ಭ, ಅವ್ಯಾಕೃತ ಈ ' ದೇಹಗಳಿಗೆ ಸಾಕ್ಷಿಯಾಗಿದೆ. ಇದಕ್ಕೆ 'ಈಶ್ವರತತ್ವ' ವೆಂತಲೂ 'ಅನಾಹತ' ವೆಂತಲೂ ಹೆಸರು. ಇದು ಭೂತಾದಿ ಪಂಚಕರಣಾಂತವಾದ ತತ್ವಗಳಿಗೆ ಅಭಿಮಾನ ದೇವತೆಯಾದ ಪಂಚಬ್ರಹ್ಮವೆನಿಸಿದೆ.' ಸ್ವರೂಪ – ಶುದ್ಧಜ್ಞಪ್ತಿ. ತುರ್ಯ— ಸ್ವರಾಟ್. ಗುಣ – ಶುದ್ಧಸಾತ್ವಿಕಾಹಂಕಾರ. ಅವಸ್ಥೆ–ಸರ್ವಸಾಕ್ಷಿತ್ವ. ಸ್ಥಾನ–ಬ್ರಹ್ಮಾಂಡಾತೀತ. ಭೋಗ— ಷಡ್ಗುಣೈಶ್ವರ್ಯ ಸಂಪತ್ಕರ. ಶಕ್ತಿ ಸುಜ್ಞಾನ. ಅಭಿಮಾನ–ಸರ್ವಾಭಿಮಾನ. ಮಾತೃಕೆ–ಓಂಕಾರ ಇಲ್ಲಿನ ವ್ಯಾಪಕ. ಆತ್ಮ ಮಹದಾತ್ಮ ಅಥವಾ ಪರಮಾತ್ಮ ಅಥವಾ ಪರ ಬ್ರಹ್ಮ ಚೈತನ್ಯ.

ಈಶ್ವರನಿಗೆ ಪ್ರಪಂಚದ ಸೃಷ್ಟಿಸ್ಥಿತಿ ಲಯಾತ್ಮಕತ್ವ

ಈಶ್ವರನು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದ ವಿಷಯ

ದಲ್ಲಿ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪ್ರಪಂಚದ ಸೃಷ್ಟಿಗೆ ಆರಂಭದಲ್ಲಿ ಮೊದಲು " ಓಂ " ಕಾರನಾದ ಆವಿರ್ಭವಿಸಿತು. ನಿರ್ಗುಣ ಬ್ರಹ್ಮಕ್ಕೂ ಸಕ್ರಿಯ ಅವ್ಯಕ್ತ ಶಕ್ತಿಗೂ, ನಿರ್ಗುಣ ಬ್ರಹ್ಮದ ಬಹುವಾಗಬೇಕೆಂಬ ಇಚ್ಛಾಮಾತ್ರ ಸಂಯೋಗದ ಪರಿಣಾಮವಾಗಿ ಈ ನಾದವು ಉತ್ಪನ್ನವಾಯಿತು. ಈ ನಾದ ದಿಂದ " ಮಹಾಬಿಂದು " ಉತ್ಪನ್ನವಾಯಿತು. ಈ ನಾದ "ಮಹಾಬಿಂದು" ಗಳು ಕ್ರಿಯಾಶಕ್ತಿ ರೂಪಗಳು. ಇವುಗಳು ಕಾಮ ಕಾಮಕಲಾ ಎನಿಸಿ 3 ಶಕ್ತಿಗಳಾಗಿ ವಿಭಾಗವಾದವು. ಹೀಗೆ ಆ ಓಂಕಾರನಾದವೇ ' ಅ ' ಕಾರ ' ಉ ' ಕಾರ 'ಮ' ಕಾರ ಬೀಜಾಕ್ಷರ ಶಕ್ತಿ ರೂಪಗಳಾದುವು. ಅವುಗಳಲ್ಲಿ ಈಶ್ವರನು ಪ್ರತಿಬಿಂಬಿಸಿ ಕ್ರಮವಾಗಿ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯತತ್ವಾತ್ಮಕನಾದನು. ಅಲ್ಲದೆ ಅ ಕಾರ, ಉ ಕಾರ, ಮ ಕಾರಗಳಲ್ಲಿ ಅಧಿಷ್ಠಾತೃ ರೂಪದಲ್ಲಿ ಪುಂ ಸ್ತ್ರೀರೂಪದಿಂದ ಕೂಡಿ ಪ್ರಾದುರ್ಭವಿಸಿದನು.

' ಅ ' ಕಾರದಲ್ಲಿ ಬ್ರಹ್ಮ ಸರಸ್ವತೀ ರೂಪದಿಂದ, ಪ್ರಪಂಚದ ಸೃಷ್ಟಿ ಕಾರ್ಯಗಳಲ್ಲಿಯೂ ' ಉ ' ಕಾರದಲ್ಲಿ ವಿಷ್ಣು ಲಕ್ಷ್ಮೀರೂಪದಿಂದ ಸ್ಥಿತಿ ಕಾರ್ಯಗಳ ಲ್ಲಿಯೂ, ಶಿವ ಪಾರ್ವತೀ ರೂಪದಿಂದ ಲಯ ಕಾರ್ಯಗಳಲ್ಲಿಯೂ ಪ್ರವರ್ತಿಸಹತ್ತಿ ದನು.

ಪ್ರಪಂಚದ ಸೃಷ್ಟಿಯನ್ನು ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ವಿಧವಾಗಿ ಹೇಳಿದೆ. ಉಪನಿಷತ್ತುಗಳಿಗೆ ಮಿಥ್ಯಾ ಜಗತ್ತಿನ ಸೃಷ್ಟಿಯಲ್ಲಿ ಅಷ್ಟು ಪ್ರಾಮುಖ್ಯವಿಲ್ಲ. ಬ್ರಹ್ಮಸ್ವರೂಪವೊಂದೇಸತ್ಯವೆಂದೂ ಸೃಷ್ಟಿಯೆಲ್ಲಾ ಮಿಥ್ಯೆಯೆಂದೂ ತಿಳಿಸುವುದೇ ಅವರ ಮುಖ್ಯ ಧ್ಯೇಯ. ಏಕೆಂದರೆ ಬ್ರಹ್ಮನೇ ತಾನೆಂಬ ಐಕ್ಯಜ್ಞಾನ ದಿಂದಲೇ ಮೋಕ್ಷವು.

ಸಂಸಾರ–ಸಂಸಾರದಿಂದ ಪಾರಾಗಲು ಈಶ್ವರಾನುಗ್ರಹ

ಮಾಯೋಪಾಧಿಕನಾದ ಈಶ್ವರನು, ತಾನು ಶುದ್ಧ ಬುದ್ಧ ಮುಕ್ತನೂ ಸಚ್ಚಿದಾನಂದ ಸ್ವರೂಪನೂ ಆದ ಬ್ರಹ್ಮವೇ ಆಗಿದ್ದರೂ ಪ್ರಾಣಿಗಳ ಶರೀರದಲ್ಲಿ ಪ್ರವೇಶಿಸಿ ಅಲ್ಲಿನ ಬುದ್ಧಿಯಲ್ಲಿ ಪ್ರತಿಬಿಂಬಿಸಿ ಚಿದಾಭಾಸನೆನಿಸಿದನು. ಮತ್ತು ತಾನು ಬಿಂಬವಾದ ಕೂಟಸ್ಥನೆನಿಸಿದನು.

ಈ ಚಿದಾಭಾಸನು ಅವಿದ್ಯೆಯ ಆವರಣ ವಿಕ್ಷೇಪಶಕ್ತಿಗಳಿಂದ ಬಂಧಿತನಾಗಿ ಕಾರ್ಯಕಾರಣಸಂಘಾತದಿಂದ ತನ್ನನ್ನು ಬೇರ್ಪಡಿಸಿ ತಾನು ಕೂಟಸ್ಥ ಈಶ್ವರನೇ ಎಂದು ಸರಿಯಾಗಿ ತಿಳಿದುಕೊಳ್ಳದೆ, ಅವಿದ್ಯೆಯೆಂಬ ಕಣ್ಣಿನ ಪರೆಯಿಂದ ಕುರುಡನಾಗಿ ಬುದ್ಧಿ, ಶರೀರಾದಿಗಳಲ್ಲಿ ಅಭಿಮಾನಿಸಿ, ಜೀವನೆನಿಸಿ, ಕರ್ತೃತ್ವ, ಭೋಕ್ತೃತ್ವರೂಪವಾದ

ಸಂಸಾರಸಿದ್ಧಿಯನ್ನು ಪಡೆದು, ತೊಳಲಹತ್ತಿದನೆಂಬುದನ್ನು ಹಿಂದೆಯೇ ತಿಳಿಸಿದೆ. ದೇಹವೇ ತಾನೆಂಬ ಅಭಿಮಾನದಿಂದ ಗರ್ಭವಾಸವೇ ಮುಂತಾದ ಮಹತ್ತರ ದುಃಖವು ಬರಹತ್ತಿತು. ಶಾಶ್ವತವಲ್ಲದ ದೇಹಾದಿಗಳಲ್ಲಿ ಶಾಶ್ವತವೆಂಬ ಬುದ್ಧಿಯನ್ನಿಟ್ಟು ಕರ್ಮ ಮಾಡಲಾರಂಭಿಸಿದನು.

ಇತ್ಯಾದಿ ಚಿಂತಯನ್ ಜೀವೋ ಯೋನಿಯಂತ್ರಪ್ರಪೀಡಿತಃ ।
ಜಾಯಮಾನೋತಿದುಃಖೇನ ನರಕಾತ್ಪಾತಕೀ ಯಥಾ ॥

ಅಧ್ಯಾತ್ಮ ರಾಮಾಯಣ

ಜೀವನು ಗರ್ಭದಲ್ಲಿ ಅನೇಕ ಚಿಂತಾಪರನಾಗಿ, ಯೋನಿಯೆಂಬ ಯಂತ್ರದಿಂದ ತೊಂದರೆ ಹೊಂದುತ್ತಾ, ನರಕದಿಂದ ಪಾಪಿಯು ಬರುವಂತೆ ಕಷ್ಟದಿಂದ ಈಚೆಗೆ ಬರುವವನಾದನು.

ಪೂತಿವ್ರಣಾನ್ನಿಪತಿತಃ ಕೃಮಿರೇಷ ಇವಾಪರಃ ।
ತತೋ ಬಾಲ್ಯಾದಿ ದುಃಖಾನಿ ಸರ್ವಾಣ್ಯೇವೋಪಭುಂಜತೇ ॥

ಅಧ್ಯಾತ್ಮ ರಾಮಾಯಣ

ಎಂಬಂತೆ ಹಾಗೆ ಈಚೆಗೆ ಬಂದಾಗ ದುರ್ಗಂಧದಾಯಕವಾದ ಗಾಯದಿಂದ ಹೊರಗೆ ಬರುವ ಹುಳುವಿನಂತಿರುವನು. ಅನಂತರ, ಬಾಲ್ಯವೇ ಮುಂತಾದ ಅನೇಕ ಬಗೆಯಾದ ದುಃಖಗಳನ್ನು ಅನುಭವಿಸುವನು.

ಪಿತೃಮಾತೃಸುತಭ್ರಾತೃದಾರಬಂಧ್ವಾದಿಸಂಗಮಃ ।
ಪ್ರಾಪಯಾಮಿವ ಜಂತೂನಾಂ ನದ್ಯಾಂ ಕಾಷ್ಠೌಘವಚ್ಚಲ ॥
ಛಾಯೇವ ಲಕ್ಷ್ಮೀಶ್ಚಪಲಾ ಪ್ರತೀತಾ ತಾರುಣ್ಯಮಂಬೂರ್ಮಿವದ
ಧ್ರುವಂ ಚ ।
ಸ್ವಪ್ನೋಪಮಂಸ್ತ್ರೀಸುಖಮಾಯುರಲ್ಪಂ ತಥಾಪಿ ಜಂತೋರಭಿಮಾನ
ವಿಷಃ ॥
ಸಂಸೃತಿಃ ಸ್ವಪ್ನ ಸದೃಶೀ ಸದಾರೋಗಾದಿ ಸಂಕುಲಾ ।
ಗಂಧರ್ವನಗರಪ್ರಖ್ಯಾ ಮೂಢಸ್ತಾಮನುವರ್ತತೇ ॥
ಜರಾವ್ಯಾಘ್ರೀವ ಪುರತಃ ತರ್ಜಯಂತ್ಯವತಿಷ್ಠತೇ ।
ಮೃತ್ಯುಸ್ಸರ್ಪೈಹ ಯಾತ್ಯೇಷ ಸಮಯಂ ಸಂಪ್ರತೀಕ್ಷತೇ ॥

ಅಧ್ಯಾತ್ಮ ರಾಮಾಯಣ

ಎಂಬಂತೆ, ತಾಯಿ, ತಂದೆ, ಹೆಂಡತಿ, ಮಗ, ಬಂಧುಗಳು, ಇವರ ಸೇರುವಿಕೆಯು, ಅವರಟ್ಟಿಗೆಯಲ್ಲಿ ಜನಗಳು ಕಾರ್ಯವಶದಿಂದ ಒಟ್ಟಿಗೆ ಒಂದಡೆಯಲ್ಲಿ ಸೇರಿ ಅನಂತರ ಚದುರುವಂತೆಯೂ, ನದಿಯಲ್ಲಿ ಕಟ್ಟಿಗಳು ಪ್ರವಾಹದ ಹೊಡೆತದಿಂದ ಒಂದೆಡೆಯಲ್ಲಿ ಸೇರಿ, ಕದಲುವಂತೆಯೂ ಚಂಚಲವಾದುದು. ಗಳಿಸಿದ ಸಂಪತ್ತು ನೆರಳಿನಂತೆ

ಸ್ಥಿರವಲ್ಲದ್ದು. ಯೌವನವು ನೀರನ ಮೇಲಿನ ಅಲೆಯಂತೆ ನಿಲ್ಲದಿರತಕ್ಕದ್ದು. ಕಾವ ಸುಖವು ಸ್ವಪ್ನದಂತೆ ಕ್ಷಣಿಕವು.

ಆಯುಸ್ಸು ಬಹು ಸ್ವಲ್ಪವಾದುದು. ಆದರೂ ಕೂಡ ಇವುಗಳನ್ನು ಶಾಶ್ವತ ವೆಂದು ತಿಳಿದು ಅಭಿಮಾನಿಸುವನು. ಮುಪ್ಪಾದರೋ, ಎದುರಿಗೆ ನಿಂತಿರುವ ಹುಲಿ ಯಂತೆ ಹೆದರಿಸುತ್ತಾ ನಿಂತಿರುತ್ತದೆ. ಮೃತ್ಯುವು ಸಮಯವನ್ನು ಕಾಯುತ್ತಾ ಜೊತೆಯಲ್ಲಿಯೇ ಸುತ್ತಿಕೊಂಡು ಬರುತ್ತಿರುತ್ತದೆ. ಈ ದೇಹವಾದರೋ !

ತ್ವಗಸ್ಥಿಮಾಂಸವಿಣ್ಮೂತ್ರರೇತೋರಕ್ತಾದಿಸಂಯುತಃ ।
ವಿಕಾರೀ ಪರಿಣಾಮೀ ಚ ಕ್ರಿಮಿವಿಡ್ಭಸ್ಮಸಂಜ್ಞಕೇ ॥

ಅಧ್ಯಾತ್ಮ ರಾಮಾಯಣ

ಎಂಬಂತೆ, ಅಗ್ನಿಯಲ್ಲಿ ಬೆಂದುಹೋಗಿ ಬೂದಿಯಾಗುತ್ತದೆ. ಇದು ವಿಕಾರಿ, ನಶ್ವರ ವಾದುದ್ದು ಇದನ್ನು ಹುಳುಗಳು ತಿನ್ನುವುದರಿಂದ, ಹುಳುವೆಂದೇ ಕರೆಯುತ್ತಾರೆ.

ಇಂತಹ ಗಂಧರ್ವನಗರದಂತೆ ಕ್ಷಣಿಕವಾದ ಸಂಸಾರಕ್ಕೆ ಅಭಿಮಾನಿಸು ತ್ತಿರುವನು.

ಶ್ರೀ ಮಚ್ಛಂಕರರು ಐತರೇಯ ಉಪನಿಷತ್ತಿನಲ್ಲಿ ಸಂಸಾರಸಾಗರವನ್ನು ಸ್ವಾರಸ್ಯವಾಗಿ ವರ್ಣಿಸಿರುವರು.

"ಸಂಸಾರಮುಪ್ರೇ ಮಹತಿ. ಅವಿದ್ಯಾ ಕಾಮಕರ್ಮ ಪ್ರಭವ ದುಃಖೋ ದಕೇ, ತೀವ್ರರೋಗಜರಾಮೃತ್ಯು ಮಹಾಗ್ರಾಹೇ, ಅನಾದೌ, ಅನಂತೇ, ಅಪಾರೇ ನಿರಾಲಂಬೇ ವಿಷಯೇಂದ್ರಿಯ ಜೀವಿತ ಸುಖ, ಲವಲಕ್ಷಣ ವಿಶ್ರಾಮೇ, ಪಂಚೇಂದ್ರಿ ಯಾರ್ಥತೃಷ್ಣಾಮಾರುತ ವಿಕ್ಷೋಭೋತ್ಥಿತಾನರ್ಥ ಶತಮಹೋರ್ಮೌ, ಮಹಾರೌರವಾ ದ್ಯನೇಕ ನಿರಯಗತಹಾಹೇತ್ಯಾದಿಕೂಜಿತಾಕ್ರೋಶನೋದ್ಭೂತಮಹಾರವೇ, ಸತ್ಯಾ ರ್ಜವದಾನ, ದಯಾಹಿಂಸಾಶಮದಮಧೃತ್ಯಾದ್ಯಾತ್ಮಗುಣ ಪಾ ಥೇ ಯ ಪೂ ರ್ಣ ಜ್ಞಾನೋಡುಪೇ, ಸತ್ಸಂಗ ಸರ್ವತ್ಯಾಗಮಾರ್ಗೇ ಮೋಕ್ಷತೀರೇ ಮಹತಿ ಅರ್ಣವೇ ಪ್ರಾಪತನ್."

ಅಂದರೆ ಅವಿದ್ಯಾಕಾಮಕರ್ಮಗಳಿಂದ ಉಂಟಾಗುವ ದುಃಖವೆಂಬ ನೀರಿ ನಿಂದ ಕೂಡಿಯೂ. ಸಹಿಸಲಾರದ ವ್ಯಾಧಿಗಳು, ಮುದಿತನ ಮರಣಗಳೆಂಬ ದೊಡ್ಡ ದೊಡ್ಡ ಮೊಸಳೆಗಳಿಂದ ಕೂಡಿಯೂ ಮೊದಲು ಕೊನೆಯೆಂಬುದಿಲ್ಲದೆ ಅಪಾರವಾಗಿಯೂ ಆಶ್ರಯವಿಲ್ಲದ್ದಾಗಿಯೂ, ವಿಷಯೇಂದ್ರಿಯಗಳಿಂದ ಜನಿಸುವ ಅಲ್ಪ ಸುಖರೂಪ ವಿಶ್ರಾಂತಿ ಸ್ಥಳವುಳ್ಳದ್ದಾಗಿಯೂ, ಪಂಚೇಂದ್ರಿಯಗಳ ಬಯಕೆಯೆಂಬ ಬಿರುಗಾಳಿಯ ಹೊಡೆತದಿಂದ ಎದ್ದ ಅನರ್ಥಗಳೆಂಬ ಅನೇಕ ಹೆದ್ದೆರೆಗಳುಳ್ಳದಾಗಿಯೂ ಮಹಾ ರೌರವವೇ ಮುಂತಾದ ನರಕಗಳಲ್ಲಿ ಪಾಪಿಷ್ಠರು ಕಿರಿಚಿಕೊಳ್ಳುವ ಹಾಹಾ ! ಮುಂತಾದ

ಕೂಗುಗಳಿಂದಲೂ, ಬೈಗುಳಗಳಿಂದಲೂ ಉಂಟಾದ ಮಹಾಶಬ್ದವುಳ್ಳದ್ದಾಗಿಯೂ, ಸತ್ಯ, ಆರ್ಜವ, ದಾನ, ದಯೆ, ಅಹಿಂಸೆ ಶಮ, ದಮ, ಧೃತಿ ಮುಂತಾದ ಆತ್ಮಗುಣಗಳೆಂಬ ದಾರಿಯ ಬುತ್ತಿಯಿಂದ ತುಂಬಿರುವ ಜ್ಞಾನವೆಂಬ ದೋಣಿಯುಳ್ಳದ್ದಾಗಿಯೂ ಸತ್ಸಂಗ ಸರ್ವತ್ಯಾಗ ಎಂಬ ಮಾರ್ಗವುಳ್ಳದ್ದಾಗಿಯೂ ಮೋಕ್ಷವೆಂಬ ದಡವುಳ್ಳದ್ದಾಗಿಯೂ ಇರುವ ಅರ್ಣವದಲ್ಲಿ ಬಿದ್ದರು " ಎಂದು ಸಂಸಾರದ ವರ್ಣನೆಯನ್ನು ಚಿತ್ರಿಸಿರುವರು.

ಮರಣಕಾಲ ಬಂದಿತೆಂದರೆ ಗಳಿಸಿದ ಸಮಸ್ತವೂ ವ್ಯರ್ಥ ಎಂಬುದನ್ನು ಜಗದ್ಗುರು ಶ್ರೀ ಚಂದ್ರಶೇಖರಭಾರತಿಸ್ವಾಮಿಗಳು " ಸರ್ವಂವ್ಯರ್ಥಂ ಮರಣಸಮಯೇ ಸಾಂಬ ಏಕಸ್ಸಹಾಯಃ " ಎಂದು ಹೇಳಿರುವರು.

ಇಂತಹ ದುಃಖಮಯವಾದ ಸಂಸಾರದಿಂದ ಪಾರಾಗಲು ಪ್ರಪಂಚದಲ್ಲಿ ಜನ್ಮತಳೆದ ನಾವು ಏನು ಮಾಡಬೇಕು. ಎಂಬುದು ವಿಚಾರಣೀಯ ಅಂಶವಾಗಿದೆ.

ಜಗದ್ಗುರುಗಳು ಅಪ್ಪಣೆಕೊಡಿಸಿರುವಂತೆ ಈಶ್ವರನ ಸಹಾಯವು ನಮಗೆ ಅತ್ಯವಶ್ಯವಾದುದು.

ಮಾಯೋಪಾಧಿಕ ಈಶ್ವರನು ಪ್ರಾಣಿಗಳ ದೇಹದಲ್ಲಿ ಅವರುಗಳ ಕರ್ಮಕ್ಕೆ ತಕ್ಕಂತೆ ಫಲಕೊಡಲು ಬುದ್ಧಿಪ್ರೇರಕನಾಗಿ, ಪ್ರವೇಶಿಸಿದನೆಂದು ಹೇಳಿದೆಯಷ್ಟೇ.

ಈಶ್ವರನು, ಬುದ್ಧಿಯಲ್ಲಿರುವವನಾಗಿ, ಬುದ್ಧಿಯೊಳಗಣವನಾಗಿ, ಬುದ್ಧಿಗೆ ಗೋಚರವಾಗದೆ. ಬುದ್ಧಿಯೇ ಶರೀರವಾಗಿರುವವನಾಗಿ, ಒಳಗೆಯೇ ಅದರ ಕರ್ಮಕ್ಕೆ ತಕ್ಕಂತೆ ಬುದ್ಧಿಯನ್ನು ಆಳುತ್ತಿರುವ " ಅಂತರ್ಯಾಮಿ " ಎಂದು ಬೃಹದಾರಣ್ಯಕದ ಅಂತರ್ಯಾಮಿ ಬ್ರಾಹ್ಮಣದಲ್ಲಿ ಹೇಳಿದೆ.

ಈ ಈಶ್ವರನು ಎಲ್ಲಾ ಪ್ರಾಣಿಗಳ ಹೃದಯ ಗುಹೆಯಾದ ಬುದ್ಧಿಯಲ್ಲಿದ್ದು, ಯಂತ್ರಗಳಿಗೆ ಕಟ್ಟಿದ ಮರದ ಗೊಂಬೆಗಳನ್ನು ಸೂತ್ರಧಾರನು, ಯಂತ್ರವನ್ನು ತಿರುಗಿಸುತ್ತಾ, ಆಡಿಸುವಂತೆ, ಶರೀರವೆಂಬ ಯಂತ್ರಗಳಿಗೆ ಗಂಟುಬಿದ್ದಿರುವ ಜೀವರನ್ನು ಈಶ್ವರನು ತನ್ನ ಮಾಯಾಸೂತ್ರದಿಂದ ಆಡಿಸುತ್ತಿರುವನು.

ಅವನು ಬುದ್ಧಿಯಲ್ಲಿ ಪ್ರತಿಬಿಂಬಿಸಿ ತನ್ನ ಬಿಂಬಸ್ವರೂಪದಿಂದ (ಕೂಟಸ್ಥ ರೂಪದಿಂದ) ಪ್ರತಿಬಿಂಬರೂಪದ (ಚಿದಾಭಾಸರೂಪದ) ಜೀವರಿಗೆ ಕಾರಣನಾಗಿಯೂ ಇರುವನು.

" ಈಶ್ವರಾನುಗ್ರಹಾದೇವ ಪುಂಸಾಂ ಅದ್ವೈತವಾಸನಾ " ಎಂಬಂತೆ. ಈಶ್ವರನ ಅನುಗ್ರಹದಿಂದಲೇ ಮೋಕ್ಷ ಮಾರ್ಗವು ಸುಗಮವಾಗುವುದು. ಈಶ್ವರನಿಗೆ ಯಾರಲ್ಲಿಯೂ ಪಕ್ಷ ಪಾತವಿಲ್ಲ. ದಯಾರಾಹಿತ್ಯವೂ ಇಲ್ಲ ಅವನು ಜೀವರುಗಳ ಧರ್ಮಾ ಧರ್ಮಗಳ ಅಪೇಕ್ಷೆಯಿಂದಲೇ ಜಗತ್ತನ್ನು ವಿಷಮವಾಗಿ ಸೃಷ್ಟಿಸಿರುವನು. ಜೀವರ ಪುಣ್ಯ ಪಾಪಗಳ ಏರುಪೇರುಗಳಿಂದ ಅವರುಗಳ ಉಪಾಧಿಯಾದ ಬುದ್ಧಿಗಳಲ್ಲಿ ತಾರತಮ್ಯವುಂಟಾಯಿತು. ಅಧಿಕ ಪಾಪ ಸಂಬಂಧವುಳ್ಳ ಬುದ್ಧ್ಯಾದಿ ಸಂಬಂಧದಿಂದ, ಹಲವು ಜೀವರುಗಳು, ನಾಯಿ, ಕೋಳಿ ಮುಂತಾದ ಹೀನ ಜನ್ಮಗಳನ್ನು ಹೊಂದಿದರು. ಸಂಸಾರದಲ್ಲಿ ಕಾಣುವ ವೈಷಮ್ಯಕ್ಕೆ ಜೀವರ ಧರ್ಮಾಧರ್ಮಗಳೇ ಕಾರಣ. ಆಧರ್ಮಾಧರ್ಮಗಳಿಗೆ ಅನುಗುಣವಾಗಿ ಕೂಟಸ್ಥ ಚೈತನ್ಯ ಈಶ್ವರನು ಬುದ್ಧಿಯನ್ನು ಪ್ರೇರಿಸುವನು.

ಅವಿದ್ಯಾಶಕ್ತ್ಯಾಚ್ಛಾದಿತ ಬುದ್ಧ್ಯಾದಿ ಉಪಾದಿಗಳುಳ್ಳವನೇ ಕಾರ್ಯೋಪಾಧಿ ಚಿದಾಭಾಸ ಜೀವನು. ಮಾಯೋಪಾದಿಯುಳ್ಳವನೇ ಕಾರಣೋಪಾಧಿ ಕೂಟಸ್ಥ ಈಶ್ವರನು.

ಇದನ್ನೇ ರಹಸ್ಯೋಪನಿಷತ್ತಿನಲ್ಲಿ : —

" ಕಾರ್ಯೋಪಾಧಿರಯಂ ಜೀವಃ ಕಾರಣೋಪಾಧಿರೀಶ್ವರಃ ।
ಕಾರ್ಯಕಾರಣ ತಾಂ ಹಿತ್ವಾ ಪೂರ್ಣಬೋಧೋಽವಶಿಷ್ಯತೇ ॥

ಎಂದು ಹೇಳಿ ಕಾರ್ಯ ಕಾರಣೋಪಾಧಿಗಳನ್ನು ಬಿಟ್ಟರೆ ಪೂರ್ಣಬೋಧ ಶುದ್ಧ ಚೈತನ್ಯ ಬ್ರಹ್ಮವೇ ಉಳಿಯುವುದು. ಎಂದು ಜೀವೇಶ್ವರ ಅಭೇದವನ್ನು ತಿಳಿಸಿದೆ. ಇದನ್ನೇ ಶ್ರುತಿಯಲ್ಲಿನ ' ತತ್ವಮಸಿ ' ಮಹಾವಾಕ್ಯವೂ ಸಮರ್ಥಿಸುತ್ತದೆ. ಇಲ್ಲಿ ' ತತ್ ' ಎಂಬುದರಿಂದ ಚಿದಾಭಾಸನೆನಿಸಿದ ಜೀವಾತ್ಮನನ್ನೂ ಹೇಳಿ ಅವೆರಡೂ ಒಂದೇ ಶುದ್ಧ ಚೈತನ್ಯ ಎಂದೂ ಅವರಲ್ಲಿ ತೋರುವ ಭೇದಗಳು ಕೇವಲ ಔಪಾಧಿಕ ಎಂದೂ ತೋರಿಸಿದೆ.

ಜೀವೇಶ್ವರರು ಒಂದೇ ಎಂಬ ಈ ತಿಳುವಳಿಕೆಯನ್ನು ಮನನ, ನಿಧಿಧ್ಯಾಸಗಳಿಂದ ಸ್ಥಿರಪಡಿಸಿಕೊಂಡರೆ, ಅವಿದ್ಯಾ ನಿವೃತ್ತಿಯೂ, ಅವಿದ್ಯಾ ಕಾರ್ಯಗಳಾದ ಬುದ್ಧ್ಯಾದಿಗಳ ನಿವೃತ್ತಿಯೂ ಆಗಿ, ಮಿಥ್ಯಾಭೂತವಾದ ಸರ್ವದೃಶ್ಯ ಪ್ರಪಂಚವೂ ಕಾಣದೇ ಹೋಗಿ, ಸಚ್ಚಿದಾನಂದಾನುಭವವು ಅಂದರೆ ಮೋಕ್ಷವು ಸಿದ್ಧಿಸುವುದು. ಇದೇ ಅದ್ವೈತ ತತ್ವವು. ಸಕಲ ಉಪನಿಷತ್ತುಗಳ ಸಾರವೂ ಇದೆ. ಎಂಬರ್ಥವು ಶ್ರೀಮದ್ಭಗವದ್ಗೀತೆಯ ಧ್ಯಾನ ಶ್ಲೋಕದಲ್ಲಿ ' ಸರ್ವೋಪನಿಷ ದೋಗಾವೋ ದೋಗ್ಧಾ ಗೋಪಾಲನಂದನಃ — ಅದ್ವೈತಾಮೃತ ವರ್ಷಿಣೀ ' ಎಂಬಲ್ಲಿ ವಿಶದವಾಗಿದೆ.

ಈ ಸಾರಾರ್ಥವನ್ನೇ ಇನ್ನೊಂದು ಕಡೆ—

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂಗ್ರುಂಥಕೋಟಿಭಿಃ ।
ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾ ಪರಃ ॥

ಎಂದು ಹೇಳಿದೆ.

ಜೀವೇಶ್ವರ ನಿರೂಪಣೆ

ಜೀವೇಶ್ವರರ ನಿರೂಪಣೆಯಲ್ಲಿ :—

1) ಸುರೇಶ್ವರರ ಅಭಾಸವಾದ
2) ವಿವರಣಾಚಾರ್ಯರ ಪ್ರತಿಬಿಂಬವಾದ
3) ವಾಚಸ್ಪತಿ ಮಿಶ್ರರ ಅವಚ್ಛೇದವಾದ
4) ಗೀತೆಯಲ್ಲಿನ ಏಕ ಜೀವವಾದ ಎಂಬ ಮತಗಳಿವೆ

ಇವೆಲ್ಲಾ ಪ್ರಕ್ರಿಯೆಗಳಲ್ಲಿ ಭೇದವನ್ನು ಹೊಂದಿದ್ದರೂ, ಕೊನೆಗೆ ಅದ್ವೈತ ಬ್ರಹ್ಮದಲ್ಲಿಯೇ ನಿಲ್ಲುವುವು.

ಇವುಗಳನ್ನು ಸಂಗ್ರಹವಾಗಿ ತಿಳಿಸುವುದಾದರೆ :

1) ಸುರೇಶ್ವರರ ಅಭಾಸವಾದ : ಇದಕ್ಕೆ ಸಮರ್ಥನೆ ಶ್ರುತಿ: 'ಮಾಯಾಭಾಸೇನ ಜೀವೇಶೌಕರೋತಿ' ಇವರ ಮತದಲ್ಲಿ ಕೂಟಸ್ಥನು ನಿರ್ವಿಕಾರನಾಗಿದ್ದಾನೆ. ಅವನಿಗೆ ಎರಡು ಸ್ವರೂಪ. ಒಂದು ಕೂಟಸ್ಥನ ನಿಜ ಸ್ವರೂಪ (ಶುದ್ಧ ಚೈತನ್ಯ ಸ್ವರೂಪ) ಎರಡನೆಯದು ಅಭಾಸವಾದ ಮಿಥ್ಯಾಚಿದಾಭಾಸ ರೂಪ.

ಅದ್ವಿತೀಯವಾದ ಬ್ರಹ್ಮನನ್ನು ಅರಿಯದಿರುವುದೇ ಅವಿದ್ಯೆ. ಬ್ರಹ್ಮವೊಂದೇ ನಿಜವಾದ ವಸ್ತು. ಅದರಲ್ಲಿ ಅಹಂಕಾರಾದಿಗಳನ್ನು ಕಲ್ಪಿಸುವುದೇ ಅವಿದ್ಯೆಯು. ಈ ಅವಿದ್ಯೆಯು ಬ್ರಹ್ಮನನ್ನು ಕಾಣದಂತೆ ಮಾಡುವುದಷ್ಟೇ ಅಲ್ಲ. ಅದು ವಿಪರೀತವಾಗಿ ಕಾಣವಂತೆಯೂ ಮಾಡುವುದು. ಈ ದೃಷ್ಟಿಯಿಂದ ಅವಿದ್ಯೆಗೆ ಆವರಣ ವಿಕ್ಷೇಪ ಶಕ್ತಿಗಳಿರುವುವು.

ಚಿದಾಭಾಸನು ತನ್ನ ಮಿಥ್ಯಾ ರೂಪದಿಂದ ತುಂಬಾ ಕಷ್ಟವನ್ನು ಹೊಂದಿ ತನ್ನ ನಿಜ ರೂಪವಾದ ಕೂಟಸ್ಥ ಶುದ್ಧ ಚೈತನ್ಯದೊಡನೆ ಅಭೇದ ರೂಪಮುಕ್ತಿಯನ್ನು ಪಡೆಯಲು ಸಾಧನಗಳನ್ನು ಅನುಷ್ಠಿಸಿ, ಆ ಸಾಧನಗಳು ಸಮಗ್ರವಾಗಲು ಮಿಥ್ಯಾ ರೂಪವನ್ನು ಬಿಟ್ಟು ವಾಸ್ತವ ರೂಪದಿಂದ ಮುಕ್ತಿಯನ್ನು ಪಡೆಯುತ್ತಾನೆ. ಅಥವ ಅವರ ಮತದಂತೆ ಬೇರೆ ಹೇಳುವುದಾದರೆ ಕರ್ತೃ ಭೋಕ್ತೃ

ರೂಪವಾದ ಯಾವ ಚೇತನದ ಆಭಾಸವುಂಟೋ ಅದೇ ಚೇತನದಲ್ಲಿ ಬಂಧ. ಪುನಃ ಆಭಾಸದ ನಿವೃತ್ತಿಯೇ ಚೇತನಕ್ಕೆ ಮೋಕ್ಷವು. ಇದರಿಂದಲೇ ಕೂಟಸ್ಥನಲ್ಲಿ ಬಂಧ ಮೋಕ್ಷಗಳು ಉಂಟಾಗಿವೆ. ಒಟ್ಟಿನಲ್ಲಿ ಜಿಜ್ಞಾಸುವು ಬ್ರಹ್ಮನೊಡನೆ ಜೀವನ ಅಭೇದ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

2) **ವಿವರಣಾಚಾರ್ಯರ ಮತ :** ಪ್ರತಿಬಿಂಬವಾದ:– ಇದಕ್ಕೆ ಸಮರ್ಥನೆ: ಶ್ರುತಿ : " ರೂಪಂ ರೂಪಂ ಪ್ರತಿರೂಪೋ ಬಭೂವ "

ಈ ಮತದಲ್ಲಿ ಅಜ್ಞಾನ ರೂಪವಾದ ಉಪಾಧಿಯುಳ್ಳ ಚೇತನನೇ ಈಶ್ವರ. ಬುದ್ಧಿ ಮತ್ತು ಅದರ ಸೂಕ್ಷ್ಮ ರೂಪ ಸಂಸ್ಕಾರಗಳೂ, ಅವುಗಳಿಂದೊಡಗೂಡಿದ ಅಜ್ಞಾನವೂ ಆ ಅಜ್ಞಾನದಲ್ಲಿ ಪ್ರತಿಬಿಂಬ ರೂಪವಾದ ಚೇತನವೂ, ಜೀವನೆನಿಸುವನು. ವೃತ್ತಿ ಭೇದದಿಂದ ಬುದ್ಧಿಗಳು ನಾನಾ ಆಗಿ ಜೀವವೂ ನಾನಾ ಆಗಿದೆ. ಸರ್ವೋಪಾಧಿರಹಿತವಾದ ಚೇತನವೇ ಶುದ್ಧ ಚೈತನ್ಯ.

ಜಿಜ್ಞಾಸುವಾದವನು. ಭಾಗ ತ್ಯಾಗ ಲಕ್ಷಣೆಯಿಂದ ಅಜ್ಞಾನ ಮತ್ತು ಬುದ್ಧಿಯ ಉಪಾಧಿಗಳನ್ನು ಪರಿತ್ಯಜಿಸಿ, ಈಶ್ವರನಿಗೂ, ಜೀವನಿಗೂ ಶುದ್ಧ ಬ್ರಹ್ಮಕ್ಕೂ ಅಭೇದವನ್ನು ತಿಳಿಯಬೇಕು.

3) **ವಾಚಸ್ಪತಿ ಮಿಶ್ರರ ಮತ :** ಅವಚ್ಛೇದವಾದ : ಇದಕ್ಕೆ ಸಮರ್ಥನೆ.

ಬ್ರ. ಸೂ. : " ಅಂಶೋನಾನಾ ವ್ಯಪದೇಶಾತ್, ಅನ್ಯಥಾ ಚಾಪಿ "
ದಾಸಕಿತ ವಾದಿತ್ವ ಮಧೀಯತ ಏತೇ "

ಇವರ ಮತದಲ್ಲಿ ಅಜ್ಞಾನ ಜಗತ್ತಿಗೆ ಉಪಾದಾನ ಕಾರಣವಲ್ಲ. ಅಂದರೆ ಜಗತ್ತು ಅಜ್ಞಾನದ ಪರಿಣಾಮವಲ್ಲ.

ಅಜ್ಞಾನಕ್ಕೆ ವಿಷಯವಾದ ಚೇತನವೇ ಈಶ್ವರ. ಅದಕ್ಕೆ ಆಶ್ರಯವಾದ ಚೇತನವೇ ಜೀವ. ಹಗ್ಗದ ಮೇಲೆ ಹಾವು ಕಲ್ಪಿತವಾಗುವಂತೆ ಆತ್ಮನ ಮೇಲೆ ಜಗತ್ತು ಅಜ್ಞಾನದಿಂದ ಕಾಣಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ಅಜ್ಞಾನವು ಜಗತ್ತಿಗೆ ಕಾರಣ. ಅಜ್ಞಾನಗಳು ಮತ್ತು ಜೀವಾತ್ಮಗಳೂ ನಾನಾ ಆಗಿವೆ. ಒಬ್ಬೊಬ್ಬ ಜೀವಾತ್ಮನಿಗೆ ಒಂದೊಂದು ಅವಿದ್ಯೆ ಗಂಟು ಬಿದ್ದಿರುತ್ತೆ. ಆಯಾ ಜೀವನಿಗೆ ಜ್ಞಾನವಾದೊಡನೆ ಆಯಾ ಜ್ಞಾನವು ನಾಶವಾಗಿ ಹೋಗುವುದು.

4) **ಶ್ರೀ ಮದ್ಭಗವದ್ಗೀತೆಯ ಏಕ ಜೀವವಾದ :** ಇದಕ್ಕೆ ಸಮರ್ಥನೆ : " ಕ್ಷೇತ್ರಜ್ಞಂಚಾಪಿಮಾಂವಿದ್ಧಿ ಸರ್ವಕ್ಷೇತ್ರೇಷು ಭಾರತ "
ಈ ಶ್ಲೋಕದಲ್ಲಿನ ಅರ್ಥವೇನೆಂದರೆ,

1) ದೇಹೇಂದ್ರಿಯಾದಿ ಸಂಘಾತವೆನಿಸುವ ಸಮಸ್ತ ಕ್ಷೇತ್ರಗಳಲ್ಲಿ ಅಧಿಷ್ಠಾನ ರೂಪದಿಂದಲೂ

2) ಸ್ವಪ್ರಕಾಶ ಚೈತನ್ಯನಾಗಿ, ನಿತ್ಯವಾಗಿ, ವಿಭುವಾಗಿಯೂ

3) ಅವಿದ್ಯೆಯಿಂದ ಆರೋಪಿತವಾದ ಕರ್ತೃತ್ವ, ಭೋಕ್ತೃತ್ವಾದಿ ಧರ್ಮಗಳನ್ನು ಹೊಂದಿಯೂ.

ಇರುವ ಕ್ಷೇತ್ರಜ್ಞನನ್ನು ಅವನಲ್ಲಿ ಕಲ್ಪಿತವಾಗಿರುವ ಅವಿದ್ಯಾ ಕಲ್ಪಿತ ರೂಪವನ್ನು ಬಿಟ್ಟು ಪರಮೇಶ್ವರನಾದ ನನ್ನ ರೂಪವೆಂದು ತಿಳಿ ಎಂಬುದಾಗಿ ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿರುವನು. ಹೀಗೆ ಸಮಸ್ತ ದೇಹಗಳಲ್ಲೂ ಒಂದೇ ಚೇತನವಿರುವುದೆಂದೂ ಅದುನಿತ್ಯವೆಂದೂ ವಿಭುವೆಂದೂ, ಹೇಳಿ ಏಕ ಜೀವವಾದವನ್ನು ಹೇಳಿರುವನು. ಎಲ್ಲ ಶರೀರದಲ್ಲೂ ತಾನೇಃಜ್ಞಾತಾ ಏಕನಾಗಿರುವೆನು ಎಂದೂ ಹೇಳಿರುವನು.

ಈ ಮತದಲ್ಲಿ ಅಜ್ಞಾನೋಪಾಧಿಯುಳ್ಳ ಬಿಂಬ ಚೇತನ ಈಶ್ವರ. ಅಜ್ಞಾನದಲ್ಲಿ ಪ್ರತಿಬಿಂಬ ಭೂತವಾದ ಚೇತನ ಜೀವ.

[ಈ ಮತಕ್ಕೇ ಹೆಚ್ಚಾಗಿ ವೇದಾಂತ ಸಿದ್ಧಾಂತವೆನ್ನುವರು. ಅದರೆ ಎಲ್ಲಾ ಮತಗಳೂ ಪ್ರಮಾಣ ಸಿದ್ಧವಾಗಿವೆ.]

ಮೋಕ್ಷ ಸಂಪಾದನೆಗೆ ಬೇಕಾದ ಸಾಧನ ಚತುಷ್ಟಯಂಗಳು

1) ಸ್ವರ್ಗಾದಿ ಫಲಗಳನ್ನು ಕೊಡುವ ಕಾಮ್ಯ ಕರ್ಮಗಳನ್ನು ನಿಷ್ಕಾಮನೆಯಿಂದ ಕೇವಲ ಚಿತ್ತಶುದ್ಧಿಗಾಗಿ ಆ ಚ ರಿ ಸು ತ್ತಾ, ನರಕಾದಿದುಃಖಗಳನ್ನು ಕೊಡುವ ನಿಷಿದ್ಧಕರ್ಮಗಳನ್ನು ತ್ಯಜಿಸಿ. ಉಳಿದ ನಿತ್ಯಕರ್ಮಗಳನ್ನು, ಫಲಾಪೇಕ್ಷೆಯಿಲ್ಲದೆ, ಸಮಸ್ತ ದುರಿತಕ್ಷಯದ್ವಾರಾ, ಚಿತ್ತಶುದ್ಧಿಗಾಗಿಯೂ, ಈಶ್ವರನ ಪ್ರೀತ್ಯರ್ಥವಾಗಿಯೂ ಆಚರಿಸಬೇಕು.

ಕರ್ಮಗಳಲ್ಲಿ ಅಗ್ನಿಹೋತ್ರ, ಔಪಾಸನ, ಸಂಧ್ಯಾವಂದನ, ಬ್ರಹ್ಮಯಜ್ಞಾದಿ ನಿತ್ಯಕರ್ಮಗಳೂ, ಪರಮೇಶ್ವರನ ಪೂಜಾ ಮತ್ತು ನಾಮಜಪಗಳೂ, ಸ್ತುತಿಗಳೂ ಸೇರಿರುವುವು. ಇವುಗಳ ಆಚರಣೆಯಿಂದ ಚಿತ್ತವು ತನ್ನ ಪ್ರತಿಬಂಧಕಗಳಾದ ಸಮಸ್ತ ಪಾಪಗಳಿಂದ ಮುಕ್ತವಾಗಿ, ಸತ್ವಗುಣ ಪ್ರಧಾನತೆಯನ್ನು ಪಡೆದು, ಆತ್ಮಜ್ಞಾನ ಸಂಪಾದನೆಗೆ (ಬಿಂಬರೂಪಕೂಟಸ್ಥ ಚೈತನ್ಯವೇ ನಾನೆಂಬ ಆತ್ಮಸಾಕ್ಷಾತ್ಕಾರಕ್ಕೆ) ಯೋಗ್ಯವಾಗುವುದು.

ಇದನ್ನೇ ಶ್ರೀಮದ್ಭಗವದ್ಗೀತೆಯಲ್ಲಿ :-

" ಯೋಗಿನಃ ಕರ್ಮಕುರ್ವಂತಿ ಸಂಗಂತ್ಯಕ್ತ್ವಾತ್ಮ ಶುದ್ಧಯೇ ಎಂದರೆ ಕರ್ಮಯೋಗಿಗಳು, ಸಂಗವನ್ನು ಬಿಟ್ಟು ಅಂದರೆ ಮನಸ್ಸಿನ ಅಭಿಲಾಷೆ

ಯನ್ನು ಬಿಟ್ಟು ಕರ್ಮವನ್ನು ಮಾಡುವರು. ಏತಕ್ಕೆಂದರೆ, ಆತ್ಮಶುದ್ಧಿಗಾಗಿ, ಅಂದರೆ, ಚಿತ್ತಶುದ್ಧಿಗಾಗಿ, ಎಂದು ಹೇಳಿದೆ.

2) ಇದಾದ ಮೇಲೆ ನಿತ್ಯಾನಿತ್ಯ ವಸ್ತುವಿವೇಕದಿಂದ, ಕ್ಷಣಿಕವಾದ ವಿಷಯ ಸುಖಗಳಲ್ಲಿ ವೈರಾಗ್ಯವುಂಟಾಗುವುದು.

3) ವಿಷಯ ವೈರಾಗ್ಯದಿಂದ. ಶಮ, ದಮ, ಶ್ರದ್ಧಾ, ಸಮಾಧಾನ, ತಿತಿಕ್ಷಾ ಎಂಬ ಷಟ್‌ಸಂಪತ್ತಿಗಳು ಲಭಿಸುವುವು.

ಶಮ :—ಎಂದರೆ ವೇದಾಂತಶ್ರವಣಕ್ಕೆ ವಿರುದ್ಧವಾದ ಲೌಕಿಕ ವ್ಯಾಪಾರಗಳಿಂದ ಮನಸ್ಸನ್ನು ತಿರೋಧಾನಪಡಿಸುವುದು.

ದಮ :—ಎಂದರೆ ಪ್ರಾಣಾಯಾಮ ಪೂರ್ವಕವಾಗಿ ಬಾಹ್ಯೇಂದ್ರಿಯಗಳನ್ನು ನಿಗ್ರಹ ಮಾಡುವುದು.

ಸಮಾಧಾನ :—ಎಂದರೆ ನಿದ್ರಾಲಗಸ್ಯಇಲ್ಲದೆ, ಮನಸ್ಸನ್ನು ಶುದ್ಧ ಬ್ರಹ್ಮನಲ್ಲಾಗಲಿ ಅಥವ ಅದರ ಶ್ರವಣದಲ್ಲಾಗಲಿ ನಿಲ್ಲಿಸುವುದು.

ಉಪರತಿ :—ಎಂದರೆ ಆತ್ಮಜ್ಞಾನಾರ್ಥವಾಗಿ ಸರ್ವಕರ್ಮಗಳಲ್ಲೂ, ಅವುಗಳ ಫಲಗಳಲ್ಲೂ ಅಭಿಲಾಷೆ ಇಲ್ಲದಿರುವುದು.

ಶ್ರದ್ಧಾ :—ಎಂದರೆ ವೇದದಲ್ಲಿ ಮತ್ತು ಗುರುವಿನ ವಾಕ್ಯದಲ್ಲಿ ವಿಶ್ವಾಸ ಇಡುವುದು.

ತಿತಿಕ್ಷಾ :—ಎಂದರೆ ಶೀತೋಷ್ಣಾದಿ ದ್ವಂದ್ವಗಳಲ್ಲಿ ಅಂದರೆ ಸಂಸಾರದ ಸುಖದುಃಖಗಳಲ್ಲಿ ಸಹನೆಯಿಂದಿರುವುದು

4) ಇದಾದ ನಂತರ 'ಮೋಕ್ಷೇಚ್ಛೆ' ಎಂಬ ಮುಮುಕ್ಷುತ್ವವು ಲಭಿಸುವುದು.

5) ಇದಾದ ಬಳಿಕ ಈಶ್ವರಾನುಗ್ರಹದಿಂದ ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಗುರು ದೊರಕಿದನೆಂದರೆ, ಆತನಿಂದ ವೇದಾಂತ ವಿಚಾರವು ನಡೆದು ಆತ್ಮನ ನಿರ್ಗುಣ ಸ್ವರೂಪ ಬೋಧವಾಗುವುದು ಇದೇ 'ಶ್ರವಣವು'

"ಸರ್ವೇವೇದಾಂತ ಬ್ರಹ್ಮಣಿ ತಾತ್ಪರ್ಯಃ" ಎಂಬ ವಾಕ್ಯದಂತೆ ಸಕಲ ವೇದಾಂತಗಳಿಗೂ ಬ್ರಹ್ಮರೂಪಕೂಟಸ್ಥ ಚೈತನ್ಯನಾದ ಈಶ್ವರನಲ್ಲಿಯೇ ತಾತ್ಪರ್ಯ ವೆಂಬ ನಿಶ್ಚಯ ಬುದ್ಧಿಯೇ ಶ್ರವಣವು.

6) ಅನಂತರ ಪ್ರಣವಾದಿ ಮಂತ್ರಗಳ ಜಪದಿಂದಲೂ, ಉಪನಿಷದಾದಿಗಳ ಆವೃತ್ತಿಯಿಂದಲೂ, ವೇದಾಂತಕ್ಕೆ ವಿರೋಧವಲ್ಲದ ಸುತರ್ಕಗಳ ಅನುಸಂಧಾನದಿಂದಲೂ, ಗುರೂಪದಿಷ್ಟನಾದ ನಿರ್ಗುಣ ಬ್ರಹ್ಮಸ್ವರೂಪವು ನಿಶ್ಚಿತವಾಗುವುದು.

ಇದೇ ಮನನವು. [ಈ ಶ್ರವಣ ಮನನಗಳ ಅಧಿಕಾರ ಪ್ರಾಪ್ತಿಗಾಗಿ ಮೇಲೆ ಹೇಳಿದ ಶಮಾದಿ ಷಟ್ಕಗಳನ್ನು ಆಚರಿಸಬೇಕು]

[ಈ ಶಮಾದಿ ಷಟ್ಕಗಳೇ ಯೋಗಸೂತ್ರದಲ್ಲಿನ, ಯಮ ನಿಯಮ ಆಸನ, ಪ್ರಾಣಾಯಾಮ ಪ್ರತ್ಯಾಹಾರಗಳೆಂಬ ಅಷ್ಟಾಂಗಯೋಗದಲ್ಲಿದ ಪಂಚಯ ಮಗಳು.]

7) ಈ ಶ್ರವಣ ಮನನಗಳ ಪರಿಪಾಕದಿಂದ ನಿದಿಧ್ಯಾಸನ ಸಮಾಧಿ ಗಳು ದೊರಕುವುವು. ದೇಹಾದಿಗಳಲ್ಲಿನ ಆತ್ಮಬುದ್ಧಿ ಎಂಬ ವಿಪರೀತ ಭಾವನೆಯೂ ನಾಶವಾಗುವುದು.

[ಇದನ್ನೇ ಯೋಗಸೂತ್ರದಲ್ಲಿ :

ದೇಶಸಂಬಂಧ ಚಿತ್ತಸ್ಯ ಧಾರಣಾ (ಯೋ. ಸೂ. ಕೃಪಾ. ೧)

“ **ತತ್ರಪ್ರತ್ಯಯೈಕತಾನ ತಾಧ್ಯಾನಂ** ” (ಯೋ. ಸು. ಕೃಪಾ. ೨)

ಎಂದು ಹೇಳಿರುವರು.]

ಯೋಗಶಾಸ್ತ್ರದಲ್ಲಿ ಹೇಳಿರುವ ‘ ಈಶ್ವರನ ಪ್ರಣಿಧಾನ ’ದಿಂದಲೂ ಧಾರಣ, ಧ್ಯಾನ, ಸಮಾಧಿಗಳೆಂಬ ಅಷ್ಟಾಂಗ ಯೋಗಸಂಯಮದಿಂದಲೂ ಮೇಲ್ಕಂಡ ಸ್ಥಿತಿಯನ್ನು ಪಡೆಯಬಹುದು.

ಶ್ರವಣ ಮನನ ನಿದಿಧ್ಯಾಸನಗಳು ಪ್ರತಿಬಂಧಕ ನಾಶದ್ವಾರ, ಆತ್ಮ ಜ್ಞಾನಕ್ಕೆ ಹೇತುವೆನಿಸಿರುವುವು.

ಆತ್ಮಜ್ಞಾನ ಬೋಧಕವಾದ ವೇದಾಂತ ಮಹಾವಾಕ್ಯಗಳು ಅಂದರೆ :

‘ ಪ್ರಜ್ಞಾನಂಬ್ರಹ್ಮ ’—ಋಗ್ವೇದ ಮಹಾವಾಕ್ಯ.

‘ ಅಹಂಬ್ರಹ್ಮಾಸ್ಮಿ ’—ಯಜುರ್ವೇದ ಮಹಾವಾಕ್ಯ.

‘ ತತ್ತ್ವಮಸಿ ’—ಸಾಮವೇದ ಮಹಾವಾಕ್ಯ.

‘ ಅಯಮಾತ್ಮಾಬ್ರಹ್ಮ ’— ಅಥರ್ವವೇದ ಮಹಾವಾಕ್ಯ ಎಂಬುವುಗಳು ಬ್ರಹ್ಮ ಪ್ರತಿಪಾದಕವೋ ಅಥವಾ ಅನ್ಯಥಾ ಪ್ರತಿಪಾದಕವೋ? ಹೀಗೆ ಪ್ರಮಾಣ ದಲ್ಲಿ ಸಂಶಯ ಉಂಟಾದರೆ ಅದು ಉತ್ತರ ಮೀಮಾಂಸ ಪ್ರಥಮಾಧ್ಯಾಯದಿಂದ ನಿವೃತ್ತವಾಗುವುದು.

ಜೀವೇಶ್ವರ ಅಭೇದ ಸತ್ಯವೋ ? ಅಥವ ಭೇದವೇ ಸತ್ಯವೋ ? ಎಂಬ ಪ್ರಮೇಯದಲ್ಲಿ ಸಂಶಯ ಉಂಟಾದರೆ, ಅದು ಉತ್ತರ ಮೀಮಾಂಸದ ಎರಡನೆಯ ಅಧ್ಯಾಯದ ಶ್ರವಣದಿಂದ ನಿವೃತ್ತವಾಗುವುದು.

ದೇಹಾದಿಗಳು ಸತ್ಯ ಮತ್ತು ಜೀವೇಶ್ವರರ ಭೇದವು ಸತ್ಯವೆಂಬ ದ್ವೈತ ಭಾವನೆಯು ಅಂದರೆ ವಿಪರೀತ ಭಾವನೆಯು ‘ ವಿಪರ್ಯಯ ’ವೆನಿಸುವುದು.

ಇದು ನಿದಿ ಧ್ಯಾಸನದಿಂದ ನಿವೃತ್ತಿಯಾಗುವುದು.

ಶ್ರವಣ ಮನನಾದಿಗಳಿಂದ ಹೀಗೆ ಸಮಸ್ತ ಸಂಶಯ ವಿಪರ್ಯಯ ಗಳೂ, ಅಂದರೆ ಸಂಶಯ, ಅಸಂಭಾವನಾ ವಿಪರೀತ ಭಾವನೆಗಳು ನಾಶವಾಗಿ ವೇದಾಂತ ಶ್ರುತಿಗಳಿಗೆ ಪರಬ್ರಹ್ಮ ಸ್ವರೂಪ ಶುದ್ಧ ಚೈತನ್ಯದಲ್ಲಿ ತಾತ್ಪರ್ಯವೆಂಬ ಬುದ್ಧಿ ನಿಶ್ಚಯವುಂಟಾಗುವುದು.

ಷಡ್ವಿಧಲಿಂಗಗಳು

ಎಲ್ಲಾ ವೇದಾಂತ ಶ್ರುತಿಗಳೂ, ಶ್ರುತಿಯ ತಾತ್ಪರ್ಯವನ್ನು ಷಡ್ವಿಧ ಲಿಂಗಗಳಿಂದ ನಿರೂಪಿಸುತ್ತವೆ. ಉದಾಹರಣೆಗೆ, ಛಾಂದೋಗ್ಯ ಉಪನಿಷತ್ತಿನ ಷಷ್ಠಾಧ್ಯಾಯವನ್ನು ತೆಗೆದುಕೊಳ್ಳೋಣ :—

ಉಪಕ್ರಮೋಪ ಸಂಹಾರಾವಭ್ಯಾಸೋಽಪೂರ್ವತಾ ಫಲಂ ।
ಅರ್ಥವಾದೋಪ ಪತ್ತೀಚಲಿಂಗಂ ತಾತ್ಪರ್ಯ ನಿರ್ಣಯೇ ॥

ಎಂಬಂತೆ ಉಪಕ್ರಮೋಪ ಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿ ಎಂಬುವು ಷಡ್ವಿದ ಲಿಂಗಗಳು.

1 **ಉಪಕ್ರಮೋಪ ಸಂಹಾರ :** ಛಾಂದೋಗ್ಯೋಪನಿಷತ್ತು, ಸದೇವ ಸೋಮ್ಯೇದಮಗ್ರಅಸೀತ್ ಏಕಮೇ ವಾಽದ್ವಿತೀಯಂ ಎಂದು ಉಪಕ್ರಮ ವಾಗಿ 'ಐತದಾತ್ಮ್ಯಮಿದಂ ಸರ್ವಂತತ್ಸತ್ಯಂ ಸಆತ್ಮಾ' ಎಂದು ಉಪಸಂಹಾರ ವನ್ನು ಪಡೆದಿದೆ.

ಅಂದರೆ ಈ ಜಗತ್ತು ತನ್ನ ಉತ್ಪತ್ತಿಗೆ ಪೂರ್ವದಲ್ಲಿ ಏಕವೂ ಅದ್ವಿತೀಯವೂ ಆದ ಸತ್ ಸ್ವರೂಪವೇ ಆಗಿತ್ತು. ಎಂದು ಅದ್ವೈತ ವಸ್ತುವಿನ ಪ್ರತಿಪಾದನೆಯ ಉಪಕ್ರಮದಲ್ಲಿದೆ.

ಉಪಸಂಹಾರದಲ್ಲೂ ಈ ದೃಶ್ಯ ಮಾನವಾದ ಸರ್ವ ಜಗತ್ತೂ ಅದ್ವಿತೀಯ ಬ್ರಹ್ಮರೂಪವೇ ಎಂದು ಹೇಳಿದೆ.

ಹೀಗೆ ಷಷ್ಠ ಪ್ರಕರಣವಲ್ಲಿ ಪ್ರತಿಪಾದಿತವಾದ ಬ್ರಹ್ಮ ವಸ್ತುವನ್ನು ಆ ಪ್ರಕರಣದ ಆದಿಯಲ್ಲೂ ಅಂತ್ಯದಲ್ಲೂ ಪ್ರತಿಪಾದಿಸಿದೆ.

2) **ಅಭ್ಯಾಸ :** ಪ್ರಕರಣದ ಮೊದಲು ಕೊನೆಗಳಲ್ಲಿ ಪ್ರತಿಪಾದನೆ ಮಾಡಿರುವ ಅದ್ವಿತೀಯ ಬ್ರಹ್ಮ ವಸ್ತುವನ್ನು ಪ್ರಕರಣದ ಮಧ್ಯದಲ್ಲಿ "ತತ್ವಮಸಿ ಶ್ವೇತಕೇತೋ" ಎಂಬ ವಾಕ್ಯದ ಮೂಲಕ ಒಂಭತ್ತು ಸಾರಿ ಉಪದೇಶಿಸಿದೆ. ಹೀಗೆ ಈ ಜಗತ್ತೆಲ್ಲವೂ ಆತ್ಮವಂತವಾಗಿದೆ. ಅದು ಸತ್ಯವು. ಅದು ಆತ್ಮವು ಓ ಶ್ವೇತಕೇತೂ! ಅದೂ ನೀನಾಗಿರುವೆ. ಎಂಬುದಾಗಿ 9 ಸಾರಿ ಹೇಳಿದೆ

3) **ಅಪೂರ್ವತಾ :** ಅದ್ವಿತೀಯ ಬ್ರಹ್ಮವಸ್ತು ಪ್ರತ್ಯಕ್ಷಾದಿ ಪ್ರಮಾಣ ಗಳಿಗೆ ವಿಷಯವಲ್ಲ. ಉಪನಿಷತ್ಪ್ರಮಾಣದಿಂದ ಮಾತ್ರವೇ ತಿಳಿಯಬಹುದೆಂಬುದನ್ನು "ಯಂ ವೈ ಸೋಮ್ಯೈತಮಣಿಮಾನಂ ನ ನಿಭಾಲಯಸ" ಅಂದರೆ ಈ ಸೂಕ್ಷ್ಮಾಂಶ ವನ್ನು ನೀನು ನೋಡಿಲ್ಲ. ಉಪನಿಷತ್ತಿನಿಂದಲೇ ತಿಳಿಯಬೇಕು ಎಂದು ಅಪೂ ರ್ವತೆಯನ್ನು ತೋರಿಸಿದೆ.

4) **ಫಲ:** ಆ ಅದ್ವಿತೀಯ ಬ್ರಹ್ಮ ವಸ್ತುವಿನ ಪ್ರಾಪ್ತಿಯಿಂದ ಆಗುವ ಪ್ರಯೋಜನವನ್ನು ಹೇಳಿದೆ.

ಆಚಾರ್ಯವಾನ್ ಪುರುಷೋ ವೇದ ತಸ್ಯ ತಾವದೇವ
ಚಿರಂ ಯಾವನ್ನ ವಿಮೋಕ್ಷ್ಯೇಥ ಸಂಪತ್ಸ್ಯ ಇತಿ"

ಅಂದರೆ, ಗುರುಮುಖೇಣ, ಅದ್ವಿತೀಯ ವಸ್ತುವಿನ ಜ್ಞಾನವನ್ನು ಸಂಪಾ ದಿಸಿ, ಜೀವನ್ಮುಕ್ತನಾದವನಿಗೆ, ಕಾಲ ವಿಳಂಬವಿಲ್ಲದೆ, ದೇಹ ಪಾತವಾದ ಕೂಡಲೆ ವಿದೇಹ ಕೈವಲ್ಯವೆಂಬ ಮುಕ್ತಿ ಲಭಿಸುವುದು. ಎಂದು ಪ್ರಯೋಜನವನ್ನು ಹೇಳಿದೆ.

5) **ಅರ್ಥವಾದ :** ಅದ್ವಿತೀಯ ಬ್ರಹ್ಮ ವಸ್ತುವಿನ ಸ್ತುತಿ ರೂಪ ಪ್ರಶಂಸನವೇ ಅರ್ಥವಾದ.

ಇದನ್ನು ಶ್ರುತಿಯು 'ಯೇದಾಽಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತ ಮಿತಿ" ಅಂದರೆ ಅದ್ವಿತೀಯ ಬ್ರಹ್ಮ ವಸ್ತುವಿನ ಜ್ಞಾನದಿಂದ ಅಶ್ರುತವು ಶ್ರುತವಾಗುವುದು ಎಂದು ಮುಂತಾಗಿ ಹೇಳಿದೆ.

6) **ಉಪಪತ್ತಿ :** ಪ್ರಕರಣ ಪ್ರತಿಪಾದಿತವಾದ ಪರಬ್ರಹ್ಮವನ್ನು ಅನೇಕ ದೃಷ್ಟಾಂತಗಳಿಂದ ಪ್ರತಿಪಾದಿಸುವುದೇ ಉಪಪತ್ತಿ. ಇದನ್ನೇ 'ಪ್ರಕರಣ ಪ್ರತಿಪಾದ್ಯಸ್ಯ ದೃಷ್ಟಾಂತೈಃ ಪ್ರತಿಪಾದನಂ ಉಪಪತ್ತಿಃ' ಎಂಬ ವಾಕ್ಯವು ತಿಳಿಸು ತ್ತದೆ.

'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' ಎಂಬ ಶ್ರುತಿಯಲ್ಲಿ ಮಡಕೆಯನ್ನು ಮಾಡುವಲ್ಲಿ, ಮಣ್ಣು ಕಾರಣ, ಮಡಕೆ ಕಾರ್ಯ ಮಣ್ಣಿನಿಂದಲೇ ಆಗುವ ಘಟಾದಿಗಳೆಲ್ಲಾ ಮಣ್ಣು ರೂಪವಾಗಿಯೇ ಇರುವುದು. ಕಾರಣ ಸ್ವರೂಪದಲ್ಲಿರುವುದನ್ನು ತಿಳಿಯುವುದೇ ಮುಖ್ಯ. ಕಾರ್ಯ ರೂಪವೆಲ್ಲಾ ಅಶಾಶ್ವತ. ಕೇವಲ ಬಾಯಿಮಾತು ಅಷ್ಟೆ. ಹಾಗೆ ಕಾರ್ಯವಾದ ಪ್ರಪಂಚವೆಲ್ಲಾ ಶಾಶ್ವತವಲ್ಲ. ಅವು ಕೇವಲ ನಾಮ ರೂಪಾತ್ಮಕವಾದುವು. ಕಾರಣವಾದ (ಕಲ್ಪನಾಧಿಷ್ಠಾನವಾದ) ಶುದ್ಧ ಬ್ರಹ್ಮ ಚೈತನ್ಯವೊಂದೇ ಶಾಶ್ವತ. ಹೀಗೆ ದೃಷ್ಟಾಂತದಿಂದ ಪರಬ್ರಹ್ಮ ವಸ್ತುವನ್ನು ತಿಳಿಸಿದೆ.

ಈ ಪ್ರಕಾರ ಷಡ್ವಿಧ ಲಿಂಗಗಳಿಂದ ಶ್ರುತಿಗಳಿಗೆ ತಾತ್ಪರ್ಯವು ಕೂಟಸ್ಥ ಚೈತನ್ಯವೆನಿಸಿದ ಅದ್ವಿತೀಯ ಬ್ರಹ್ಮಚೈತನ್ಯವೆಂದು ಗೊತ್ತಾಗುತ್ತದೆ.

ಮನನನಿದಿ ಧ್ಯಾಸನಗಳು

"ಶ್ರುತಸ್ಯ ಅರ್ಥಸ್ಯ ಉಪಪತ್ತಿಭಿಶ್ಚಿಂತನಂ ಮನನಂ" ಎಂಬ ಉಕ್ತಿಯಂತೆ ಶ್ರುತ್ಯರ್ಥಗಳನ್ನು ಕೇಳಿ ಅದರ ಅರ್ಥವನ್ನು ಯುಕ್ತಿಯಿಂದ ಏಕವನ್ನಾಗಿ ಮಾಡಿ ಚಿಂತಿಸುವುದೇ ಮನನವು.

"ವಿಜಾತೀಯ ಪ್ರತ್ಯಯ ತಿರಸ್ಕಾರೇಣ ಸಜಾತೀಯ
ಪ್ರತ್ಯಯ ಪ್ರವಾಹೀ ಕರಣಂ ನಿದಿಧ್ಯಾಸನಾ"

ಎಂಬಂತೆ, ವಿಜಾತೀಯವಾದ ಕಾಮ ಕ್ರೋಧಾಧಿಗಳನ್ನು ಬಿಟ್ಟು, ಸಜಾತೀಯವಾದ 'ಅಹಂ ಬ್ರಹ್ಮಾಸ್ಮಿ' ಎಂಬ ನಿರಂತರ ಚಿಂತನವು ನಿದಿ ಧ್ಯಾಸನವೆನಿಸುವುದು.

ಸಂಶಯ, ವಿಪರ್ಯಯ, ಅಸಂಭಾವನೆಗಳು

ಸಂಶಯ, ವಿಪರ್ಯಗಳೆರಡೂ ಜ್ಞಾನಕ್ಕೆ ಪ್ರತಿಬಂಧಕಗಳು. ಇವುಗಳನ್ನು ನಿವೃತ್ತಿ ಗೊಳಿಸುವುದರ ಮೂಲಕ ಶ್ರವಣ ಮನನ ನಿದಿಧ್ಯಾಸನಗಳು ಆತ್ಮಜ್ಞಾನಕ್ಕೆ ಹೇತುವಾಗುವುವು.

ಸದಾ ಶ್ರವಣದಿಂದ ಸಕಲ ಸಂಶಯ ನಿವೃತ್ತಿಯೂ, ಮನನದಿಂದ ಅಸಂಭಾವನಾ (ವಾಸ್ತವವಾದುವನ್ನು ಇಲ್ಲವೆನ್ನುವುದು) ನಾಶವೂ, ನಿದಿಧ್ಯಾಸನಗಳಿಂದ ವಿಪರೀತ ಭಾವನೆಯ ನಿವೃತ್ತಿಯೂ ಆಗುವುವು. ಪ್ರತಿ ಬಂಧಕಗಳು ಹೆಚ್ಚಾಗಿರುವವರು ಶ್ರವಣ, ಮನನ, ನಿದಿಧ್ಯಾಸನಗಳು, ಇವು ಮೂರನ್ನೂ ಸಾರ್ವವಾಶಿ ಅಭ್ಯಾಸಿಸಬೇಕು.

ಸಂಶಯ, ಅಸಂಭಾವನಾ ವಿಪರೀತ ಭಾವನೆಗಳು ಪ್ರತಿಯೊಂದೂ ಎರಡೆರಡು ವಿಧಗಳಾಗಿರುತ್ತದೆ.

ಇವುಗಳನ್ನು ಸ್ವಲ್ಪ ವಿಸ್ತರಿಸುವುದಾದರೆ,

a) ಪ್ರಮಾಣಗತ ಸಂಶಯ
b) ಪ್ರಮೇಯಗತ ಸಂಶಯ
c) ಪ್ರಮಾಣಗತ ಅಸಂಭಾವನಾ
d) ಪ್ರಮೇಯಗತ ಅಸಂಭಾವನಾ

e) ಪ್ರಮಾಣಗತ ವಿಪರೀತ ಭಾವನಾ

f) ಪ್ರಮೇಯಗತ ವಿಪರೀತ ಭಾವನಾ

ಇವುಗಳೊಂದೊಂದಕ್ಕೂ ಒಂದೊಂದು ಉದಾಹರಣೆ ಕೊಡುವುದಾದರೆ,

a) ಶ್ರುತಿ ಕರ್ಮವನ್ನು ಪ್ರತಿ ಪಾದಿಸುತ್ತಿದೆಯೇ? ಅಥವ ಬ್ರಹ್ಮವನ್ನು ಪ್ರತಿಪಾದಿಸುತ್ತದೆಯೆ?

b) ಜಗಾತ್ಕಾರಣ ವಸ್ತು ಬ್ರಹ್ಮವೇ ಅಥವಾ ಪ್ರಧಾನಾದಿಗಳೆ?

c) ಬ್ರಹ್ಮವು ಶುದ್ಧವಸ್ತುವಾದುದರಿಂದ, ಅನ್ಯ ಪ್ರಮಾಣಗಳಿಂದ ಪೃಥಿವ್ಯಾದಿಗಳಂತೆ ತಿಳಿದು ಬರುತ್ತದೆಯೆ?

ಹಾಗಿಲ್ಲದಿದ್ದರೆ ಆ ಬ್ರಹ್ಮವನ್ನು ಜಗತ್ಕಾರಣವೆಂದು ಹೇಗೆ ಪ್ರತಿಪಾದಿಸುತ್ತದೆ?

d) ಜಗತ್ತಿಗಿಂತ ಬ್ರಹ್ಮವು ವಿಲಕ್ಷಣವಾಗಿದೆ. ಆದ್ದರಿಂದ ಅದನ್ನು ಜಗತ್ಕಾರಣವೆಂದು ಹೇಳಕೂಡದು. ಪ್ರಧಾನಾದಿಗಳೇ ಕಾರಣವಾಗಬೇಕು.

e) ಬ್ರಹ್ಮವು ಶುದ್ಧವಸ್ತುವಾದ್ದರಿಂದ, ಶ್ರುತಿಗಳು ಶುದ್ಧ ಬ್ರಹ್ಮವಸ್ತುವನ್ನು ಪ್ರತಿಪಾದಿಸುವುದರಲ್ಲಿ ತಾತ್ಪರ್ಯವಿಲ್ಲ. ಹಾಗೆ ಪ್ರತಿಪಾದಿಸಿದ್ದಾದರೆ, ಪುರುಷನಿಗೆ ವೃತ್ತಿಗಳು ನಿವೃತ್ತಿಯಾಗಲಾರವು.

ಲೋಕದಲ್ಲಿ ಪ್ರವೃತ್ತಿ ಪೂರ್ವಕವಾಗಿ ಪುರುಷಾರ್ಥವನ್ನು ಕಾಣುತ್ತಾರೆಂಬುದಾಗಿ ತೋರುವುದು.

f) ಅಶುದ್ಧ್ಯಾದಿ ವಿಕಾರಗಳಿಂದ ಕೂಡಿರುವ ಜಗತ್ತು ಕಾರಣವಾದ ಬ್ರಹ್ಮದಲ್ಲಿ ಅಶುದ್ಧ್ಯಾದಿಗಳಿಂದ ಕೂಡಿ ಕೊಂಡಿರಬೇಕು. ಹಾಗಿಲ್ಲದಿದ್ದರೆ ಪ್ರಧಾನವೇ ಜಗತ್ತಿಗೆ ಕಾರಣ.

ಇನ್ನು ಜೀವನ ವಿಷಯದಲ್ಲಿ ಹೇಳುವುದಾದರೆ ಅಂತಃಕರಣ (ಬುದ್ಧಿ) ದಲ್ಲಿ ಜೀವನಾಗಿಯೂ ಜಗತ್ತಿನಲ್ಲಿ ಒಬ್ಬನಾಗಿಯೂ ತೋರುತ್ತಿರುರುವ ವಿಲಕ್ಷಣನಾದ ನಾನು ಬ್ರಹ್ಮ ಹೌದೋ ಅಲ್ಲವೊ? ಎಂಬ ಸಂಶಯ. ಕರ್ತೃತ್ವಾದಿ ಅನೇಕ ಧರ್ಮಯುಕ್ತನಾಗಿ ಪರಿಚ್ಛಿನ್ನನಾಗಿ ಜನನ ಮರಣಗಳಿಂದ ಕೂಡಿರುವ ನನಗೆ ವಿಪರೀತ ಲಕ್ಷಣಗಳಿಂದ ಕೂಡಿದ ಬ್ರಹ್ಮ ಸ್ವರೂಪ ಹೇಗೆ ಸಾಧ್ಯ? ಎಂಬ ಅಸಂಭಾವನೆ. ನಾನು ಕರ್ತನಲ್ಲವೆಂದರೆ, ನನ್ನನ್ನುದ್ದೇಶಿಸಿ ಕೆಲಸಗಳನ್ನು ಉದ್ದೇಶಿಸಿ ಕೆಲಸವನ್ನು ಮಾಡಬೇಕೇ ಬೇಡವೆ? ಎಂಬೀ ಧರ್ಮಗಳು ಶ್ರುತಿಗಳಲ್ಲಿ ಹೇಗೆ ಪ್ರವರ್ತಿಸುತ್ತವೆ? ಆದಕಾರಣ ನಾನು ಕರ್ತನೇ ಆಗಬೇಕು. ಎಂಬ ವಿಪರೀತ ಭಾವನೆ.

ಮೇಲೆ ಹೇಳಿದ ಈ ಸಂಶಯಯಾದಿಗಳನ್ನೆಲ್ಲಾ, ಶ್ರವಣ ಮನನ ನಿಧಿ ಧ್ಯಾಸನಗಳಿಂದ ನಿವೃತ್ತಿಗೊಳಿಸಿಕೊಳ್ಳಬೇಕು.

ಸದ್ಗುರು ಮುಖೇಣ, ಜೀವನಿಗೆ ಅಭಿನ್ನವಾದ ಅದ್ವಿತೀಯ ಬ್ರಹ್ಮದಲ್ಲಿ ಸರ್ವ ವೇದಾಂತ ವಿಷಯವೂ ಹೇಗೆ ನಿರ್ಣಯವೆಂಬುದನ್ನೂ ನಾದ ಬ್ರಹ್ಮವೆನಿಸಿದ " ಓಂ " ಕಾರ ಸ್ವರೂಪವನ್ನೂ 'ಹಂಸ' ಮಂತ್ರಾರ್ಥವನ್ನೂ ತಿಳಿದು ಕೊಳ್ಳಬೇಕು. ನಮ್ಮ ಶರೀರದಲ್ಲಿ ಯೋಗ ಪ್ರಕ್ರಿಯೆಯಂತೆ ಜೀವೇಶ್ವರ ಸಂಬಂಧ ಹೇಗೆಂಬುದನ್ನು ತಿಳಿಯಬೇಕು. ಮತ್ತು ವೇದಾಂತದಲ್ಲಿ ಜೀವ ಬ್ರಹ್ಮೈಕ್ಯ ಬೋಧಕವಾದ 'ತತ್ವಮಸಿ' 'ಅಹಂಬ್ರಹ್ಮಾಸಿ' 'ಅಯಮಾತ್ಮಾಬ್ರಹ್ಮ' 'ಪ್ರಜ್ಞಾನಂ ಬ್ರಹ್ಮ' ಎಂಬ ಮಹಾವಾಕ್ಯಗಳನ್ನು ಗುರುಮುಖೇಣ ಚೆನ್ನಾಗಿ ಅರ್ಥಮಾಡಿ ತಿಳಿದು ಕೊಳ್ಳಬೇಕು. ಮಿಕ್ಕ ವೇದಾಂತ ವಾಕ್ಯಗಳೂ ಪರಂಪರೆಯೂ ಅಥವಾ ಶೇಷವಾಗಿ ಮಹಾವಾಕ್ಯದ ಅರ್ಥಕ್ಕೆ ಸಹಾಯಕಗಳಾಗಿವೆ ಎಂಬುದನ್ನು ತಿಳಿಯಬೇಕು. ಪ್ರಸ್ಥಾನ ತ್ರಯಗಳನ್ನು (ದಶೋಪನಿಷತ್ತುಗಳು, ಸೂತ್ರ ಭಾಷ್ಯ ಭಗವದ್ಗೀತ) ಶ್ರೀಮಚ್ಛಂಕರ ಭಾಷ್ಯ ಸಮೇತ ಗುರುಮುಖೇನ ತಿಳಿದುಕೊಳ್ಳಬೇಕು. ಹೀಗೆ, ಜೀವನಿಗೆ, ಅಭಿನ್ನ ವಾಗಿ ಅದ್ವೀತಿಯ ಬ್ರಹ್ಮದಲ್ಲಿ ನಿರ್ಣೀತವಾದ ತಾತ್ಪರ್ಯವಿದೆ ಎಂಬುದನ್ನು ತಿಳಿದು ಕೊಳ್ಳುವುದೇ ಶ್ರವಣದಿಂದಾಗುವ ಬ್ರಹ್ಮನ ಪರೋಕ್ಷಜ್ಞಾನ (ತತ್ವಜ್ಞಾನ).

ಇದನ್ನು ಸಂಪಾದಿಸಿದ ಮೇಲೆ, ಹಿಂದೆ ಹೇಳಿದ ಸಂಶಯ ವಿಪರ್ಯ ಯಾದಿಗಳನ್ನು ಗುರುಮುಖೇನ ಹೋಗಲಾಡಿಸಿಕೊಂಡು ನಾನು ಹೇಗೆ ಬ್ರಹ್ಮ? ಪ್ರತ್ಯಕ್ಷದಲ್ಲಿ ಹಾಗಿಲ್ಲವಲ್ಲಾ !ಜೀವಪರಮಾತ್ಮರಭೇದವೇ ಕಾಣುವುವಲ್ಲಾ ! ನಾನು ಅಲ್ಪಜ್ಞ ! ಪರಮಾತ್ಮನು ಸರ್ವಜ್ಞ ! ಎಂಬೀ ಮುಂತಾದ ಅನುಮಾನಗಳು ಸಹಜ ವಾಗಿ ಬೇರೂರಿರಲು, ವೇದಾಂತ ಮಹಾವಾಕ್ಯಗಳಿಂದುಂಟಾಗುವ ಜ್ಞಾನ ಮತ್ತು ಅವುಗಳ ಅರ್ಥ ವಿಷಯಕಯುಕ್ತಿಗಳ ಅನುಸಂಧಾನಗಳಿಂದ ಶಂಕಾನಿವೃತ್ತಿಮಾಡಿ ಕೊಳ್ಳಬೇಕು.

ಉದಾಹರಣೆಗಾಗಿ :—

ಶರೀರಸ್ಥೋಽಪಿಕೌಂತೇಯ ನ ಕರೋತಿ ನ ಲಿಪ್ಯತೇ ।
ಯಥಾಸರ್ವಗತಂ ಸೌಕ್ಷ್ಮಾತ್ ಆಕಾಶನ್ನೋಽಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾತ್ಮಾನೋಽಪಲಿಪ್ಯತೇ ।

ಎಂಬ ಭಗವದ್ಗೀತೆಯಲ್ಲಿ ಹೇಳಿರುವಂತೆ ಆತ್ಮನು (ಕೂಟಸ್ಥನು) ಶರೀರಾದಿಧರ್ಮ ಸಂಬಂಧಶೂನ್ಯನೆಂದೂ, ಸುಷುಪ್ತಿ, ಸಮಾಧಿ ಅವಸ್ಥೆಗಳಲ್ಲಿ ಇದು ಸ್ಪಷ್ಟಪಡುವು ದೆಂದೂ, ಆಕಾಶದಂತೆ ಆತ್ಮನು ನಿರವಯವನೆಂದೂ, ಜೀವನ ಕಿಂಚಿಜ್ಞತ್ವ, ದುಃಖ ತ್ವಾದಿಗಳು, ಬುದ್ಧಿಯ ಧರ್ಮವೆಂದೂ, 'ಪ್ರಜಹಾತಿಯದಾಕಾಮಾನ್ ಸರ್ವಾನ್

ಪಾರ್ಥಮನೋಗತಾನ್' ಎಂಬಂತೆ ಬುದ್ಧಿಗತವಾದ ಬುದ್ಧಿಧರ್ಮಗಳನ್ನು ಉಳಿದು ಜೀವಭಾವವು ಬುದ್ಧ್ಯುಪಾಧಿಯಿಂದಲೂ, ಈಶ್ವರಭಾವವು ಮಾಯೋಪಾಧಿಯಿಂಲೂ ಕಾಣುತ್ತದೆಯೇ ವಿನಹ ಶೋಧಿತನಾದ ಸ್ವಪ್ರಕಾಶ ಜೀವನಿಗೆ, ಸತ್ಯಜ್ಞಾನಾನಂದ ಸ್ವರೂಪ ಪರಿಪೂರ್ಣನಾದ ಶುದ್ಧಬ್ರಹ್ಮನಲ್ಲಿ ಐಕ್ಯವಿರುತ್ತೆಂಬ ಅಂಶವನ್ನು 'ತತ್ವಮಸಿ' ಮಹಾವಾಕ್ಯದಂತೆ 'ಮನನ' ಮಾಡಿ ನಿಶ್ಚಯಿಸಿಕೊಳ್ಳಬೇಕು.

ಶ್ರವಣಕಾಲದಲ್ಲಿ ಸದ್ಗುರುದ್ವಾರ ಲಭಿಸಿದ ವೇದಾಂತವಾಕ್ಯಗಳಿಂದಲೂ, ಅವಾಂತರ ವಾಕ್ಯಗಳಿಂದಲೂ, ಸತ್ಯಜ್ಞಾನಾನಂದ ಲಕ್ಷಣಲಕ್ಷಿತವಾದ ಒಂದಾನೊಂದು ಬ್ರಹ್ಮತತ್ವವಿರುವುದೆಂಬ ಅರಿವು ಪರೋಕ್ಷವಾಗಿ ಲಭ್ಯವಾದರೂ, ಅದು ಬುದ್ಧಿಕೃತ ಪಾಪಕರ್ಮಗಳನ್ನು ದಹಿಸಿಬಿಡುವುದು.

ಪರೋಕ್ಷಜ್ಞಾನ—ಅಪರೋಕ್ಷಜ್ಞಾನ

ಮನನನಿದಿಧ್ಯಾಸನಗಳಿಂದ, ಎಲ್ಲಾ ಅಸಂಭಾವನೆಗಳೂ ವಿಪರೀತಭಾವನೆಗಳೂ ಅಳಿದ ಬುದ್ಧಿಗೆ ಮಹಾವಾಕ್ಯಗಳ ದ್ವಾರಾ ಲಭಿಸುವ ಬ್ರಹ್ಮಸಾಕ್ಷಾತ್ಕಾರ ರೂಪವಾದ ಜ್ಞಾನವು " ಅಪರೋಕ್ಷಜ್ಞಾನ "ವೆನಿಸುವುದು. ಈ ಅಪರೋಕ್ಷಜ್ಞಾನದಿಂದ ಸಂಸಾರಕ್ಕೆ ಕಾರಣವಾದ ಆವರಣ ವಿಕ್ಷೇಪಗಳಿಂದ ಕೂಡಿದ ಅನಾದಿಭಾವ ರೂಪ ಅಜ್ಞಾನವೆಂಬ ಅಂಧಕಾರವು ನಿವೃತ್ತಿಯಾಗುವುದು. ಇದನ್ನು ಪಂಚದಶಿ ಗ್ರಂಥದಲ್ಲಿ :—

> ಪರೋಕ್ಷಬ್ರಹ್ಮವಿಜ್ಞಾನಂ ಶಾಬ್ದಂದೇಶಿಕಪೂರ್ವಕಂ ।
> ಬುದ್ಧಿಪೂರ್ವಕೃತಂ ಪಾಪಂ ಕೃತ್ಸ್ನಂ ದಹತಿವಹ್ನಿವತ್ ॥
>
> ಅಪರೋಕ್ಷಾತ್ಮವಿಜ್ಞಾನಂ ಶಾಬ್ದಂದೇಶಿಕಪೂರ್ವಕಂ ।
> ಸಂಸಾರ ಕಾರಕಾಜ್ಞಾನ ತಮಸಶ್ಚಂಡ ಭಾಸ್ಕರಃ ॥

ಎಂದು ಹೇಳಿದೆ.

ಒಟ್ಟಿನಲ್ಲಿ ವಿವೇಕ. ವೈರಾಗ್ಯ, ಶಮಾದಿಷಟ್ಸಂಪತ್ತಿ, ಮುಮುಕ್ಷುತ್ವ ಎಂಬ ನಾಲ್ಕೂ ಮತ್ತು ಶ್ರವಣ, ಮನನ ನಿದಿಧ್ಯಾಸನಗಳೆಂಬ ಮೂರೂ ಮತ್ತು ತತ್ ತ್ವಂಪದಾರ್ಥಗಳ ಶೋಧನೆಯೆಂಬ ಒಂದೂ ಈ ಎಂಟೂ ಆತ್ಮಜ್ಞಾನ ಸಂಪಾದನೆಗೆ ಪರಂಪರಾಸಂಬಂಧದಿಂದ " ಅಂತರಂಗ ಸಾಧನಗಳು. "

ವಿವೇಕ ವೈರಾಗ್ಯಗಳು ಶ್ರವಣೋಪಯೋಗ ದ್ವಾರ " ಪೂರ್ವ ಸಾಧನಗಳು "

" ಆತ್ಮಾವಾರೇದ್ರಷ್ಟವ್ಯ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ " ಎಂಬ ಶ್ರುತಿಯಂತೆ, ಶ್ರವಣಮನನ ನಿದಿಧ್ಯಾಸನಗಳಿಗೆ, ಜ್ಞಾನವಲ್ಲಿ ಉಪಯೋಗ ವಿರುವುದು. ಶ್ರವಣಾದಿಗಳ ಹೊರತು ಜ್ಞಾನವಾಗುವುದಿಲ್ಲ. 'ತತ್' ಪದಾರ್ಥ, 'ತ್ವಂ' ಪದಾರ್ಥಗಳನ್ನು ನಿಜರೀತಿಯಲ್ಲಿ ತಿಳಿದಹೊರತು ಅಭೇದಜ್ಞಾನವಾಗುವುದಿಲ್ಲ. ಈ ಶ್ರವಣಾದಿಗಳು ಜ್ಞಾನಕ್ಕೆ 'ಉತ್ತರಸಾಧನಗಳು' ನಿಷ್ಕಾಮಕರ್ಮ ಮತ್ತು ನಿಷ್ಕಾಮಉಪಾಸನೆಗಳು ಜ್ಞಾನದ 'ಬಹಿರಂಗ ಸಾಧನಗಳು.'

ನಿದಿಧ್ಯಾಸನ—ಜೀವನ್ಮುಕ್ತಸ್ಥಿತಿ

ಸರ್ವವಿಷಯಗಳಿಂದ ಮನಸ್ಸನ್ನು ನಿರೋಧಿಸಿ ಪರಮಾತ್ಮನಲ್ಲಿ ಅಮನದ ಸ್ಥಿತಿಗೋಸ್ಕರ ಯಾವ ಕ್ರಿಯೆಯು ಬುದ್ಧಿಯಲ್ಲಿರುತ್ತಿರುವುದೋ ಅದು ನಿದಿಧ್ಯಾಸನವು.

ಈ ನಿದಿಧ್ಯಾಸನದಿಂದ 'ವಿಪರ್ಯಯಜ್ಞಾನ' (ಅಂದರೆ 'ದೇಹಸತ್ಯ', 'ನಾನು ದೇಹರೂಪನು' ಎಂಬಜ್ಞಾನ) ನಷ್ಟವಾಗುತ್ತದೆ.

ಪ್ರಮಾಣ, ಸಂಶಯ, ವಿಕಲ್ಪ, ನಿದ್ರಾ, ಸ್ಮೃತಿ ಈ ವೃತ್ತಿಗಳೆಲ್ಲವೂ ವಿಜಾತೀಯ ವೃತ್ತಿಗಳು. ಇವುಗಳನ್ನು ತಿರಸ್ಕರಿಸಿ, ತೈಲಧಾರೆಯಂತೆ ನಿರಂತರ ಬ್ರಹ್ಮಾಕಾರವಾದ ವೃತ್ತಿಯ ಪ್ರವಾಹವನ್ನು ನಿದಿಧ್ಯಾಸನದಿಂದ ಹೊಂದುತ್ತೇವೆ. ಇದೇ " ಸಮಾಧಿ " ಎಂಬುವುದು, ಇಲ್ಲಿ ಜೀವಪರಮಾತ್ಮರ ಭೇದವು ನಷ್ಟವಾಗಿ ಧ್ಯಾನ, ಧ್ಯಾತೃ, ಧ್ಯೇಯಗಳೆಂಬ 'ತ್ರಿಪುಟಿ' ಶೂನ್ಯವಾಗಿ ಸರ್ವಸಂಕಲ್ಪಗಳೂ ಲಯ ಹೊಂದುವುವು.

ಹೀಗೆ, ಶ್ರವಣ, ಮನನ, ನಿದಿಧ್ಯಾಸನ, ಸಮಾಧಿ ಎಂಬ ನಾಲ್ಕೂ ಸಾಧನೆಗಳಿಂದ, ಪ್ರತಿಬಂಧವಿಲ್ಲದೆ ಉಂಟಾಗುವ ವಿದ್ಯಾರೂಪ ಚರಮವೃತ್ತಿಯಿಂದ ಬ್ರಹ್ಮಸಾಕ್ಷಾತ್ಕಾರವಾಗುವುದು.

(ಸಮಾಧಿಯನ್ನು ನಿದಿಧ್ಯಾಸನದಲ್ಲೇ ಸೇರಿಸಿದರೆ ಸಾಧನೆಗಳು ಮೂರೇ ಎಂದು ಹೇಳಬಹುದು) ಇದನ್ನೇ 'ಜೀವನ್ಮುಕ್ತಸ್ಥಿತಿ' ಎನ್ನುವರು.

ಹೀಗೆ ಮನೋವೃತ್ತಿಯಿಂದಲೇ ಬ್ರಹ್ಮಸಾಕ್ಷಾತ್ಕಾರ ಮತ್ತು ಸ್ವರೂಪಾ ನಂದಕ್ಕೆ ಆವಾರಕವಾದ ಮೂಲ ಭಾವನಿವೃತ್ತಿ. ಅದಕ್ಕಾಗಿಯೇ ಶ್ರುತಿಯಲ್ಲಿ, 'ಮನಸ್ಯೈವಾನುದ್ರಷ್ಟವ್ಯಂ' ಎಂದಿದೆ.

ವಿಚಾರಯೇತ್ಪ್ರಾಯಪರೋಕ್ಷೇಣ ಬ್ರಹ್ಮಾತ್ಮಾನಂ ನವೇತ್ತಿ ಚೇತ್ ।
ಅಪರೋಕ್ಷಾವಭಾಸತ್ವಾತ್ ಭೂಯೋಭೂಯೋವಿಚಾರಯೇತ್ ॥

ಎಂಬಂತೆ ವಿಚಾರ ಮಾಡಿಯೂ ತಾನೇ ಬ್ರಹ್ಮವೆಂಬ ಸಾಕ್ಷಾತ್ಕಾರವು ಉದಯಿಸ ದಿದ್ದರೆ ಅಂಥವರು ಅಪರೋಕ್ಷಾನುಭವವನ್ನು ಹೊಂದಲು ಮತ್ತೆ ಮತ್ತೆ ವಿಚಾರ ಮಾಡುತ್ತಾ ಬರಬೇಕು. ಹೀಗೆ ಮಾಡುವುದರಿಂದ ಬ್ರಹ್ಮಸಾಕ್ಷಾತ್ಕಾರದ ಪ್ರತಿ ಬಂಧಕಗಳು ನಾಶವಾಗಿ ಬ್ರಹ್ಮಸಾಕ್ಷಾತ್ಕಾರವು ದೃಢೀಕರಿಸಲ್ಪಡುತ್ತದೆ.

ಇದನ್ನೇ ವಿದ್ಯಾರಣ್ಯರು, ಶಮಾದಿಪೂರ್ವ ಶ್ರವಣ ಮನನ ನಿದಿಧ್ಯಾಸನಾ ಭ್ಯಾಸಬಲಾತ್, ವಿಷಯಾಸಕ್ತಿಃ ಪ್ರಜ್ಞಾಮಾಂದ್ಯಂ, ಕುತರ್ಕಃ, ವಿಪರ್ಯಯ ದುರಾ ಗ್ರಹ' ಶ್ಚೇತಿ ವರ್ತಮಾನ ಪ್ರತಿಬಂಧಾ ಪರೋಕ್ಷ ಬ್ರಹ್ಮಸಾಕ್ಷಾತ್ಕಾರೋದೃಢೀ ಭೂಯಾತ್ | ಎಂದಿದ್ದಾರೆ. ನಿದಿಧ್ಯಾಸನ ಮೂಲಕ ಬುದ್ಧಿಯು ಬ್ರಹ್ಮಾಕಾರವಾಗಿ ಪರಿಣಮಿಸಲು, ಆ ಬುದ್ಧಿಯಲ್ಲಿದ್ದ ಪ್ರತಿಬಿಂಬವು (ಚಿದಾಭಾಸನು) ಬ್ರಹ್ಮಸ್ವರೂಪ ದೊಳಗೆ (ಕೂಟಸ್ಥ ಶುದ್ಧ ಚೈತನ್ಯದಲ್ಲಿ) ಐಕ್ಯವಾಗಿ ಬ್ರಹ್ಮವೊಂದೇ ಪ್ರಕಾಶಿಸುವುದು ಇದೇ "ಜೀವನ್ಮುಕ್ತಿ" ಎನಿಸುವುದು,

ಜೀವನ್ಮುಕ್ತಿಯಲ್ಲಿ ತ್ರಿಪುಟಿ ನಾಶವಾಗುವುದರಿಂದ ಅದೇ ಮನೋನಾಶ ವೆಂತಲೂ ವೃತ್ತಿಶೂನ್ಯವಾಗಿರುವುದರಿಂದ ಅದೇ ವಾಸನಾಕ್ಷಯವೆಂತಲೂ ಹೇಳುವರು ಘಟನಾಶವಾಗಲು ಘಟದ ಒಳಗಿನ ಆಕಾಶವು ಹೇಗೆ ಮಹಾಕಾಶವೇ ಆಗುವುದೋ ಹಾಗೆ ಪ್ರಾರಬ್ಧನಾಶವಾದ ನಂತರ ಆಭಾಸ ಮಾತ್ರನಾಗಿದ್ದ ಜೀವವ್ಯವಹಾರವು ನಾಶವಾಗಿ ಪರಿಪೂರ್ಣ ಅದ್ವಿತೀಯ ಬ್ರಹ್ಮಮಾತ್ರವಾಗುವುದು. ಇದೇ "ವಿದೇಹ ಮುಕ್ತಿ"ಯು ಇಂತಹ ಮುಕ್ತನು ಮುಕ್ತನಾದರೂ ಪುನರ್ಜನ್ಮವನ್ನು ಪಡೆಯು ವನೋ ಎಂದು ಶಂಕಿಸಿದರೆ, ಅದಕ್ಕೆ ಕಾರಣವಿಲ್ಲವೆಂದು ಶ್ರುತಿ, ವ್ಯಾಸಸೂತ್ರ, ಯೋಗಭಾಷ್ಯಾದಿಗಳು ಹೇಳಿದೆ.

ಶ್ರುತಿ :— 'ನ ಚ ಪುನರಾವರ್ತತೇ ನ ಪುನರಾವರ್ತತೆ' (ಮುಕ್ತನಾದ ಪುರುಷನು ಪುರ್ನಜನ್ಮ ಪಡೆಯುವುದಿಲ್ಲ – ಪುನರ್ಜನ್ಮ ಪಡೆಯುವುದಿಲ್ಲ)

ವ್ಯಾಸಸೂತ್ರ :— 'ಅನಾವೃತ್ತಿಶ್ಶಬ್ದಾತ್ – ಅನಾವೃತ್ತಿಶ್ಶಬ್ದಾತ್' (ಜ್ಞಾನಿಗೆ ಪುನರಾವೃತ್ತಿ ಎಂದರೆ ಪುನರ್ಜನ್ಮವಾಗುವುದಿಲ್ಲ)

ಯೋಗಭಾಷ್ಯ :— 'ನ ಜನಿಷ್ಯತಿ, ಇತರಸ್ತು, ಜನಿಷ್ಯತಿ'

ಗೀತಾ :— 'ಯದ್ಗತ್ವಾನ ನಿವರ್ತಂತೆ ತದ್ಧಾಮ ಪರಮಂಮಮ' (ಯಾವಪುರುಷನು ಪ್ರಕೃತಿಪುರುಷ ವಿವೇಕವುಳ್ಳವನೋ ಅವನು ಪುನರ್ಜನ್ಮವನ್ನು ಹೊಂದುವುದಿಲ್ಲ.)

ಇಂತಹ ಮುಕ್ತಿಸಂಪಾದನೆಗೆ ಸಮಾಧಿಯು ಅತಿಮುಖ್ಯವಾದುದು. ಸಮಾಧಿಯಲ್ಲಿ ಎರಡು ವಿದ ಸಂಪ್ರಜ್ಞಾತ ಸಮಾಧಿ, ಅಸಂಪ್ರಜ್ಞಾತ ಸಮಾಧಿ ಎಂದು.

ನಿದಿಧ್ಯಾಸನ ಕಾಲದಲ್ಲಿ, ಧ್ಯಾನ, ಧ್ಯಾತೃ, ಧ್ಯೇಯಗಳೆಂಬ ತ್ರಿಪುಟಿಗಳು ತೋರುತ್ತಿರಲು ಅದಕ್ಕೆ 'ಸವಿಕಲ್ಪಸಮಾಧಿ' (ಸಂಪ್ರಜ್ಞಾತಸಮಾಧಿ) ಎನ್ನುವರು

ಸಮಾಧಿಯು ನಿದಿಧ್ಯಾಸನದಲ್ಲಿ ಅಂತರ್ಭೂತವಾಗಿರುವುದು. ಧ್ಯಾನ ಮಾಡುತ್ತಾ ಮಾಡುತ್ತಾ ಅಭ್ಯಾಸವಶದಿಂದ ಬುದ್ಧಿಯು ಒಂದೊಂದಾಗಿ ಧ್ಯಾತೃ, ಧ್ಯಾನಗಳೆರಡನ್ನೂ ಬಿಟ್ಟು ಧ್ಯೇಯನಾದ ವಸ್ತು ಒಂದೇ ವಿಷಯವುಳ್ಳದ್ದಾಗಿ, ಅಂದರೆ ಆಧ್ಯೇಯಾಕಾರವಾಗಿ ನಿಶ್ಚಲವಾಗಿರುವುದೋ ಆಗ 'ನಿರ್ವಿಕಲ್ಪ' (ಅಸಂಪ್ರಜ್ಞಾತ) ಸಮಾಧಿ ಎನಿಸುವುದು. ತ್ರಿಪುಟಿಯ ಭಾನರಹಿತವಾಗಿರುವ ಅಖಂಡ ಬ್ರಹ್ಮಾಕಾರ ನಾದ ವೃತ್ತಿಸ್ಥಿತಿಯೇ ನಿರ್ವಿಕಲ್ಪ (ಅಸಂಪ್ರಜ್ಞಾತ) ಸಮಾಧಿಯು, ಸ ವಿ ಕ ಲ್ಪ ಸಮಾಧಿಯು, ಸಾಧನವೆನಿಸಿದರೆ, ನಿರ್ವಿಕಲ್ಪ ಸಮಾಧಿಯು, ಅದರ ಫಲವಾಗಿರುವುದು

ಸಮಾಧಿಕಾಲದಲ್ಲಿ ಆತ್ಮನನ್ನು ವಿಷಯವಾಗಿ ಉಳ್ಳ ಚಿತ್ತವೃತ್ತಿಗಳಿರುವುವು. ಹಾಗಿಲ್ಲದಿದ್ದರೆ ಸಮಾಧಿಯಿಂದ ಎದ್ದವನಿಗೆ ಸ್ಮರಣೆಯುಂಟಾಗುವುದಿಲ್ಲ.

ಇದನ್ನೇ ಪಾತಂಜಲಿ ಸೂತ್ರದಲ್ಲಿ:—

ಕರ್ಮಾ ಶುಕ್ಲ ಕೃಷ್ಣಂ ಯೋಗಿನಸ್ತ್ರಿವಿಧಮಿತರೇಷಾಂ ।

(ಯೋ. ಸೂ. ಪಾ. ೪ ಸೂ. ೭)

ಎಂಬಲ್ಲಿ ಯೋಗಿಗೆ ಅಶುಕ್ಲಕೃಷ್ಣವೆಂಬ ಹೆಸರುಳ್ಳ ಒಂದು ಪುಣ್ಯ ವಿಶೇಷ ವಿದೆಯೆಂದೂ. ಅದು ಅದೃಷ್ಟವೆಂದೂ ಹೇಳಲ್ಪಟ್ಟಿದೆ.

ಬಾರಿಬಾರಿಗೂ ಮಾಡಲ್ಪಡುವ ಸಮಾಧಿ ಅಭ್ಯಾಸದಿಂದ ಉಂಟಾದ 'ಭಾವನೆ' ಎಂಬ ಹೆಸರುಳ್ಳದ್ದು 'ಸಂಸ್ಕಾರ ವಿಶೇಷ'ವೆನಿಸುವುದು.

ಈ ಅದೃಷ್ಟ, ಸಂಸ್ಕಾರ ವಿಶೇಷಗಳು ಸಮಾಧಿಗೆ ಸಹಕಾರಿ ಕಾರಣಗಳು. ಸಮಾಧಿಗೆ ಪೂರ್ವದಲ್ಲಿ ಮಾಡುವ ಪ್ರಥಮ ಪ್ರಯತ್ನವು, ಈ ಅದೃಷ್ಟ, ಸಂಸ್ಕಾರ ಗಳೊಡನೆ ಕೂಡಿರುವುದು. ಈ ಮೂರರಿಂದ ಸಮಾಧಿ ಕಾಲದಲ್ಲಿ ಆತ್ಮನೇ ವಿಷಯ ವಾಗಿ ಉಳ್ಳ ಚಿತ್ತವೃತ್ತಿಗಳು ಪ್ರವಾಹರೂಪವಾಗಿರುವುವು.

ಈ ಸಮಾಧಿಗಳಿಂದ ಜನನ ಮರಣ ಸಂಸಾರರೂಪದಲ್ಲಿ ಸಂಪಾದಿಸಲ್ಪಟ್ಟ ಪುಣ್ಯಪಾಪ ಮಿಶ್ರ ಕರ್ಮಗಳೆಲ್ಲವೂ ನಾಶಹೊಂದುವುವು.

ಶ್ರುತಿಸ್ಮೃತಿಗಳಲ್ಲಿ ಈ ಸಂದರ್ಭದಲ್ಲಿ :—

ಶ್ರುತಿ :— 'ಕ್ಷೀಯಂತೇಚಾಸ್ಯಕರ್ಮಾಣಿ, ತಸ್ಮಿನ್ದೃಷ್ಟೇ ಪರಾವರೇ'

ಸ್ಮೃತಿ (ಗೀತಾ) :— ಜ್ಞಾನಾಗ್ನಿಸ್ಸರ್ವಕರ್ಮಾಣಿಭಸ್ಮಸಾತ್ಕುರು ತೇತಥಾ : ಎಂದು ಹೇಳಿವೆ.

ಇಷ್ಟಲ್ಲದೆ, ಇದರಿಂದ ಕಾರ್ಯವರ್ಗದೊಡನೆ ಕೂಡಿದ ಕಾರಣಾವಿದ್ಯೆಯು (ಅವಿದ್ಯೆಯ ವಿಕ್ಷೇಪಶಕ್ತಿ ಸಹಿತ ಆವರಣಶಕ್ತಿಯು) ಲಯ ಹೊಂದುವುದು. ಅಂದರೆ ಅಹಂಕಾರ, ಮಮಕಾರ, ಕರ್ತೃತ್ವ, ಭೋಕ್ತೃತ್ವ ಮುಂತಾದ ಅಭಿಮಾನಕ್ಕೆ ಕಾರಣವಾದ ವಾಸನೆಗಳು ನಿಶ್ಶೇಷವಾಗಿ ನಶಿಸುವುವು. ಒಟ್ಟಿನಲ್ಲಿ ಕರ್ಮವಾಸನಾ ಸಮೂಹವು ನಾಶಹೊಂದುವುದು. ತತ್ತ್ವಮಸಿ ಮಹಾವಾಕ್ಯದಂತೆ ಪೂರ್ವದಲ್ಲಿ ಪರೋಕ್ಷವಾಗಿ ತೋರುತ್ತಿದ್ದ ಬ್ರಹ್ಮ ತತ್ತ್ವವು ಕರ್ಮವಾಸನಾ ಪ್ರತಿಬಂಧವಿಲ್ಲದ್ದಾಗಿ 'ಅಹಂ ಬ್ರಹ್ಮಾಸ್ಮಿ' ನಾನೇ ಬ್ರಹ್ಮನೆಂಬ ಆಕಾರ ಜ್ಞಾನವನ್ನು ಹುಟ್ಟಿಸುವುದು. ಈ ಅಪರೋಕ್ಷ ಜ್ಞಾನವು ದೃಢವಾಗಲು ಅಜ್ಞಾನ ಮತ್ತು ತತ್ಕಾರ್ಯ ರೂಪವಾದ ಅನರ್ಥ ನಿವೃತ್ತಿಯಾಗಿ ಆತ್ಮಜ್ಞಾನ ಲಭಿಸಿ, ಆ ಜ್ಞಾನ ಸಮಕಾಲದಲ್ಲೇ ನಿರತಿಶಯಾನಂದ ಪ್ರಾಪ್ತಿಯಾಗುವುದು. [ಸಮಾಧಿ ಮತ್ತು ಜೀವನ್ಮುಕ್ತಿ ವಿದೇಹ ಮುಕ್ತಿಗಳ ವಿಷಯದಲ್ಲಿ ಇನ್ನೂ ಹೆಚ್ಚಿನ ವಿವರಗಳನ್ನು ಮುಂದೆ ಹೇಳಲಾಗುತ್ತೆ]

ಇದನ್ನೇ ಶ್ರುತಿಗಳು— 'ತರತಿ ಶೋಕಮಾತ್ಮವಿತ್' 'ಬ್ರಹ್ಮವೇದ ಬ್ರಹ್ಮೈವ ಭವತಿ' ಎಂದು ಹೇಳಿವೆ. ಇಂತಹ ಆನಂದವನ್ನು ಪಡೆದವನೇ ಜೀವನ್ಮುಕ್ತನು. ಆತ್ಮಸಾಕ್ಷಾತ್ಕಾರ ಪಡೆದವನು. ಅವನಿಗೆ ದೇಹಾದಿಪ್ರಪಂಚ ಪ್ರತೀತಿ ಇದ್ದರೂ ಬ್ರಹ್ಮ ಸ್ವರೂಪದಿಂದ ಸ್ಥಿತಿಯುಂಟಾಗಿರುತ್ತದೆ. ದೃಢ ಸಾಕ್ಷಾತ್ಕಾರವಾಯಿತೆಂದರೆ ಅಜ್ಞಾನ ನಿವೃತ್ತಿಯೂ ಬ್ರಹ್ಮಾನಂದ ಪ್ರಾಪ್ತಿಯೂ ಆಗುತ್ತದೆಂದು ಹೇಳಿತಷ್ಟೆ. ಸಕಲ ಸಂಚಿತ ಕರ್ಮಗಳೂ (ಸಂಚಿತ ಕರ್ಮಗಳೆಂದರೆ ಇದುವರೆಗೆ ಅನುಭವಿಸಿದ ಕರ್ಮಗಳು ಮತ್ತು ಪ್ರಾರಬ್ಧ ಕರ್ಮಗಳು. ಇವುಗಳನ್ನು ಬಿಟ್ಟು ಉಳಿದ ಕರ್ಮಗಳು) ಲಯ ಹೊಂದುವುವು. ಆಗಾಮಿ (ಈ ಜನ್ಮದಲ್ಲಿ ನಾವು ಗಳಿಸುವ ಕರ್ಮಭಾಗ) ಕರ್ಮಗಳಂತೂ ಉತ್ಪತ್ತಿಯಾಗುವ ಸಂಭವವೇ ಇಲ್ಲ. ಕೇವಲ ಪ್ರಾರಬ್ಧಕರ್ಮಮಾತ್ರ ಉಳಿದು ಫಲ ಕೊಡುತ್ತಿರುವುದು.

ಪ್ರಾರಬ್ಧ ಕರ್ಮ

ಪ್ರಾರಬ್ಧ ಕರ್ಮವೆಂದರೆ: ಪ್ರಾಣಿ ಸಾಮಾನ್ಯಕ್ಕೆ ಕರ್ಮವು ಅನಾದಿಯಾಗಿ ಜನ್ಮಜನ್ಮಾಂತರಗಳಿಂದಲೂ ವಾಸನಾಪೂರ್ವಕವಾಗಿ ಬೆನ್ನುಹತ್ತಿ ಬಂದಿರುತ್ತೆ. ಇದನ್ನು ಸುಖದುಃಖಗಳ ಅನುಭವ ರೂಪೇಣ ಅನೇಕ ಜನ್ಮಗಳಲ್ಲಿ ಅನುಭವಿಸಬೇಕು. ಇವುಗಳಲ್ಲಿ ಈ ಜನ್ಮದಲ್ಲಿ ಅನುಭವಿಸಬೇಕಾದ ಭಾಗವೇ ಪ್ರಾರಬ್ಧಕರ್ಮವು.

ಈ ಪ್ರಾರಬ್ಧ ಕರ್ಮವೆಂಬ ವಿಕ್ಷೇಪದ ವಶದಿಂದ, ಬ್ರಹ್ಮ ಸಾಕ್ಷಾತ್ಕಾರವಾದರೂ ಮಿಥ್ಯಾ ರೂಪವಾಗಿ ಪ್ರಪಂಚ ತೋರುತ್ತಿರುವುದು. ರಜ್ಜು ಜ್ಞಾನದಿಂದ ಸರ್ಪಭ್ರಾಂತಿಯು ನಿವೃತ್ತವಾದನಂತರ, ಈ ಕಂಪಾದಿಗಳು ತೋರುತ್ತಿರುವಂತೆಯೂ, ರಕ್ತವರ್ಣದ ಸ್ಫಟಿಕಮಣಿಯು ಶ್ವೇತವೆಂದು ಜ್ಞಾನವಾದರೂ, ಅಧಿಷ್ಠಾನವಾದ ಆ ಸ್ಫಟಿಕ ಮಣಿಯಲ್ಲಿ ಜಪಾಕುಸುಮವೆಂಬ ರಕ್ತವರ್ಣದ ಉಪಾಧಿ ಇರುವವರಿಗೂ, ಆ ಸ್ಫಟಿಕಮಣಿಯು ರಕ್ತರೂಪವಾಗಿ ತೋರುವಂತೆಯೂ, ತತ್ವಜ್ಞಾನಿಗೆ ಜೀವನ್ಮುಕ್ತಿ ದೆಸೆಯಲ್ಲಿ ಪ್ರಾರಬ್ಧಕರ್ಮವಿರುವುದರಿಂದ ಆ ಆ ಪ್ರಾರಬ್ಧಕರ್ಮ ಮುಗಿಯುವವರೆಗೂ ಬಾಧಿತವಾದ ಪ್ರಪಂಚದ ಪ್ರತೀತಿಯುಂಟಾಗುತ್ತದೆ. ಇದಕ್ಕೆ 'ಸೋಪಾಧಿಕ ಭ್ರಮೆ' ಎಂದು ಹೆಸರು.

ಸಾಮಾನ್ಯವಾಗಿ ಪ್ರಾಣಿಗಳಿಗೆ ಪ್ರಾರಬ್ಧಾನುಸಾರವಾಗಿ ಶಬ್ದಾದಿ ವಿಷಯಗಳಲ್ಲಿ ರಾಗ ದ್ವೇಷಗಳು ಉಂಟಾಗುತ್ತವೆ. ಇವುಗಳನ್ನು ತಪ್ಪಿಸಲು ಸಾಧ್ಯವಿಲ್ಲ. ಆದರೆ ಈ ರಾಗದ್ವೇಷಪೂರ್ವಕವಾದ ಇಚ್ಛೆಗಳನ್ನು ನಮ್ಮ ಪುರುಷ ಪ್ರಯತ್ನ ಮೂಲಕ ತಡೆಗಟ್ಟಬಹುದು. ಉದಾಹರಣೆಗಾಗಿ, ರೈಲು ಬಂಡಿಯು ಪೂರ್ವದಿಂದ ಪಶ್ಚಿಮಕ್ಕೆ ಓಡುತ್ತಿರುವುದನ್ನು ರೈಲಿನೊಳಗಿನ ಪ್ರಯಾಣಿಕನು ತಪ್ಪಿಸಲು ಸಾಧ್ಯವಿಲ್ಲ. ಆದರೆ ಅವನು ರೈಲಿನೊಳಗೇ ತನ್ನ ಸ್ವಂತ ಇಚ್ಛೆಯಿಂದ, ಪಶ್ಚಿಮದಿಂದ ಪೂರ್ವಕ್ಕೆ ತಿರುಗಾಡಬಹುದು. ವಿಷಯಕ್ಕೂ ಇಂದ್ರಿಯಕ್ಕೂ ಇರುವ ಸಂಬಂಧವೇ ಸುಖ ದುಃಖಗಳಿಗೆ ಕಾರಣ. ಅವು ನಮಗೆ ಸಂಬಂಧಪಟ್ಟವುಗಳಲ್ಲವೆಂಬುದು ಪುರುಷ ಪ್ರಯತ್ನದಿಂದ ತಿಳಿದುಕೊಳ್ಳಬೇಕು. 'ಬುದ್ಧಿಃ ಕರ್ಮಾನುಸಾರಿಣೀ' ಎಂಬಂತೆ ಪ್ರಾರಬ್ಧವಶಾತ್ ಒಬ್ಬನಿಗೆ ಕದಿಯಬೇಕೆಂಬ ಬುದ್ಧಿ ಹುಟ್ಟುತ್ತದೆ. ಆಗ ಅವನು ಕದಿಯುವುದರಿಂದ ಆಗುವ ಸಕಲ ದೋಷಗಳನ್ನು ಅನುಸಂಧಾನ ಮಾಡಿ, ಅದರಿಂದುಂಟಾಗುವ, ಸಮಸ್ತ ಅಪಮಾನ ಕಷ್ಟದುಃಖಗಳನ್ನು ಮನಸ್ಸಿನಲ್ಲಿ ಯೋಚಿಸಿ ಆ ಕೆಲಸ ಮಾಡಲು ಪ್ರಾರಬ್ಧದಿಂದ ಎಷ್ಟು ಪ್ರೇರಣೆಯಾದರೂ ಆ ಕೆಲಸವನ್ನು ನಿಗ್ರಹಿಸುತ್ತಲೆ ಬರಬೇಕು ಕದಿಯುವುದಕ್ಕೆ ಸಮಯ ದೊರೆತಾಗಲೆಲ್ಲಾ ಪೂರ್ವಜನ್ಮದ ವಾಸನೆಯಿಂದ ಕದಿಯುವ ಬುದ್ಧಿಯೇನೋ ಹುಟ್ಟುತ್ತದೆ. ಹಾಗೆ ಹುಟ್ಟಿದಾಗಲ್ಲೆಲ್ಲಾ ಮೇಲೆ ಹೇಳಿರುವ ರೀತಿಯಲ್ಲಿ ತಡೆಗಟ್ಟಬೇಕು. ಹೀಗೆ ಮಾಡುವುದರಿಂದ ಆ ಮನುಷ್ಯನು ಪ್ರಾರಬ್ಧ ಕರ್ಮವನ್ನು ಕದಿಯಬೇಕೆಂಬ ಕೇವಲ ಇಚ್ಛಾಮಾತ್ರದಿಂದಲೇ ಅನುಭವಿಸಿ ಕಳೆದುಕೊಳ್ಳುವನು. ಅಲ್ಲದೆ ಯಾವ ಕಾರ್ಯವನ್ನು ಮಾಡುವಾಗಲೂ, ಯಾವ ಕಾಮನೆಯನ್ನೂ ಹೊಂದದೆ ನಿಷ್ಕಾಮನಾಗಿ ಈಶ್ವರಾರ್ಪಣ ಬುದ್ಧಿಯಿಂದ ಮಾಡುತ್ತಾ ಬಂದರೆ ಚಿತ್ತಶುದ್ಧಿಯಾಗಿ ಪ್ರಾರಬ್ಧವಶಾತ್ ಸಂಭವಿಸುವ ದೇಹಮೂಲಕವಾದ ಸುಖ ದುಃಖಗಳು ನಮ್ಮನ್ನು ಬಾಧಿಸುವುದಿಲ್ಲ.

ಇದನ್ನೇ ಮತ್ಸ್ಯ ಪುರಾಣದಲ್ಲಿ ' ಪ್ರತಿಕೂಲಂ ತಥಾ ದೈವಂ, ಪೌರು ಷೇಣ ವಿಹನ್ಯತೇ ' ಅಂದರೆ ದೈವವು (ಪ್ರಾರಬ್ಧ ಕರ್ಮವು) ಪ್ರತಿಕೂಲವಾಗಿದ್ದರೂ, ಪುರುಷ ಪ್ರಯತ್ನದಿಂದ ಹತವಾಗುತ್ತದೆ. ಇದಕ್ಕೆ ಮಾರ್ಕಂಡೇಯ ಸಾವಿತ್ರಿ ಇವರುಗಳು ಸಾಕ್ಷಿ.

ಪೂರ್ವ ಜನ್ಮದ ಕರ್ಮಫಲವನ್ನು ಅನುಭವಿಸುವ ಸಮಯದಲ್ಲಿ ಯಾವ ದುಷ್ಕರ್ಮವನ್ನು ಮಾಡುತ್ತಿದ್ದರೂ ಅದು ಅತ್ಯುತ್ಕಟವಾದರೇ ವಿನಹ, ಅದರ ಫಲವು ಆಗಲೇ ಬರುವುದಿಲ್ಲ. ಆದುದರಿಂದಲೇ ದುಷ್ಕಾರ್ಯವನ್ನು ಮಾಡುವವರು ಪ್ರಕೃತದಲ್ಲಿ ತಪ್ಪಿಸಿಕೊಂಡಿರುವರು. ಆದರೆ ಅವರು ಮಾಡುವ ದುಷ್ಕಾರ್ಯ ಫಲವನ್ನು ಮುಂದೆ ಅನುಭವಿಸಿಯೇ ತೀರಬೇಕು. ಆತ್ಮಜ್ಞಾನ ಬಂದವನು ಕೂಡ ಪ್ರಾರಬ್ಧವನ್ನು ಅನುಭವಿಸಿ ಕಳೆಯುತ್ತಾನೆ. ಆದರೆ, ಪ್ರಾರಬ್ಧಕರ್ಮಗಳು ದೇಹಕ್ಕೆ ತಾಪ ಕೊಡುವುವೇ ಹೊರತು, ತನಗೂ ಅವಕ್ಕೂ ಸಂಬಂಧವಿಲ್ಲವೆಂದು ದೃಢ ಅಪರೋಕ್ಷ ಜ್ಞಾನದಿಂದ ತಿಳಿದರೆ ತಾಪ ಕೊಡುವುದಿಲ್ಲ.

ಆತ್ಮ ಜ್ಞಾನಿಗೆ ಆಗಾಮಿ ಕರ್ಮ ಬರುವ ಸಂಭವವೇ ಇಲ್ಲ. ಸಂಚಿತ ಕರ್ಮಗಳೆಲ್ಲಾ ಆತ್ಮಜ್ಞಾನದಿಂದ ದಗ್ಧವಾಗುತ್ತವೆ.

ಕುಲಾಲನ ಚಕ್ರವು ಕುಲಾಲನು ದಂಡವನ್ನು ತಿರುಗಿಸುವ ಯತ್ನವನ್ನು ಬಿಟ್ಟಮೇಲೂ ವೇಗದ ಬಲದಿಂದ ತಿರುಗುತ್ತಿರುವಂತೆ ಆತನಿಗೆ ಆಭಾಸ ಮಾತ್ರವಾಗಿರುವ ಜೀವವ್ಯವಹಾರ ನಡೆಯುವುದು. ಆತನು ಮಾಡುವ ಕರ್ಮ ನಿಜವಾಗಿ ಕರ್ಮವೇ ಅಲ್ಲ,

ಇದನ್ನೇ ಗೀತೆಯಲ್ಲಿ : ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿ ಸಃ ಎಂದಿದೆ.

ಕೇವಲ ಕರ್ಮ ಉಪಾಸನೆಗಳಿಂದ ಮುಕ್ತಿಯೆ ?

ಕೆಲವರು ಕೇವಲ ಕರ್ಮದಿಂದ ಮುಕ್ತಿ ಎನ್ನುವರು. ಮತ್ತೆ ಕೆಲವರು ಕೇವಲ ಉಪಾಸನೆಯಿಂದ ಮುಕ್ತಿ ಎನ್ನುವರು. ಮತ್ತೆ ಕೆಲವರು ಕೇವಲ ಉಪಾಸನೆಯಿಂದ ಮುಕ್ತಿ ಎನ್ನುವರು. ಇನ್ನು ಕೆಲವರು ಕರ್ಮ ಉಪಾಸನೆ ಇವೆರಡರ ಸಮುಚ್ಚಯದಿಂದ ಮುಕ್ತಿ ಎನ್ನುವರು ಇವುಗಳ್ಯಾವುವೂ ಸರಿಯಿಲ್ಲವೆಂದೂ ' ನಾಸ್ತ್ಯಕೃತಃ ಕೃತೇನ ' ಎಂಬ ಶ್ರುತಿಯು ಹೇಳಿರುವುದು. ಕ್ರಿಯಾತ್ಮಕವಾದ ಕರ್ಮ ಉಪಾಸನೆಗಳಿಂದ ಮುಕ್ತಿಯಾಗುವುದಿಲ್ಲ. ಕರ್ಮ ಉಪಾಸನೆಗಳನ್ನು ಮಾಡಲು ದೇಹಾದಿ ಪಂಚಕೋಶಗಳ ಅಭಿಮಾನ, ಫಲಾಪೇಕ್ಷೆ, ಅವಿದ್ಯೆಗಳಿರ

ಬೇಕು. ಅಲ್ಲದೆ ಕರ್ಮಫಲಗಳು, ಉತ್ಪತ್ತಿ, ಪ್ರಾಪ್ತಿ, ಸಂಸ್ಕಾರ, ವಿಕಾರ, ಇವುಗಳಿಂದ ಕೂಡಿರುತ್ತವೆ. ಇವುಗಳು ಮೋಕ್ಷಕ್ಕೆ ಸಂಬಂಧಪಟ್ಟವೇ ಅಲ್ಲ. ಮತ್ತು ಅಕಾಮನಿಗೇನೆ ಮೋಕ್ಷ ಪ್ರಾಪ್ತಿಯು. ಇದನ್ನೇ ಶ್ರುತಿಯು 'ಶ್ರೋತ್ರಿಯಸ್ಯ ಚಾ ಕಾಮಹತಸ್ಯ' ಎಂದು ಹೇಳಿದೆ.

ವೇದಗಳಲ್ಲಿ ಕರ್ಮಕಾಂಡವೇ ಹೆಚ್ಚಾಗಿದೆಯಲ್ಲಾ ಎಂದು ಕೇಳಿದರೆ ವೇದಗಳು ಜನಗಳ ಯೋಗ್ಯತೆಯನ್ನು ನೋಡಿ ಅವರಿಗೆ ಏನು ಬೇಕೋ ಅದನ್ನು ಉಪದೇಶ ಮಾಡುತ್ತವೆ, ಐಹಿಕ ಸುಖಗಳೂ ಸ್ವರ್ಗಾದಿಗಳೂ ಬೇಕಾದವರಿಗೆ ಕರ್ಮಕಾಂಡವನ್ನೂ ಮೋಕ್ಷಬೇಕೆಂಬುವರಿಗೆ ಜ್ಞಾನಕಾಂಡವನ್ನೂ ಬೋಧಿಸಿದೆ. ಕರ್ಮಫಲಗಳನ್ನು ಕೇಳುವರೇ ಹೆಚ್ಚಾದ್ದರಿಂದ, ಅದಕ್ಕಾಗಿ ವೇದಗಳಲ್ಲಿ ಕರ್ಮಕಾಂಡವು ವಿಸ್ತಾರವಾಗಿ ಹೊರಟಿದೆ.

ಮೋಕ್ಷಸಂಪಾದನೆಗೆ ಕರ್ಮಗಳ ಸಹಾಯ ಬೇಕು. ಕರ್ಮಗಳನ್ನು ಈಶ್ವರಾರ್ಪಣ ಬುದ್ಧ್ಯಾ ನಿಷ್ಕಾಮನೆಯಿಂದ ಆಚರಿಸಿದರೆ, ನಮ್ಮಲ್ಲಿರುವ ದುರಿತಗಳು ನಿವಾರಣೆಯಾಗಿ ಮಲಿನ ಸಂಸ್ಕಾರಗಳೆಲ್ಲಾ ಹೋಗಿ ಚಿತ್ತಶುದ್ಧಿಯಾಗುತ್ತದೆ, ಅಷ್ಟೆ ಚಿತ್ತಶುದ್ಧಿಯಾದ ಮೇಲೆ, ಸಾಧನಚತುಷ್ಟಯಸಂಪನ್ನನಾಗಿ, ಶ್ರವಣ ಮನನಾದಿಗಳನ್ನು ಮಾಡಿಯೇ ಜ್ಞಾನಸಂಪಾದನೆ ಮಾಡಬೇಕು. ಭಕ್ತಿ, ಕರ್ಮ ಮತ್ತು ಉಪಾಸನೆಗಳು ಚಿತ್ತ ಶುದ್ಧಿ ಚಿತ್ತೈಕಾಗ್ರತೆಗಳ ಮೂಲಕ ಆತ್ಮಜ್ಞಾನ ಸಂಪಾದನೆಗೆ ಸಾಧನೆಗಳೇ ಹೊರತು ಜ್ಞಾನಾಂಗಗಳಲ್ಲ. ಭಕ್ತಿಯು ಜ್ಞಾನಕ್ಕೆ ಸಾಧನೆಯೆಂದೇ ಗೀತೆಯಲ್ಲಿ ಹೇಳಿದೆ. ಗೀತೆಯಲ್ಲಿ ಜ್ಞಾನಸಾಧನಗಳಾದ 'ಅಮಾನಿತ್ವಾದಿ' ಗಳನ್ನು ಹೇಳುವಲ್ಲೂ 'ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ' ಎಂದು ಅನನ್ಯ ಮನಸ್ಸಿನಿಂದ ಮಾಡಿದ ಪರಮಾತ್ಮ ಧ್ಯಾನವೆಂಬ ಭಕ್ತಿಯು ಮೋಕ್ಷಕ್ಕೆ ಒಂದು ಸಾಧನವೆಂದು ತಿಳಿಸಿದೆ. ದೃಢ ಅಪರೋಕ್ಷ ಜ್ಞಾನದಿಂದ ಶ್ರೀಮಚ್ಛಂಕರರು ಹೇಳಿರುವ (ಜ್ಞಾನನಿಷ್ಠೆಯಿಂದ) ಮೋಕ್ಷ ಬರಲು, ಯಾವ ಸಹಕಾರಿಗಳೂ ಬೇಕಿಲ್ಲ. ಉದಾಹರಣೆಗಾಗಿ ದೀಪದಿಂದ ಕತ್ತಲೆ ಹೋಗುತ್ತದೆ. ಆದರೆ ಕತ್ತಲೆ ಹೋಗಿಸಲು ದೀಪದ ಜೊತೆಗೆ ಬೇರೆ ಸಹಾಯ ಬೇಕಿಲ್ಲ. ದೀಪ ತರಲು ಮಾತ್ರ ಇತರರ ಸಹಾಯ ಬೇಕಾದರೆ ಬೇಕಾಗಬಹುದು. ಇದರಂತೆಯೇ ಜ್ಞಾನಕ್ಕೆ ಭಕ್ತಿ ಉಪಾಸನೆ, ಕರ್ಮಗಳಸ, ಂಬಂಧ

ಧ್ಯಾನರೂಪ ಕರ್ಮವಾದ ಉಪಾಸನೆ ಕರ್ಮಗಳಿಗೆ ಸಮುಚ್ಚಯ ಹೇಳಬಹುದೇ ಹೊರತು ಇವುಗಳಿಗೂ ಆತ್ಮ ಜ್ಞಾನಕ್ಕೂ ಸಮುಚ್ಚಯವಿಲ್ಲ. ಇದನ್ನೇ ಶಂಕರರು ಗೀತಾಭ್ಯಾಸ್ಯದಲ್ಲಿ "ಕೇವಲಾದೇವ ತತ್ವಜ್ಞಾನಾತ್ ಮೋಕ್ಷ ಪ್ರಾಪ್ತಿಃ ನ ಕರ್ಮಸಮುಚ್ಚಿತಾತ್" ಎಂದಿದ್ದಾರೆ.

ಕರ್ಮೋಪಾಸನೆಗಳ ಸಮುಚ್ಚಯಕ್ಕೆ 'ದೇವತಾಪ್ತಿಯ' (ಉಪಾಸನೆ ಮಾಡಿದ ದೇವತೆಯಲ್ಲಿಗೆ ಹೋಗುವುದು) ಎಂಬುದು ಪರಮ ಫಲ. ಆದರೆ, ಎಲ್ಲಕ್ಕೂ ಕಾರಣವಾಗಿರುವ ಪರಬ್ರಹ್ಮವನ್ನು ಸೇರುವುದು ಅದರಿಂದ ಆಗಲಾರದು. ಕರ್ಮವನ್ನೂ ಜ್ಞಾನವನ್ನೂ ಒಬ್ಬನೇ ಒಂದೇ ಕಾಲದಲ್ಲಿ ಸೇರಿಸಿ, ಅನುಷ್ಠಾನ ಮಾಡುವುದು ಸಾಧ್ಯವಿಲ್ಲವಾದದ್ದು.

ನಾವು ಅಜ್ಞಾನದಿಂದಲೇ ಪರಬ್ರಹ್ಮಕ್ಕಿಂತ ಬೇರೆಯಾಗಿರುವುದರಿಂದ ಜ್ಞಾನದಿಂದಲೇ ಅದನ್ನು ಸೇರಬೇಕಾಗಿರುವುದು.

ಅಕರ್ತ್ರಾತ್ಮಬುದ್ಧಿ ರೂಪವಾದ ಜ್ಞಾನದೊಳಗೆ, ಅಜ್ಞಾನಸೃತ ಕರ್ತೃತ್ವ ಬುದ್ಧಿಯಿಂದ ಕೂಡಿದ ಕರ್ಮೋಪಾಸನೆಗಳು ಇರಲೇ ಆರವು.

ಕರ್ಮ ಉಪಾಸನೆಗಳು ಚಿತ್ತಶುದ್ಧಿ, ಚಿತ್ತೈಕಾಗ್ರತೆಗಳ ದ್ವಾರಾ ಮೋಕ್ಷ ಸಂಪಾದನೆಗೆ ಸಹಕಾರಿಗಳಾಗಿವೆ. ಅವಿದ್ಯೆಯನ್ನು ಆತ್ಯಂತಿಕವಾಗಿ ನಾಶಪಡಿಸುವ ಜ್ಞಾನವು ವೇದಗಳ ಜ್ಞಾನಕಾಂಡದಲ್ಲಿ ಮಾತ್ರ ಸಿಕ್ಕುತ್ತದೆ. ಕರ್ಮಕಾಂಡ ದಲ್ಲಿ ಜ್ಞಾನವು ಕರ್ಮಗಳ ಶ್ರುತಿಗಾಗಿ ಕರ್ಮಕ್ಕೆ ಅಂಗವಾಗಿರುತ್ತದೆ. ಹೀಗಾಗಿ ಜ್ಞಾನಕಾಂಡದಲ್ಲಿರುವ ಜ್ಞಾನವೇ ಮೋಕ್ಷಪ್ರಾಪ್ತಿಗೆ ಅವಶ್ಯವಾದದು.

ಸುಖದುಃಖಾದಿಗಳು ಕೇವಲ ಬುದ್ಧ್ಯಾದಿಗಳಿಗಾಗಲಿ ಅಥವಾ ಕೇವಲ ಕೂಟಸ್ಥ ಚೈತನ್ಯಕ್ಕಾಗಲಿ ಇಲ್ಲ. ಕೇವಲ ಅರಿಶಿನಕ್ಕಾಗಲಿ ಅಥವಾ ಕೇವಲ ಸುಣ್ಣಕ್ಕಾಗಲೀ ಕೆಂಪು ಬಣ್ಣವಿಲ್ಲದೆ ಅವೆರಡರ ಸಂಯೋಗದಿಂದ ಕೆಂಪು ಬಣ್ಣ ತೋರುವಂತೆ ಶರೀರ, ಇಂದ್ರಿಯ ಬುದ್ಧಿಗಳನ್ನು ತಾನೆಂದು ಅವಿದ್ಯೆಯ ಆವರಣ ವಿಕ್ಷೇಪ ಶಕ್ತಿಗಳಿಂದ ಭಾವಿಸಿದ ಚೈತನ್ಯದ ಪ್ರತಿಬಿಂಬವಾದ ಚಿದಾಭಾಸ ಜೀವಕ್ಕೆ ಈ ಸುಖದುಃಖಾದಿಗಳು ಅನುಭವಕ್ಕೆ ಬರುತ್ತವೆ.

ನಿಜವಾಗಿ ನೋಡುವಲ್ಲಿ,

ನ ನಿರೋಧೋ ನ ಚೋತ್ಪತ್ತಿಃ । ನ ಬದ್ಧೋ ನ ಚ ಸಾಧಕಃ ॥
ನ ಮುಮುಕ್ಷುಃ ನ ವೈ ಮುಕ್ತಃ । ಇತ್ಯೇಷಾ ಪರಮಾರ್ಥತಾ ॥

ಎಂಬ ಗೌಡಪಾದಕಾರಿಕೆಯ ಶ್ಲೋಕದಂತೆ, ಕಾರಣಾವಿದ್ಯಾರೂಪ ವಾದ ನಿದ್ರೆಯಲ್ಲಿ ಸರ್ವ ಕಲ್ಪನೆಗಳೂ ಇವೆಯೇ ಹೊರತು, ಪರಮಾರ್ಥ ದೃಷ್ಟಿ ಯಿಂದ ನೋಡಿದರೆ ಯಾವ ಬಂಧವೂ ಇಲ್ಲ, ಯಾವ ಮುಕ್ತಿಯೂ ಇಲ್ಲ, ಜನಿಸುವುದೂ ಇಲ್ಲ, ಮರಣವೂ ಇಲ್ಲ. ಬದ್ಧನೂ ಇಲ್ಲ, ಸಾಧಕನೂ ಇಲ್ಲ, ಮುಮುಕ್ಷುವೂ ಇಲ್ಲ, ಮುಕ್ತಿಯೂ ಇಲ್ಲ, ಹೀಗೆ ನಿರ್ಗುಣ ಬ್ರಹ್ಮವು ನಿತ್ಯಮುಕ್ತ.

ಆದರೆ ನಾವು ಅಜ್ಞಾನದೆಸೆಯಲ್ಲಿ ನಿದ್ದೆಯಲ್ಲಿದ್ದೇವೆ. ಕಾರಣಾವಿದ್ಯೆಯೆಂಬ ಆವರಣ ಶಕ್ತಿಯೇ ಸಮಸ್ತಪ್ರಾಣಿಗಳ ವ್ಯಾಪಾರಕ್ಕಲ್ಲದೆ ಜನನ ಮರಣಗಳಿಗೂ ಕಾರಣವಾಗಿರುವುದು. ಇದೇ ಈಶ್ವರಾಧೀನವಾಗಿ ಬ್ರಹ್ಮಾಂಡ ಪಿಂಡಾಂಡಗಳ ಸೃಷ್ಟಿಗೂ ಕಾರಣವಾಗಿದೆ. ಪ್ರತಿಪ್ರಾಣಿಯ ದೇಹದಲ್ಲೂ ಕಾರಣದೇಹರೂಪ ವಾದ ತಮಸ್ಸಿನ ಆವರಣವೇ ಈ ಕಾರಣಾವಿದ್ಯೆ.

ಈ ಅವಿದ್ಯೆಯನ್ನು (ಅಜ್ಞಾನವನ್ನು) ನಿವಾರಣೆ ಮಾಡಿಕೊಳ್ಳಲು ನಮ್ಮ ಬುದ್ಧಿಯನ್ನು ಆತ್ಮಜ್ಞಾನಸಂಪಾದನೆಗೆ ಸಿದ್ಧಪಡಿಸಬೇಕು.

ಇದಕ್ಕಾಗಿ ನಮ್ಮಲ್ಲಿರುವ 'ಪಾಶಕ್ಲೇಶಗಳನ್ನು' ಕಳೆದುಕೊಳ್ಳಬೇಕು ಅಂದರೆ,

1) ಜ್ಞಾನಕ್ರಿಯಾ ಶಕ್ತಿಗಳನ್ನು ಮುಚ್ಚುವ ದೋಷವಾದ 'ಮಲ'
2) ರಾಗದ್ವೇಷಾದಿಗಳಿಗೆ ಕಾರಣವಾದ ಅವಿದ್ಯೆಯ ಆವರಣ.
3) ಪುಣ್ಯ, ಪಾಪ, ಮಿಶ್ರ ಎಂಬ ತ್ರಿವಿಧ ಕರ್ಮಗಳು.
4) ಅಜ್ಞರಿಂದ ಆಗತಕ್ಕ ತತ್ವತಿರೋಧಾನ ಎಂಬ 'ಪಾಶ'ಗಳನ್ನೂ

ಅವಿದ್ಯೆ, ಅಸ್ಮಿತ, ರಾಗ, ದ್ವೇಷ, ಅಭಿನಿವೇಶಗಳೆಂಬ 'ಕ್ಲೇಶ'ಗಳನೂ ಕಳೆದುಕೊಳ್ಳಬೇಕು.

ಕ್ಲೇಶಗಳಲ್ಲಿ ಮುಖ್ಯವಾದುದು 'ಅವಿದ್ಯೆ.' ಈ ವಿದ್ಯೆಗಳಲ್ಲಿ ನಾಲ್ಕು ವಿಧಗಳಿವೆ.

a) ಅನಿತ್ಯದಲ್ಲಿ ನಿತ್ಯಬುದ್ಧಿ b) ಆಶುಚಿಯಲ್ಲಿ ಶುಚಿ ಬುದ್ಧಿ
c) ದುಃಖದಲ್ಲಿ ಸುಖಬುದ್ಧಿ d) ಅನಾತ್ಮಲ್ಲಿ ಆತ್ಮಬುದ್ಧಿ

ಅಂದರೆ ಅನಾತ್ಮ ರೂಪವಾದ ಪಂಚಕೋಶಗಳಲ್ಲಿ ನಾನೆಂಬ ಅಭಿಮಾನ.

ಈ ರೀತಿಯಾದ ಸಾಧನಗಳನ್ನು ವ್ಯಾಸರು ಬ್ರಹ್ಮಸೂತ್ರದಲ್ಲಿ ಪ್ರಾರಂಭ ದಲ್ಲಿಯೇ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಹೇಳುವುದರಲ್ಲಿ ಸೂಚಿ ಸಿದ್ದಾರೆ.

ಬ್ರಹ್ಮ ವಿಚಾರ ಮಾಡುವವನು, ಸಾಧನಚತುಷ್ಟಯವನ್ನು ಸಂಪಾ ದಿಸಿ, ಉತ್ಕಟ ಜಿಜ್ಞಾಸುವಾಗಿರಬೇಕು.

ಬ್ರಹ್ಮ ಸೂತ್ರಗಳು

ಉಪನಿಷತ್ತುಗಳ ಅರ್ಥವನ್ನು ನ್ಯಾಯದಿಂದ ನಿರ್ಣಯಮಾಡಲು ಬ್ರಹ್ಮಸೂತ್ರಗಳು ಹೊರಟವೆ.

ಇದರಲ್ಲಿ, ಶರೀರ ಇಂದ್ರಿಯಾದಿಗಳನ್ನು ನಾನು, ನನ್ನದು ಎಂದು ವ್ಯವಹರಿಸುವ ಜೀವನ ನಿಜ ಸ್ವರೂಪವನ್ನು ವಿಚಾರಮಾಡಿರುವುದರಿಂದ ಇದಕ್ಕೆ 'ಶಾರೀರ ಮೀಮಾಂಸ' ಎಂದು ಹೆಸರಾಯಿತು. ಅಲ್ಲದೆ ಆ ನಿಜ ಸ್ವರೂಪ. 'ಬ್ರಹ್ಮ'ವೆಂದು ನಿರ್ಧರಿಸಿದ್ದರಿಂದ ಇದಕ್ಕೆ 'ಬ್ರಹ್ಮ ಸೂತ್ರ'ವೆಂದು ಹೆಸರು ಬಂದಿತು.

ಇದರಲ್ಲಿ, ಉಪನಿಷದ್ವಾಕ್ಯಗಳನ್ನು ತೆಗೆದುಕೊಂಡು ಆ ವಾಕ್ಯಗಳ ತಾತ್ಪರ್ಯವನ್ನು ಗೊತ್ತುಪಡಿಸಲಾಗಿದೆ. ಜೀವಪುಗಳ ಪರಮಾರ್ಥ ಸ್ವರೂಪ ಬ್ರಹ್ಮವೆಂಬುದಕ್ಕೆ ವಿರೋಧವಾದ ಇತರ ತರ್ಕಗಳನ್ನು ಎತ್ತಿ ತೋರಿಸಿ ಕೊನೆಗೆ ಉಪಾಸನಾ ಮೂಲಕ ಕ್ರಮಮುಕ್ತಿಯನ್ನೂ ಬ್ರಹ್ಮಾತ್ಮಜ್ಞಾನದಿಂದ ಜೀವನ್ಮುಕ್ತಿಯನ್ನೂ ತಿಳಿಸಿದೆ.

ಒಟ್ಟಿನಲ್ಲಿ ಬ್ರಹ್ಮ ಸೂತ್ರವು ಸಮನ್ವಯ, ಅವಿರೋಧ, ಸಾಧನ, ಫಲ ಎಂಬ 4 ಅಧ್ಯಾಯಗಳನ್ನೊಳಗೊಂಡಿದೆ.

ಸಮನ್ವಯಾಧ್ಯಾಯವು ವಿಭಿನ್ನ ಶ್ರುತಿಗಳಿಗೆ ಬ್ರಹ್ಮವೇ ಅರ್ಥವೆಂದು ನಿರ್ಣಯಿಸಿದೆ.

ಅವಿರೋಧಾಧ್ಯಾಯವು ವೇದಾಂತಮತಕ್ಕೆ (ಅದ್ವೈತ ವೇದಾಂತಕ್ಕೆ) ಇತರ ಮತಗಳಿಂದ ಇರುವ ವಿರೋಧವನ್ನು ಪರಿಹರಿಸುತ್ತದೆ.

ಸಾಧನಾಧ್ಯಾಯವು ಬ್ರಹ್ಮಸಾಕ್ಷಾತ್ಕಾರ ಹೊಂದುವ ಉಪಾಯವನ್ನು ತಿಳಿಸುತ್ತದೆ.

ಫಲಾಧ್ಯಾಯವು ಬ್ರಹ್ಮ ಸಾಕ್ಷಾತ್ಕಾರಕ್ಕೆ ಫಲವಾದ ಮುಕ್ತಿಯ ಸ್ವರೂಪವನ್ನು ಬೋಧಿಸುತ್ತದೆ.

ಎರಡನೆ ಅಧ್ಯಾಯ

A. ಆತ್ಮಜ್ಞಾನ ಸಂಪಾದನೆಗೆ ಹಲವು ಮಾರ್ಗಗಳು :

ಸಾಧನ ಚತುಷ್ಟಯಗಳಾದ ನಿತ್ಯಾನಿತ್ಯವಸ್ತುವಿವೇಕ, ವೈರಾಗ್ಯ, ಶಮಾದಿ ಷಟ್‌ಸಂಪತ್ತಿ, ಮುಮುಕ್ಷುತ್ವಗಳನ್ನು ಪಡೆದು, ಶ್ರವಣ, ಮನನ ನಿದಿಧ್ಯಾಸನಗಳಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದು. ಇದನ್ನು ಆಗಲೇ ವಿವರಿಸಿದೆ.

B. ಯೋಗರೀತ್ಯಾ ಸಾಧನದಲ್ಲಿ ಹಠಯೋಗ:—

ಹಠಯೋಗಿಯು, ದೇಹದಿಂದಲೂ, ಪ್ರಾಣದಿಂದಲೂ ಸಾಧನೆಯನ್ನು ಆರಂಭಿಸುವನು. ಅವನು ಬುದ್ಧಿಶಕ್ತಿಯನ್ನೂ ಇಚ್ಛಾಶಕ್ತಿಯನ್ನೂ ಉಪ

ಯೋಗಿಸಿಕೊಂಡು, ಮನಸ್ಸಿನ ಸ್ವಭಾವಗಳ ಮರ್ಮಗಳನ್ನೂ ಅವನ್ನು ವಶಪಡಿಸಿ ಕೊಳ್ಳುವ ರೀತಿಯನ್ನೂ ತಿಳಿದು, ಅದರಂತೆ ನಡೆಯುವನು.

ಇದು ಜ್ಞಾನ ಸಾಧನೆಗೆ ಅಷ್ಟು ಮುಖ್ಯವಾದುದಲ್ಲ.

C. **ಸಪ್ತಜ್ಞಾನ ಭೂಮಿಕೆಗಳು:—**

ಇವುಗಳು ಶುಭೇಚ್ಛೆ, ಸುವಿಚಾರಣಾ, ತನುಮಾನಸಾ, ಸತ್ವಾಪತ್ತಿ, ಅಸಂಸಕ್ತಿ ಪದಾರ್ಥಭಾವಿನಿ ತುರಿಯಗಾ ಎಂದು 7 ಭೂಮಿಕೆಗಳಾಗಿವೆ.

ಶುಭೇಚ್ಛೆ : ಆತ್ಮನನ್ನು ತಿಳಿಯುವುದರಲ್ಲಿ ಉಂಟಾಗುವ ತೀವ್ರ ಇಚ್ಛೆ. ಇದು ಪೂರ್ವ ಜನ್ಮದ ಅಥವಾ ಈ ಜನ್ಮದ ನಿಷ್ಕಾಮ ಕರ್ಮದಿಂದಲೂ ಮತ್ತು ಈಶ್ವರನ ಉಪಾಸನೆಯಿಂದಲೂ ದೊರೆಯುತ್ತದೆ. ಶುದ್ಧವಾದ ಮತ್ತು ಏಕಾಗ್ರ ವಾದ ಚಿತ್ತವುಳ್ಳವರಿಗೆ, ವಿವೇಕ, ವೈರಾಗ್ಯ, ಶಮಾದಿ ಷಟ್ಸಂಪತ್ತಿ, ಮೋಕ್ಷೇಚ್ಛೆ ಗಳೆಂಬ ಸಾಧನಗಳುಂಟಾಗಿ ಅವುಗಳಿಂದ ಈ ಶುಭೇಚ್ಛೆಯು ಫಲಿಸುವುದು.

ಸುವಿಚಾರಣಾ: ಗುರುವಿಗೆ ಶರಣಾಗತನಾಗಿ, ಗುರುವಿನಿಂದ ಜೀವೇಶ್ವರರ ಏಕತ್ವವನ್ನು ಬೋಧಿಸುವ ವೇದಾಂತ ವಾಕ್ಯಗಳನ್ನು ಶ್ರವಣಮಾಡಿ, ಅದರ ಅರ್ಥ ವನ್ನು ತನ್ನ ಮನಸ್ಸಿನಲ್ಲಿ ದೃಢಪಡಿಸಿಕೊಳ್ಳುವುದಕ್ಕಾಗಿ, ಅನೇಕ ಯುಕ್ತಿಗಳಿಂದ ಮನನ ಮಾಡುವುದು.

ತನುಮಾನಸ : ಪರಬ್ರಹ್ಮನ ಏಕತ್ವ ರೂಪವಾದ ಅರ್ಥವನ್ನು ನಿರಂ ತರಚಿಂತನರೂಪವಾದ ನಿದಿಧ್ಯಾಸನದಿಂದ ಧ್ಯಾನಿಸುತ್ತಿರುವುದು.

ಸತ್ವಾಪತ್ತಿ : ಶ್ರವಣ ಮನನ ನಿದಿಧ್ಯಾಸನಗಳಿಂದ ಸಂಶಯವಿಪ ರ್ಯಯಗಳು ಹೋಗಿ ನಿರ್ವಿಕಲ್ಪಸ್ಥಿತಿಯಾಗಲು ಶುದ್ಧಸತ್ವಗುಣವು ಚಿತ್ತದಲ್ಲಿ ಪ್ರಾಪ್ತಿಯಾಗುವ ಸ್ಥಿತಿ.

ಅಸಂಸಕ್ತಿ : ನಿರ್ವಿಕಲ್ಪಸಮಾಧಿಯಲ್ಲಿ ಅಹಂಕಾರ ಮಮಕಾರಗಳು ಹೋಗಿ, ಆಸಕ್ತಿ ಅಭಾವವಾಗುವುದೇ ಅಸಂಸಕ್ತಿಯು.

ಪದಾರ್ಥ ಭವಾನಿ : ನಿರ್ವಿಕಲ್ಪ ಸಮಾಧಿಯ ಅಭ್ಯಾಸದಿಂದ ಸರ್ವ ಪದಾರ್ಥಗಳೂ, ಅಧಿಷ್ಠಾನ ಬ್ರಹ್ಮರೂಪದಿಂದ ಪ್ರತೀತಿಯಾಗಲು ಪದಾರ್ಥ ಅಭಾವ ಎಂದರೆ ಪ್ರತೀತಿಯಾಗಲು ಪದಾರ್ಥ ಭಾವಿನೀ ಎನಿಸುವುದು.

ತುರೀಯಗಾ : ಆ ಅಭಾವ ಪ್ರತೀತಿಯೂ ಉಂಟಾಗದೇ ತನ್ನಿಂ ದಲೂ, ಪರರಿಂದಲೂ, ಉತ್ಥಾನ ರಹಿತವಾದ ತುರೀಯ ಪದದಲ್ಲಿ ಮನವು ಸ್ಥಿರ ವಾಗುವುದೇ ತುರೀಯಗಾ.

ಶುಭೇಚ್ಛೆ, ಸುವಿಚಾರಣ, ತನುಮಾನಸಗಳು ತತ್ವ ಜ್ಞಾನ ಸಾಧನ. ಸತ್ವಾಪತ್ತಿಯು ಜೀವನ್ಮುಕ್ತಿ ವಿದೇಹಮುಕ್ತಿ ಕೈವಲ್ಯಸಾಧನ. ಅಸಂಸಕ್ತಿ, ಪದಾರ್ಥಭಾವಿನಿ, ತುರೀಯಗಳು ಜೀವನ್ಮುಕ್ತಿಯ ವಿಲಕ್ಷಣಾನಂದಕ್ಕೆ ಸಾಧನ.

ಮೇಲ್ಕಂಡ ಸಾಧನಗಳಿಂದ, ಜೀವನೂ ಬ್ರಹ್ಮವೂ ಒಂದೇ ಎಂಬ ದೃಢ ಸಾಕ್ಷಾತ್ಕಾರವುಂಟಾಗಿ ಮೋಕ್ಷ ಸಿದ್ಧಿಸುವುದು.

D. ಯೋಗ ವಾಸಿಷ್ಠದಲ್ಲಿನ ಯೋಗಸಾಧನಗಳು :—

1) ಸತ್ಯವೆಂಬುದು ಎರಡನೆಯದಿಲ್ಲದ ಒಂದೇ ಪರಬ್ರಹ್ಮ ವಸ್ತುವೆಂಬ ದೃಢಜ್ಞಾನ ಸಂಪಾದನೆ.

2) ಪ್ರಾಣವಾಯುಗಳಲ್ಲಿ ಸ್ವಾಧೀನತೆ ಮತ್ತು ಸಮತೆ.

3) ಮನಸ್ಸಿನಲ್ಲಿ ಸ್ತಬ್ಧತೆ.

4) ಸಮಾಧಾನ, ಶಮ.

E. ರಾಜಯೋಗ ಅಥವಾ ಜ್ಞಾನಯೋಗ ಅಥವಾ ಅಷ್ಟಾಂಗ ಯೋಗ:

ಇದನ್ನು ಮುಂದೆ ಪತಂಜಲಿಯ ಯೋಗ ಸೂತ್ರಗಳ ವಿಷಯನಿರೂಪಣೆಯ ಸಂದರ್ಭದಲ್ಲಿ ವಿವರಿಸುತ್ತೇನೆ.

F. ಕುಂಡಲಿನೀಶಕ್ತಿಯೋಗ ಅಥವಾ ಲಯಯೋಗ :

ಸ್ವಾನುಭವ ರೀತ್ಯಾ ಕುಂಡಲಿನೀ ಶಕ್ತಿಯೋಗ

ಈ ಯೋಗವು ಅತಿ ಶ್ರೇಷ್ಠವಾದುದು. ಇದರ ಅಭ್ಯಾಸವು ಅನಾದಿ ಕಾಲದಿಂದಲೂ ಬಂದಿದೆ. ಯೋಗಚಕ್ರರೀತಿಯಲ್ಲಿ ಇದನ್ನು ಅಭ್ಯಾಸ ಮಾಡುವುದು ಶಾಸ್ತ್ರ ಸಮ್ಮತವಾದುದು. ಆದರೆ ಈ ಕಲಿಗಾಲದಲ್ಲಿ ಇದು ಕಷ್ಟವು. ಪೂರ್ವ ಸಂಸ್ಕಾರ ಮತ್ತು ಪುಣ್ಯಗಳಿಲ್ಲದೆ ಇದು ದೊರೆಯುವುದು. ಕಷ್ಟ. 'ಪರಿವ್ರಾಟ್' ಆದವರು, ಈ ಯೋಗಯುಕ್ತರೂ ಆದರೆ, ಮುಕ್ತಿಯು ಶೀಘ್ರದಲ್ಲಿಯೇ ಕರಗತವಾಗುವುದು. ಉಪನಿಷತ್ತುಗಳು, ಅನೇಕ ಸ್ಮೃತಿಗಳು, ಪುರಾಣಗಳು ಇವೆಲ್ಲಾ ಇದರ ಮಹತ್ವವನ್ನು ಹಾಡಿ ಹೊಗಳಿವೆ. ಯೋಗಸಿದ್ಧರು ಇದರ ವಿಚಾರದಲ್ಲಿ ಬರೆದಿರುವ ಗ್ರಂಥಗಳಲ್ಲೂ, ಯೋಗಪ್ರಕ್ರಿಯೆಗಳಲ್ಲೂ ವ್ಯತ್ಯಾಸಗಳಿವೆ. ಆ ಗ್ರಂಥಕರ್ತೃಗಳಾದ ಯೋಗಿಗಳು ತಮತಮಗೆ ಸಿದ್ಧಿಯಾದ ಅನುಭವಗಳ ಆಧಾರದ ಮೇಲೆ ಗ್ರಂಥ ರಚಿಸಿದ್ದಾರೆ. ಅವರ ಅನುಭವಗಳು, ಅವರ ಶರೀರ

ಪ್ರಕೃತಿ, ಉಪಾಸನೆಯ ಸೌಕರ್ಯ, ಇಚ್ಛಾವಿಶೇಷಗಳನ್ನು ಅವಲಂಬಿಸಿವೆ. ಜ್ಞಾನಿಗಳು ಹೇಳುವಂತೆ ಸಾಧನಚತುಷ್ಟಯಾನುಭವಗಳಿಗೂ, ಚಕ್ರಾನುಭವಗಳಿಗೂ, ಸಪ್ತ ಜ್ಞಾನ ಭೂಮಿಕಾನುಭವಗಳಿಗೂ, ಅಷ್ಟಾಂಗಯೋಗ ಸಾಧನೆಗಳಿಗೂ ಫಲದಲ್ಲಿ ಏನೂ ಭೇದವಿಲ್ಲ. ಆದರೆ ಉಪಾಸನಾಕ್ರಮದಲ್ಲಿ ಭೇದವಿದೆ ಮತ್ತು ಫಲಾನುಭವದ ಶೀಘ್ರತೆಯಲ್ಲಿ ಭೇದವಿದೆ. [ಈ ವಿಷಯಗಳಲ್ಲಿ ನನ್ನಿಂದ ಬರೆದು ಪ್ರಕಟಿತವಾದ ರಾಮಕರ್ಣಾಮೃತವೆಂಬ ಪುಸ್ತಕದಲ್ಲಿನ ಯೋಗಖಂಡದ ಶ್ಲೋಕಗಳ ಟೀಕೆಯನ್ನು ನೋಡಿ]

ಕುಂಡಲಿನೀಶಕ್ತಿಯೋಗದಲ್ಲಿ ಹಲವು ಪ್ರಕ್ರಿಯೆಗಳಿವೆ. ಇವುಗಳಲ್ಲಿ, ತೈತ್ತರೀಯ ಉಪನಿಷತ್ ತ್ರಿಶಿಖಾ ಬ್ರಾಹ್ಮಣೋಪನಿಷತ್, ಯೋಗ ಕುಂಡಲ್ಯುಪನಿಷತ್, ಯೋಗಶಿಖೋಪನಿಷತ್ ಮುಂತಾದವುಗಳಲ್ಲಿ ಹೇಳಲ್ಪಟ್ಟಿರುವ ವಿಷಯಗಳನ್ನು ಕ್ರೋಢೀಕರಿಸಿ, ಕುಂಡಲಿನೀ ಶಕ್ತಿಯೋಗವನ್ನು ವಿವರಿಸಿದೆ.

'ನಾನಾವಿಧೈರ್ವಿಚಾರೈಸ್ತು ನ ಬಾಧ್ಯಂ ಜಾಯತೇ ಮನಃ ।
ತಸ್ಮಾತ್ತಸ್ಯ ಜಯೋಪಾಯಃ ಪ್ರಾಣ ಏವ ಹಿ ನಾನ್ಯಥಾ ।
ತರ್ಕೈರ್ಜಲ್ಪೈಃ ಶಾಸ್ತ್ರಜಾಲೈರುಕ್ತಿಭಿರ್ಮಂತ್ರಭೈಷಜ್ಯೈಃ ।
ನ ವಶೋ ಜಾಯತೇ ಪ್ರಾಣಾಸ್ಸಿದ್ಧ್ಯುಪಾಯಂ ವಿನಾ ಹಿ ಭೇ ।
ಉಪಯಂತಮವಿಜ್ಞಾಯ ಯೋಗಮಾರ್ಗೇ ಪ್ರವರ್ತತೇ ।'

ಅಂದರೆ ಕೇವಲ ವಿಚಾರಗಳಿಂದಲೇ ಮನಸ್ಸಿನ ಚಂಚಲತೆ ಹೋಗಿ ಅದು ಸ್ವಾಧೀನಕ್ಕೆ ಬರಲಾರದು. ಅದು ಸ್ವಾಧೀನವಾಗಲು ಪ್ರಾಣವಾಯುವು ಸ್ವಾಧೀನಕ್ಕೆ ಬರಬೇಕು. ಕೇವಲ ತರ್ಕದಿಂದಾಗಲೀ, ಜಲ್ಪದಿಂದಾಗಲಿ, ಶಾಸ್ತ್ರ ವ್ಯಾಸಂಗದಿಂದಾಗಲೀ ಯುಕ್ತಿ, ಮಂತ್ರೋಚ್ಚಾರಣೆಗಳಿಂದಾಗಲೀ ಪ್ರಾಣವಾಯುವು ವಶವಾಗುವುದಿಲ್ಲ. ಯೋಗಮಾರ್ಗದಿಂದಲೇ ಅದು ವಶವಾಗಬೇಕು ಎಂದು ಹೇಳಿರುವಂತೆ ಯೋಗಮಾರ್ಗವು ಮುಕ್ತಿ ಸಾಧನೆಗೆ ಅತ್ಯವಶ್ಯಕವಾದುದು.

ಶ್ರುತಿಯಲ್ಲಿ ಹೇಳಿರುವಂತೆ ಪ್ರಾಣಿಗಳ ದೇಹದಲ್ಲಿ :

ಅಷ್ಟಚಕ್ರಾ ನವದ್ವಾರಾ । ದೇವಾನಾಂ ಪೂರಯೋಧ್ಯಾ ।
ತಸ್ಯಾಂ ಹಿರಣ್ಮಯಃ ಕೋಶಃ। ಸ್ವರ್ಗೋ ಲೋಕೋ ಜ್ಯೋತಿಷಾವೃತಃ॥
(ಅಥರ್ವ ೧೦-೨-೩೧)

ಅಂದರೆ, ಈ ದೇಹವು, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಸೂರ್ಯ, ಅನಾಹತ, ವಿಶುದ್ಧಿ, ಆಜ್ಞಾ, ಭ್ರಮರ ಗುಹಾ ಎಂಬ 8 ಚಕ್ರಗಳಿಂದಲೂ ಒಂಭತ್ತು ದ್ವಾರಗಳಿಂದಲೂ ಕೂಡಿ “ ಅಯೋಧ್ಯಾ ” ಎಂದರೆ ಹಿಂಸಾರಹಿತವಾದದ್ದಾಗಿಯೂ ದಿವ್ಯ ಶಕ್ತಿಗಳಿಗೆ ಜನ್ಮಸ್ಥಾನವಾಗಿಯೂ ಇದೆ. ಇದರಲ್ಲಿಯೇ

ಆತ್ಮನ ಗುಪ್ತಸ್ಥಾನವಾದ ಬುದ್ಧಿ ಗುಹೆಯಿದೆ. ಎಂದು ಹೇಳಿದೆ.

ಇವುಗಳಲ್ಲಿ ಸಾಮಾನ್ಯ ರೂಥಿಯಲ್ಲಿ 'ಸೂರ್ಯ ಚಕ್ರ' ಸೇರಿರುವುದಿಲ್ಲ.

ಭ್ರಮರ ಗುಹ ಚಕ್ರವನ್ನು ಸಹಸ್ರಾರು ಚಕ್ರವೆನ್ನುವರು. ಹೀಗಾಗಿ ಚಕ್ರಗಳು ಏಳು.

ಚಕ್ರವೆಂದರೆ : ನಮ್ಮ ದೇಹದೊಳಗಿನ ಸ್ಥಾನವಿಶೇಷಗಳಲ್ಲಿ ಜ್ಞಾನ ತಂತುಗಳು ಕೂಡುವ ಸ್ಥಳ.

ಬೇರೆ ಬೇರೆ ಜಾಗಗಳಲ್ಲಿ ಕವಲು ಕವಲಾಗಿ ಒಡೆದಿರುವ ಜ್ಞಾನ ತಂತುಗಳು 'ಗ್ರಂಥಿ' ರೂಪದಲ್ಲಿ ಸೇರುತ್ತವೆ. ಇಂತಹ ಒಂದೊಂದು ಸಂಗಮ ಸ್ಥಳವೂ ಒಂದೊಂದು ಚಕ್ರವೆನಿಸುವುದು.

ಸಪ್ತಚಕ್ರಗಳ ವಿವರಣೆ

ಚಕ್ರಗಳಲ್ಲಿ ಶಿರಸ್ಥಾನದಲ್ಲಿರುವ 'ಸಹಸ್ರಾರ' ಚಕ್ರವನ್ನು ಬಿಟ್ಟರೆ ಉಳಿದ ಆರು ಚಕ್ರಗಳಲ್ಲಿ ಮೂಲಾಧಾರ, ಅನಾಹತ, ಆಜ್ಞಾಚಕ್ರಗಳೇ ಮುಖ್ಯವಾದವು. ಪ್ರತಿ ಚಕ್ರವೂ ಕಮಲವೆಂದೂ ಅದರ ಸುತ್ತಲೂ ಇರುವ ಮುಖ್ಯ ಸೂಕ್ಷ್ಮನಾಡಿಗಳು ಕಮಲದಳಗಳೆಂದೂ ಹೇಳಲ್ಪಡುತ್ತವೆ.

ಎಲ್ಲಾ ಚಕ್ರಗಳ ಒಟ್ಟು ದಳಗಳು, ಸಂಸ್ಕೃತ ಅಕ್ಷರ ಮಾಲಿಕೆಯ 50 ಅಕ್ಷರಗಳಿಗೆ ಸರಿಯಾಗಿ 50 ಇರುವುವು. ಕಮಲವಳಗಳು ಎಲ್ಲಾ ನಾಡಿಗಳೂ, ಎಲ್ಲಾ ಚಕ್ರಗಳೂ, ಎಲ್ಲಾ ಕಮಲದಳಗಳೂ ಸೂಕ್ಷ್ಮ ಶಬ್ದ ಶಕ್ತಿಯನ್ನು ಪಡೆದಿರುತ್ತವೆ. ಅವು ದೃಷ್ಟಿಗೆ ಕಾಣುವವಲ್ಲ. ಕೇವಲ ಮನೋಮಯ ವಾದವುಗಳು.

ಉಪನಿಷತ್ತಿನಲ್ಲಿ ಇವುಗಳನ್ನು 'ಸ್ಥಾನಾನೇತಾನೀದೇಹೇಸ್ಮಿನ್ ಶಕ್ತಿರೂಪಂ ಪ್ರಕಾಶತೇ' ಅಂದರೆ ಇವುಗಳು ಕೇವಲ ಧ್ಯಾನಯೋಗಿಗಳಿಗೆ ವೇದ್ಯವಾದವುಗಳು ಎಂದಿದ್ದಾರೆ.

ಶಿರಸ್ಸಿನ ಏಳನೆಯ ಚಕ್ರವಾದ 'ಸಹಸ್ರಾರ' ವು ಬ್ರಹ್ಮನ ಚಿಚ್ಛಕ್ತಿಯಾಗಿ 'ಓಂ' ಕಾರ ಸ್ವರೂಪವಾಗಿದೆ. ಈ ಜ್ಯೋತಿಯೇ ಮೂಲಾಧಾರ ಚಕ್ರದಲ್ಲಿ 'ಕುಂಡಲಿನೀ' ಶಕ್ತಿಯಾಗಿ ಓಂಕಾರದ 'ಅ' ಕಾರ ರೂಪದಲ್ಲಿದೆ. 'ಅ' ಕಾರ 'ಉ' ಕಾರ 'ಮ' ಕಾರಗಳು ಸೇರಿ 'ಓಂ' ಕಾರವಾಗಿದೆ. ಅನಾಹುತ ಚಕ್ರವಲ್ಲಿ 'ಉ' ಕಾರವೂ ಆಜ್ಞಾ ಚಕ್ರದಲ್ಲಿ 'ಮ' ಕಾರವೂ ಇದೆ. ಮೂಲಾಧಾರ ಚಕ್ರವೇ ಆದಿಯಾಗಿ ಷಟ್‌ಚಕ್ರಗಳಲ್ಲಿಯೂ, ಕೊನೆಯದಾದ ಸಹಸ್ರಾರ ಚಕ್ರವಲ್ಲಿಯೂ ಈ ಜ್ಯೋತಿಯು ನೆಲೆಸಿದೆ.

ಇಡಾ ಪಿಂಗಳಾನಾಡಿಗಳು

ಪ್ರತಿ ಪ್ರಾಣಿಯ ಬೆನ್ನು ಹುರಿಯೊಳಗಿರುವ ' ಜ್ಞಾನವಾಹೀ ' ಕ್ರಿಯಾ ವಾಹೀ ' ನಾಡಿಗಳೇ ಯೋಗದಲ್ಲಿ ಹೇಳಿರುವ ಇಡಾ (ಜ್ಞಾನವಾಹೀ) ಪಿಂಗಳಾ (ಕ್ರಿಯಾವಾಹೀ)ನಾಡಿಗಳು.

ಹೊರಗಿನಿಂದ ಬರುವ ಶಬ್ದಾದಿ ವಿಷಯುಗಳ ಇಂದ್ರಿಯ ಸಂವೇದನೆಯು ' ಇಡಾ ' ನಾಡಿಯ ಮೂಲಕ ಮೆದುಳಿನಲ್ಲಿ ಪ್ರಕಟವಾಗುವ ಬುದ್ಧಿಯ ಪ್ರತಿ ಕ್ರಿಯಾಶಕ್ತಿ ಪ್ರವಾಹವು ಪಿಂಗಳಾನಾಡಿಯ ಮೂಲಕ ಹೊರಗೂ ಹರಿಯುತ್ತವೆ.

ಒಳ ಹೊರಗಿನ ಶಕ್ತಿವಾಹಿನಿಗಳಿಗೆ ಇವುಗಳೇ ಮುಖ್ಯ ನಾಳಗಳು. ನಮ್ಮ ಶರೀರದಲ್ಲಿ ಸ್ಪಂದನ ಶಕ್ತಿಯು ಇವುಗಳನ್ನೇ ಅವಲಂಬಿಸಿದೆ. ಪಿಂಗಳಾನಾಡಿಯಲ್ಲಿ (ಸೂರ್ಯನಾಡಿಯೆಂದೂ ಕರೆಯುವರು.) ಪ್ರಾಣವಾಯುವನ್ನು ಮೇಲಕ್ಕೆ ಎಳೆ ಯುವ ಸೂರ್ಯ ಶಕ್ತಿಯಿದೆ. ಇಡಾನಾಡಿಯಲ್ಲಿ (ಂದ್ರನಾಡಿಯೆಂದೂ ಕರೆ ಯುವರು) ಅಪಾನ ವಾಯುವನ್ನು ಕೆಳಕ್ಕೆ ಎಳೆಯುವ ಚಂದ್ರ ಶಕ್ತಿಯಿದೆ.

ಈ ಎರಡು ಶಕ್ತಿಗಳಿಂದ (ಸೂರ್ಯ ಚಂದ್ರ ಶಕ್ತಿಗಳಿಂದ) ಶ್ವಾಸೋ ಚ್ಛ್ವಾಸ ಕಾರ್ಯಗಳಾಗುವುವು.

ಈ ಕಾರ್ಯಗಳನ್ನು ನಿರೋಧ ಮಾಡುವವರೆಗೂ ಮನಸ್ಸಿಗೆ ಏಕಾಗ್ರತೆ ಉಂಟಾಗುವುದಿಲ್ಲ. ನಮಗೆ ಗಾಢನಿದ್ರೆ ಬಂದಿದ್ದರೂ, ಪಂಚ ಪ್ರಾಣಗಳು ಮತ್ತು ಶ್ವಾಸೋಚ್ಛ್ವಾಸಗಳು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತವಾಗಿರುವುವು.

ಮೂಲಾಧಾರ ಚಕ್ರದಲ್ಲಿ ಸುಷುಮ್ನಾ ನಾಡಿಯ ಕವಾಟವು ಮುಚ್ಚಿ ಕೊಂಡಿದೆ. ಇವರ ಕ್ರಿಯೆ ಅಭಿವ್ಯಕ್ತವಾಗಿರುವುದಿಲ್ಲ. ಆದರೆ ಶರೀರದ ಬೇರೆ ಬೇರೆ ಕಡೆಗಳಿಗೆ ಶಕ್ತಿಯನ್ನು ಪ್ರಸರಿಸುವ ಇಡಾ ಪಿಂಳಾಗನಾಡಿಗಳ ಕ್ರಿಯೆಯು ಮಾತ್ರ ಅಭಿವ್ಯಕ್ತವಾಗಿರುತ್ತದೆ.

ಮೂಲಾಧಾರ ಚಕ್ರದಿಂದ ಸುಷುಮ್ನಾನಾಡಿಯ ಹೊರಗಡೆ ಎಡಕ್ಕೂ ಬಲಕ್ಕೂ ಇಡಾ ಪಿಂಗಳಾ ನಾಡಿಗಳು ಹೊರಟು ನಾಸಿಕ ರಂಧ್ರಗಳವರೆಗೂ ಹರಿಯುತ್ತವೆ.

ಸುಷುಮ್ನಾ ಎಂಬ ಸೂಕ್ಷ್ಮ ನಾಡಿಯು ಬೆನ್ನು ಹುರಿ (ಮೇರುದಂಡ)ಯ ಒಳಗೆ ಇದೆ. ಇದು ಅಗ್ನಿ ಸ್ವರೂಪವಾದುದು. ಈ ನಾಡಿಯು ಬ್ರಹ್ಮಶಕ್ತಿ ಯುತವಾದುದು. ಇದು ಮೂಲದ್ವಾರದ ಸಮೀಪದಿಂದ ಆರಂಭಿಸಿ ಬೆನ್ನುಹುರಿ ಮೂಲಕ ಹಾದು ಸಹಸ್ರಾರಕ್ಕೆ (ಬ್ರಹ್ಮರಂಧ್ರಕ್ಕೆ) ಸೇರುತ್ತದೆ.

ಎಡಗಡೆಯ ಮೂಗಿನ ರಂಧ್ರದಿಂದ ಬಿಳಿಯ ಬಣ್ಣದ, ಚಂದ್ರನಾಡಿಯಾದ ಇಡಾ ನಾಡಿಯೂ ಬಲಗಡೆಯ ಮೂಗಿನ ರಂಧ್ರದಿಂದ, ಕೆಂಪುಬಣ್ಣದ ಸೂರ್ಯನಾಡಿಯಾದ ಪಿಂಗಳಾ ನಾಡಿಯೂ ಹರಿದಿದೆ. ಇಡಾ ನಾಡಿಯನ್ನು ಪ್ರಕೃತಿ ನಾಡಿಯೆಂದೂ ಪಿಂಗಳಾ ನಾಡಿಯನ್ನು ಪುರುಷ ನಾಡಿಯೆಂದೂ ಹೇಳುವರು.

ಶರೀರದಲ್ಲಿ ಎರಡು ವಿಧವಾದ ಜ್ಞಾನತಂತುಸಮೂಹಗಳಿವೆ. ಅವುಗಳಲ್ಲಿ ಒಂದು '.ಮೇರುದಂಡ ವಿಭಾಗದ ನರಗಳು.' ಇನ್ನೊಂದು 'ಸಹಾನುಭೂತಿಪರವಿಭಾಗದ ನರಗಳು.'

ಮೊದಲನೆಯದಾದ 'ಮೇರು'ದಂಡ ವಿಭಾಗದ ನರಗಳು ಮೆದುಳಿನಿಂದ ಬೆನ್ನುಮೂಳೆಯಲ್ಲಿ ಹೊರಟಿರುವ ಮುಖ್ಯ ಜ್ಞಾನತಂತುವಿನಿಂದ ಕವಲೊಡೆದು, ಶರೀರದಲ್ಲೆಲ್ಲಾ ವ್ಯಾಪಿಸಿ, ಜ್ಞಾನಸಂಬಂಧವಾದ ವ್ಯವಹಾರಗಳಿಗೆ ಕಾರಣವಾಗಿರುವುದು.

ಎರಡನೆಯದಾದ 'ಸಹಾನುಭೂತಿಪರ ವಿಭಾಗದ ನರಗಳು' ಮೇರುದಂಡದ ಬಲಕ್ಕೆ ಹೆಣೆದಿರುವ 'ಇಡಾ' ನಾಡಿಯಿಂದಲೂ ಎಡಕ್ಕೆ ಹೆಣೆದಿರುವ 'ಪಿಂಗಳಾ' ನಾಡಿಯಿಂದಲೂ ಹೊರಟು, ಅಲ್ಲಲ್ಲಿ ಕೇಂದ್ರೀಭೂತವಾಗಿ, ಶರೀರದಲ್ಲೆಲ್ಲಾ ಹರಡಿರುತ್ತವೆ. ಈ ವಿಭಾಗದ ನರಗಳಿಂದ ದೇಹದ ಒಳಗಿನ ಕ್ರಿಯೆಗಳು ನಡೆಯುತ್ತವೆ. ಈ ನಾಡಿಗಳು ಮೂಲಾಧಾರಚಕ್ರದಿಂದ ಮೇಲ್ಗಡೆ ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದವರೆಗೂ ಹೋಗಿ ನಾಸಿಕರಂಧ್ರಗಳನ್ನು ಸೇರುವುವು. ಪ್ರಾಣಿಗಳ ಪ್ರಾರಬ್ಧಾನುಸಾರವಾಗಿ, ದೇಹಸೃಷ್ಟಿಯಾಗಿ, ದೇಹದ ಬಹಿರ್ವ್ಯಾಪಾರಗಳು ನಡೆಯಲು ಈ ಇಡಾ ಪಿಂಗಳಾ ನಾಡಿಗಳು ಸಹಾಯಕಗಳಾಗಿವೆ.

ಮೂಲಾಧಾರಚಕ್ರಾದಿಗಳು—ಕುಂಡಲಿನೀಶಕ್ತಿ

ಮೂಲಾಧಾರಚಕ್ರವು ಸೊಂಟದ ಕೆಳಗಡೆ, 'ಗಾರ್ಹಪತ್ಯಾಗ್ನಿ'ಯಿಂದ ಕೂಡಿದ ತ್ರಿಕೋಣದ, ಅಗ್ರಭಾಗದಲ್ಲಿದೆ. ಯೋಗಿಗಳ ಧ್ಯಾನಕ್ಕೆ ಮಾತ್ರ ಸಾಧ್ಯವಾದ ಮಾರ್ಗವನ್ನು ಹೊಂದಿರುವ, ಬೆನ್ನುಹುರಿಯೊಳಗಿರುವ ಸುಷುಮ್ನಾನಾಡಿಯು, ಈ ಮೂಲಾಧಾರಚಕ್ರದ ಪದರಗಳಲ್ಲಿ, ಜೀವನಿಗೆ ಆವಾರಕವಾಗಿ, ಜೀವಾತ್ಮನು ತನ್ನ ಸ್ವಸ್ವರೂಪ ಕೂಟಸ್ಥನನ್ನು ಮರೆಯುವಂತೆ ಮಾಡಿ, ಸತ್ವರಜಸ್ತಮೋಗುಣಾತ್ಮಕವಾದ ಅವ್ಯಕ್ತಶಕ್ತಿಯು (ಆವಾರಕಶಕ್ತಿಯು) "ಕುಂಡಲಿನೀ" ರೂಪದಿಂದ (ಕಾರಣಾವಿದ್ಯೆಯು) ಇರುತ್ತದೆ.

ಜೀವನನ್ನು ನಿದ್ರಾವಸ್ಥೆಯಲ್ಲಿರುವಂತೆ, ಅಂದರೆ, ಬ್ರಹ್ಮವಿಷಯದಲ್ಲಿ ಅಜ್ಞಾನಿಯಾಗಿರುವಂತೆ ಮಾಡಿ, ಬಹಿರ್ವ್ಯಾಪಾರಗಳ ಕಡೆಗೇ ಅವನನ್ನು ತಿರುಗಿಸಿಬಿಟ್ಟಿದೆ.

ಮೂಲಾಧಾರಚಕ್ರದಲ್ಲಿ ಕುಂಡಲಿನೀಶಕ್ತಿಯು, ಸುಷುಪ್ತಿಯಲ್ಲೂ ಪ್ರಳಯದಲ್ಲೂ ಮುದುರಿಕೊಂಡಿದ್ದು, ಸೃಷ್ಟಿ ಮತ್ತು ಎಚ್ಚರ ಕಾಲಗಳಲ್ಲಿ ಪ್ರಾಣಿಗಳ ಕರ್ಮಾನುಸಾರವಾಗಿ ಜಾತ್ಯಾಯುರ್ಭೋಗಾದಿ ರೂಪದಿಂದ ಅನುಭವ ಕೊಡುತ್ತ, ಪ್ರಪಂಚದ ವ್ಯಾಪಾರವನ್ನೆಲ್ಲಾ ನಡೆಸುವುದು. ಅಲ್ಲದೆ, ಸೃಷ್ಟಿಯನ್ನೆಲ್ಲಾ ಜೀವನದಲ್ಲಿ ಕೂಡಿಟ್ಟು ಮೂಲಾಧಾರದಲ್ಲಿ ಮುಚ್ಚಿಡುವುದು. ಪ್ರಾಣ ಶಕ್ತಿ ಸಹಿತ ಎಲ್ಲಾ ಶಕ್ತಿಗಳಿಗೂ ಮೂಲವಾದ ಅಕಾರರೂಪ ಸೃಷ್ಟಿಶಕ್ತಿಯ ಸುಪ್ತ ವಿಶ್ರಾಂತ ರೂಪವೇ ಕುಂಡಲಿನೀ. ಈ ಅಕಾರರೂಪ ಕುಂಡಲಿನಿಯು ಬ್ರಹ್ಮಾಂಡದಲ್ಲಿರುವ ಸಕಲತತ್ವಗಳಿಗೂ ಸಪ್ತಲೋಕಗಳಿಗೂ ಕೇಂದ್ರವಾಗಿರುವುದು. ಇಂದ್ರಿಯಗಳಿಂದಲೂ ಅಂತಃಕರಣದಿಂದಲೂ ಅನುಭವವಾದ ಸಕಲ ವಿಷಯಗಳೂ, ಸಂಸಾರ ರೂಪದಲ್ಲಿ ಇಲ್ಲಿ ಕಾಣುತ್ತವೆ. ಈ ಕುಂಡಲಿನಿಗೆ ವಿಶ್ವವ್ಯಾಪಿ ವಿದ್ಯುಚ್ಛಕ್ತಿ ಎನ್ನಬಹುದು. ಇಲ್ಲಿ ಸೃಷ್ಟಿಶಕ್ತಿ ಸಹಿತನಾದ ಬಾಲಾರ್ಕನಂತೆ ಕೆಂಪು ಬಣ್ಣವುಳ್ಳ ವರದ ಅಭಯ ಹಸ್ತಗಳಿಂದ ಕೂಡಿದ ಪಾಶಾಂಕುಶಗನನ್ನು ಹಸ್ತದಲ್ಲಿ ಧರಿಸಿರುವ ಸಮಸ್ತ ಭೂತಗಳಿಗೂ ಆಶ್ರಯನಾಗಿರುವ ಆದಿಪೂಜ್ಯನಾದ ಪ್ರಾಣಿಗಳ ಕರ್ಮಗಳಿಗೆ ಫಲದಾತೃವಾದ ಗಣಪತಿಯು ಅಧಿಷ್ಠಾತೃವಾಗಿರುವನು. ಸೃಷ್ಟಿ ಪುಷ್ಟಿ ಸಹಿತ ಗಣಪತಿಯೇ ಸೃಷ್ಟಿ ತತ್ವ ಪ್ರತಿಪಾದಕವಾದ 'ಅ' ಕಾರವೆಂಬ ಬೀಜಾಕ್ಷರವು. ಇವನೇ ಪರಬ್ರಹ್ಮವು. ಗಣೇಶಾಥರ್ವಶೀರ್ಷವಲ್ಲಿ ಗಣಪತಿಯನ್ನು 'ತ್ವಂ ಮೂಲಾಧಾರಸ್ಥಿತೋಸಿ ನಿತ್ಯಂ, ಎಂದಿದೆ.

ಕುಂಡಲ್ಯುಪನಿಷತ್ತಿನಲ್ಲಿ ಕುಂಡಲಿನಿಯ ವರ್ಣನೆ ಹೀಗೆ ಇದೆ.

ಅಷ್ಟ ಪ್ರಕೃತಿರೂಪಾ ಸಾ ಸಾಷ್ಟಧಾ ಕುಂಡಲೀಕೃತಾ ।
ಯಥಾವದ್ವಾಯುಸಾರಂ ಚ ಜ್ವಲನಾದಿ ಚ ನಿತ್ಯಶಃ ।
ಪರಿತಃ ಕಂದಪಾರ್ಶ್ವೇಷು ನಿರುಧ್ಯೈವ ಸದಾ ಸ್ಥಿತಾ ।
ಸ್ವ ಮುಖೇನ ಸಮಾವೇಷ್ಟ್ಯ ಬ್ರಹ್ಮರಂಧ್ರಮುಖಂ ತಥಾ ।
ಯೋಗಕಾಲೇನ ಮರುತಾ ಸಾಗ್ನಿನಾ ಬೋಧಿತಾ ಸತಿ ।
ಸ್ಫುರಿತಾ ಹೃದಯಾಕಾಶೇ ನಾಗರೂಪಾ ಮಹೋಜ್ಜ್ವಲಾ ॥

ಅಂದರೆ ಅಷ್ಟ ಪ್ರಕೃತಿಗಳ ಅಷ್ಟ ರೂಪವಾಗಿಯೂ ಕುಂಡಲಿನಿಯ ಆಕಾರವಾಗಿಯೂ, ಕಂದ ಪ್ರದೇಶದಲ್ಲಿ ಸುತ್ತಲೂ ವಾಯುವಿನ ಸಾರವನ್ನೂ, ಜಠರ ಪತ್ಯಾಗ್ನಿಯ ಜ್ವಾಲೆಯನ್ನೂ ತಡೆನುಕೊಂಡು ಬ್ರಹ್ಮರಂಧ್ರ ದ್ವಾರವಾದ ಮೂಲಾ

ಧಾರದಲ್ಲಿರುವ ಸುಷುಮ್ನಾ ನಾಡಿಯ ಬಾಗಿಲನ್ನು ಮುಚ್ಚಿಕೊಂಡು ಇರುವುದು. ಓಂಕಾರ ಧ್ಯಾನ ಕಾಲದಲ್ಲಿ ಈ ಕುಂಡಲಿನೀ ಶಕ್ತಿಯು ಗಾರ್ಹಪತ್ಯಾಗ್ನಿಯಿಂದಲೂ ವಾಯುವಿನಿಂದಲೂ ಎಬ್ಬಿಸಲ್ಪಟ್ಟು ಹೃದಯಾಕಾಶದಲ್ಲಿ ಸ್ಫುರಣೆಗೊಂಡು ನಾಗ ರೂಪವಾಗಿರುತ್ತದೆ. ಹಾವಿನಂತೆ ಇದು ಸುರುಳಿ ಸುತ್ತಿಕೊಂಡು ಇರುವುದರಿಂದ ಇದಕ್ಕೆ ಕುಂಡಲಿನಿ ಎಂದು ಹೆಸರಾಯಿತು.

ಈ ಕುಂಡಲಿನಿಯನ್ನೇ ಯೋಗಶಿಖೋಪನಿಷತ್ತಿನಲ್ಲಿ ಮಹಾಮಾಯಾ, ಮಹಾಲಕ್ಷ್ಮೀ ಮಹಾ ಸರಸ್ವತೀ ಎಂದು ಹೇಳಿದ್ದಾರೆ.

ಶಿವಶಕ್ತಿಮಯಂ ಮಂತ್ರಂ ಮೂಲಾಧಾರಾತ್ಸಮುತ್ಥಿತಂ ।
ಮಹಾಮಾಯಾ ಮಹಾಲಕ್ಷ್ಮೀ ಮಹಾದೇವೀ ಸರಸ್ವತೀ ॥
ಆಧಾರಶಕ್ತಿರವ್ಯಕ್ತಾ ಯಯಾ ವಿಶ್ವಂ ಪ್ರವರ್ತತೇ ।
ಸೂಕ್ಷ್ಮಾಭಾ ಬಿಂದುರೂಪೇಣ ಪೀಠರೂಪೇಣ ವರ್ತತೇ ॥

ಅಂದರೆ ಶಿವಶಕ್ತಿಮಯವಾದ ಓಂಕಾರ ಮಂತ್ರವು (ಕುಂಡಲಿನಿಯು) ಮೂಲಾಧಾರಚಕ್ರದಿಂದ ಎಬ್ಬಿಸಲ್ಪಡುವುದು. ಈ ಶಕ್ತಿಯಿಂದ ಜಗತ್ತಿಗೆ ಪ್ರವೃತ್ತಿ. ಇದೇ ಮಹಾಲಕ್ಷ್ಮಿ, ಮಹಾಮಾಯೆ, ಮಹಾ ಸರಸ್ವತಿ. ಇದೇ ಶರೀರಗಳನ್ನು ಸೃಷ್ಟಿಸಿ ಅದನ್ನು ಧರಿಸುವುದು. ಇದು ಮೂಲಾಧಾರದಲ್ಲಿ ಪೀಠರೂಪವಾಗಿಯೂ ಆಜ್ಞಾಚಕ್ರದಲ್ಲಿ ಬಿಂದು ರೂಪವಾಗಿಯೂ ಇರುವುದು, ಎಂದು ಹೇಳಿದೆ.

ಪ್ರಪಂಚದಲ್ಲಾಗುವ ಎಲ್ಲಾ ಶಬ್ದವೂ ಎಲ್ಲಾ ಅಕ್ಷರ ಶಕ್ತಿಗಳೂ ಸುಷುಮ್ನಾನಾಡಿಯ ಒಳಗಿನ ಓಂಕಾರದ ಪ್ರತಿಧ್ವನಿಗಳಾಗಿವೆ.

ನಾವು ಮಾತನಾಡುವ ಮತ್ತು ಗಾನ ಮಾಡುವ ಪ್ರತಿಯೊಂದು ಅಕ್ಷರ ಮತ್ತು ಗಾನ ರೂಪ ಶಕ್ತಿಗಳು 'ಆಹತ' ನಾದಕ್ಕೆ ಸಂಬಂಧಿಸುತ್ತವೆ. ಇವುಗಳೆಲ್ಲಾ ಸುಷುಮ್ನಾನಾಡಿಯ ಒಳಗಿರುವ ' ಓಂ 'ಕಾರದ ಅನಾಹತ ನಾದದ ಪ್ರತಿಧ್ವನಿಗಳು. ಕುಂಡಲಿನಿಯಲ್ಲಿ ಅದ್ಭುತ ಶಕ್ತಿ ನೆಲೆಸಿರುತ್ತದೆ.

ಸುರುಳಿಸುತ್ತಿಕೊಂಡಿರುವ ಈ ಕುಂಡಲಿನೀನಾಡಿಯು ನೇರವಾಗಿ ಅದರ ಮುಖವು ಸುಷುಮ್ನಾನಾಡಿಯೊಳಗೆ ಕೂಡಿಕೊಂಡರೆ ಅದನ್ನೇ ಕುಂಡಲಿನೀ ಶಕ್ತಿಯ ಜಾಗೃತಿ ಎನ್ನುವರು. ಆ ಸ್ಥಿತಿಯಲ್ಲಿ ಇದರಲ್ಲಿನ ಶಕ್ತಿಯು ಸುಷುಮ್ನಾ ನಾಡಿಯ ಮೂಲಕ ಹರಿದು ಇಡಾ ಪಿಂಗಳಾ ಮತ್ತು ಚಕ್ರಗಳನ್ನೆಲ್ಲಾ ಪ್ರಕಾಶ ಪಡಿಸುತ್ತದೆ. ಅದರ ಪ್ರವಾಹವು ಯಾವ ಯಾವ ಚಕ್ರವನ್ನು ಸೋಂಕುವುದೋ ಆಯಾ ಚಕ್ರವು ಊರ್ಧ್ವಮುಖವಾಗಿ ಅರಳುತ್ತದೆ. ಅದು ಆಜ್ಞಾ ಚಕ್ರವನ್ನು ಮುಟ್ಟಿದಾಗ ಸಂಪ್ರಜ್ಞಾತ ಸಮಾಧಿಯ ಯೋಗ್ಯತೆಯೂ ಸಹಸ್ರಾರ ಚಕ್ರವನ್ನು ಮುಟ್ಟಿದಾಗ ಅಸಂಪ್ರಜ್ಞಾತ ಸಮಾಧಿಯ ಯೋಗ್ಯತೆಯೂ ಉಂಟಾಗುತ್ತದೆ.

ಪ್ರಾಣಾಯಾಮಪೂರ್ವಕವಾಗಿ ಕುಂಡಲಿನಿಯನ್ನು ಜಾಗ್ರತಗೊಳಿಸಿದರೆ ಅದರಿಂದ ಚಕ್ರಗಳು ಅರಳುತ್ತವೆ. ಚಕ್ರಗಳನ್ನು ಧ್ಯಾನಮಾಡುತ್ತಾ ಸೂಕ್ಷ್ಮ ವಾಯುವನ್ನು ಅವುಗಳಲ್ಲಿ ತುಂಬಿದರೆ ನರಗಳ ಮತ್ತು ನಾಡಿಗಳ ಶೋಧನವಾಗಿ ಚಿತ್ತಸ್ಥೈರ್ಯವುಂಟಾಗಿ ವಿಷಯಗಳ ಕಡೆ ವೈರಾಗ್ಯವುಂಟಾಗುವುದು.

ಹೀಗೆ ಚಕ್ರಗಳಲ್ಲಿ ಕ್ರಮವಾಗಿ ಚೈತನ್ಯವನ್ನುಂಟು ಮಾಡಿದರೆ ಮನಸ್ಸಿನ ಶಕ್ತಿಯು ವೃದ್ಧಿಯಾಗಿ ಆತ್ಮ ವಿಚಾರ ಸಾಧಿಸಲು ಅನುಕೂಲವಾಗುತ್ತದೆ. ಪ್ರಾಣಾಯಾಮದಿಂದ ಮನಸ್ಸಿನ ಶಕ್ತಿಗಳು ವಿಕಾಸಗೊಳ್ಳುತ್ತವೆ. ರಜಸ್ತಮೋಗುಣಗಳು ಕ್ಷೀಣವಾಗಿ ಸತ್ವಗುಣವು ವೃದ್ಧಿ ಹೊಂದುತ್ತದೆ. ಯೋಗದ ಧಾರಣ, ಧ್ಯಾನ, ಸಮಾಧಿಗಳಿಗೆ ಮನಸ್ಸು ಯೋಗ್ಯವಾದುದಾಗುತ್ತದೆ.

ಸಾಧಕನು ಪ್ರಾಣಾಯಾಮಪೂರ್ವಕವಾಗಿ ಶ್ವಾಸೋಚ್ಛ್ವಾಸಗಳನ್ನು ಬಂಧಿಸಿ, ಪ್ರತ್ಯಾಹಾರಪೂರ್ವಕವಾಗಿ, ಶಬ್ದಾದಿ ವಿಷಯಗಳಲ್ಲಿ ಸ್ವೇಚ್ಛೆಯಾಗಿ ಸಂಚರಿಸುವ ಇಂದ್ರಿಯಗಳನ್ನು ಬಲಾತ್ಕಾರವಾಗಿ ಹಿಂತಿರುಗಿಸಿ, 'ಧಾರಣಾ' ಪೂರ್ವಕವಾಗಿ ಸಮಾಹಿತವಾದ ಮನಸ್ಸನ್ನು ಪರಬ್ರಹ್ಮನಲ್ಲಿ ನೆಲೆಗೊಳಿಸಿ ಕುಂಡಲಿನಿಯನ್ನು ಪ್ರಾರ್ಥಿಸಬೇಕು. ಇದರ ಪರಿಣಾಮವಾಗಿ ಮೂಲಾಧಾರ ಚಕ್ರದ ಮೇಲ್ಗಡೆ ಇರುವ ಸುಷುಮ್ನಾನಾಡಿಯ ಬಾಗಿಲು ತೆರೆಯುತ್ತದೆ. ನಂತರ ಮೂಲಾಧಾರ ಚಕ್ರದಲ್ಲಿ ಅಪಾನ ವಾಯುವನ್ನು ನಿಗ್ರಹಿಸಿ ಅದು ಸುಷುಮ್ನಾನಾಡಿಯ ಒಳಗೆ ಊರ್ಧ್ವಕ್ಕೆ ಹೋಗುವಂತೆ ಮಾಡುತ್ತಾ ಅಲ್ಲಿರುವ (ಮೂಲಾಧಾರ ಚಕ್ರದಲ್ಲಿರುವ) ಪ್ರಣವದ 'ಅ' ಕಾರವನ್ನೂ 'ಅ' ಕಾರಾತ್ಮಕನಾದ ಕುಂಡಲಿನೀ ಶಕ್ತಿಯನ್ನೂ 'ವ ಶ ಷ ಸ' ಎಂಬ ಆ ಚಕ್ರದ ಬೀಜಾಕ್ಷರಗಳನ್ನೂ, ಆ ಚಕ್ರವನ್ನು ಪ್ರಜ್ವಲಿಸುವ ಗಾರ್ಹಪತ್ಯಾಗ್ನಿಯನ್ನೂ ಅಲ್ಲಿಗೆ ಅಧಿಪತಿಯಾದ ಪುಷ್ಟಿಶಕ್ತಿಸಹಿತ ಗಣಪತಿಯನ್ನೂ ಏಕವಾಗಿ ಓಂಕಾರರೂಪಿ ಪರಬ್ರಹ್ಮವೆಂದು ಪ್ರಣಿಧಾನ ಪೂರ್ವಕವಾಗಿ ಭಾವಿಸುತ್ತಾ—ತಾನೇ ಆ ಪರಬ್ರಹ್ಮವೆಂದು ಭಾವಿಸುತ್ತಾ ಸಾಧಕನು ಧ್ಯಾನಾಭ್ಯಾಸವನ್ನು ಮುಂದುವರಿಸುತ್ತಾ ಬರಬೇಕು. ಬುದ್ಧಿವೃತ್ತಿಗಳು ಧ್ಯಾನಾಭ್ಯಾಸಕಾಲದಲ್ಲಿ ಪ್ರಾಣಶಕ್ತಿಗಳೊಡನೆ ಮೂಲಾಧಾರ ಚಕ್ರದಿಂದ ಷುಮ್ನಾನಾಡಿಯ ದ್ವಾರದಿಂದ ಆ ದ್ವಾರದೊಳಗೆ ಪ್ರವೇಶಿಸುವಿಕೆಯನ್ನು ಅಂತರಿಕ್ಷ ತತ್ವ ವೆನ್ನುವರು.

ಈ ಮೂಲಾಧಾರ ಚಕ್ರಕ್ಕೆ 4 ಅಂಗುಲದ ಮೇಲೆ ಪಾಯುಸ್ಥಾನದಲ್ಲಿ "ಸ್ವಾಧಿಷ್ಠಾನ" ಚಕ್ರವಿದೆ. ಇದಕ್ಕೆ ಆರುದಳಗಳಿವೆ. ಇಲ್ಲಿಯ ದಳಗಳ ಬೀಜಾಕ್ಷರಗಳು "ಬಭಮಯರಲ" ಇಲ್ಲಿ ಸರಸ್ವತಿ ಸಹಿತ ಚತುರ್ಮುಖ ಬ್ರಹ್ಮನು ಸೃಷ್ಟಿತತ್ವ ಪ್ರತಿಪಾದಕನಾಗಿ, ಸೃಷ್ಟಿಯನ್ನು ಅಲ್ಲಿರುವ ತನ್ನ ಶಕ್ತಿಯಾದ 'ಬ್ರಹ್ಮಗ್ರಂಥಿ' ಯಿಂದ ಮುದುವರಿಸುತ್ತಾ. ಆ ಚಕ್ರದ ಅಧಿಷ್ಠಾತೃವಾಗಿರುವನು.

ಕುಂಡಲಿನೀ ಶಕ್ತಿಯು ಮೂಲಾಧಾರ, ಸ್ವಾಧಿಸ್ಠಾನ ಇವೆರಡು ಚಕ್ರಗಳಲ್ಲಿ ಸಂಬಂಧ ವುಳ್ಳದ್ದಾಗಿರುವುದು. ಅಧಿಷ್ಠಾತೃ ದೇವತೆಯಾದ ಚತುರ್ಮುಖ ಬ್ರಹ್ಮನು ತನ್ನ ಉಪಾಸಕನ ಮನಸ್ಸು ಶ್ರೇಯಸ್ಕರವಾದ ದಾರಿಯಲ್ಲಿ ಮುಂದುವರಿಯಲು, ತನಗೆ ತಾನೇ ಸಾಧಕನಿಗೆ ಬೋಧವಾಗುವಂತೆ ಮಾಡುವನು. ಈ ಚಕ್ರ ಉತ್ತೇಜಿತ ವಾದರೆ ಪ್ರೇಮ ಮತ್ತು ಅಹಿಂಸಾ ಭಾವನೆಗಳು ಜಾಗೃತವಾಗುತ್ತವೆ.

ಶರೀರದಲ್ಲಿ ನಾಭಿ ಪ್ರದೇಶದಲ್ಲಿ " ಮಣಿಪೂರ " ಚಕ್ರವಿದೆ. ಇದಕ್ಕೆ 10 ದಳಗಳು. ದಳಗಳಲ್ಲಿ ಬೀಜಾಕ್ಷರಗಳು " ಡ ಢ ಣ ತ ಥ ದ ಧ ನ ಪ ಫ ". ಇದಕ್ಕೆ ಅಧಿದೇವತೆ ಲಕ್ಷ್ಮೀಶಕ್ತಿ ಸಹಿತನಾದ ವಿಷ್ಣು. ಇಲ್ಲಿ ಸ್ಥಿತಿ ತತ್ವ ಪ್ರತಿ ಪಾದಕವಾದ " ವಿಷ್ಣುಗ್ರಂಥಿ " ಇದೆ. ಈ ಚಕ್ರವು ಉತ್ತೇಜಿತವಾದರೆ ಸಾಧಕನಿಗೆ ತಾನು ದೇಹದಿಂದ ಬೇರೆ ಎಂಬ ಅರಿವಾಗುತ್ತದೆ.

ಸಾಧಕನು ಮೂಲಾಧಾರದಿಂದ ಅಪಾನವಾಯುವನ್ನು ಸ್ವಾಧಿಷ್ಠಾನ ಚಕ್ರದ ಮೂಲಕ ಮಣಿಪೂರಕ್ಕೆ ಎಳೆದುಕೊಂಡು ಅಲ್ಲಿ ವಿಷ್ಣುವನ್ನು ಧ್ಯಾನಿಸುತ್ತಾ, ಓಂಕಾರ ಧ್ಯಾನಪರನಾಗಿ ಸವಿಕಲ್ಪ ಸಮಾಧಿಯಲ್ಲಿ ಆರೂಢನಾದರೆ, ಅಲ್ಲಿನ ವಿಷ್ಣು ಗ್ರಂಥಿಯು ಭೇದಿಸಲ್ಪಡುವುದು. ಹೀಗೆ ಸಾಧಕನು, ದೇಹದಲ್ಲೆಲ್ಲಾ ತುಂಬಿರುವ ಪ್ರಾಣವಾಯುವನ್ನು ಕ್ರಮ ಕ್ರಮವಾಗಿ ನಿಗ್ರಹಿಸುತ್ತಾ ಮನಸ್ಸನ್ನು ಆಕರ್ಷಣೆ ಮಾಡಿ ಮುಂದಕ್ಕೆ " ಅನಾಹತ " ಚಕ್ರವನ್ನು ತಲಪಬೇಕು.

" ಅನಾಹತ " ಚಕ್ರವು ಹೃದಯಸ್ಥಾನದಲ್ಲಿದೆ. ಇಲ್ಲಿಗೆ ಬಂದ ಉಪಾಸ ಕನು ಓಂಕಾರ ಧ್ಯಾನಪರನಾಗಿ ತನ್ನ ಸವಿಕಲ್ಪಸಮಾಧಿಯ ಧ್ಯಾನಾಭ್ಯಾಸ ಬಲ ದಿಂದ ತನ್ನ ಅಂತರ್ಮುಖದಲ್ಲಿರುವ ಆದಿತ್ಯನ " ತೇಜಸ್ಸನ್ನು " ಕಾಣುವನು. ಅದು ಕೋಟಿಸೂರ್ಯಪ್ರಕಾಶವಾಗಿರುವುದು. ಈ ಚಕ್ರಕ್ಕೆ 12 ದಳಗಳು. ಇವು ಗಳ ಬೀಜಾಕ್ಷರಗಳು ' ಕ ' ಕಾರದಿಂದ ' ಠ ' ಕಾರದವರೆಗೆ. ಇಲ್ಲಿ ಸಾಧಕನು ಓಡ್ಯಾಣ ಮುದ್ರೆಯನ್ನು (ಅಂದರೆ ಹೊಟ್ಟೆಯನ್ನು ಆಕಳಿಸಿ, ಸೊಂಟದಿಂದ ಮೇಲಕ್ಕೆ ಎದೆಯ ಸಮೀಪದವರೆಗೆ ಹೊಟ್ಟೆಯನ್ನು ತರುವುದು) ಆಚರಿಸುವಲ್ಲಿ ಅಪಾನ ವಾಯುವು ಮೂಲಾಧಾರದಿಂದ ಸುಷುಮ್ನನಾಡಿಯ ಒಳಗಡೆಯೇ ಮೇಲ ಕ್ಕೇರಿ ಹೃದಯಸ್ಥಾನಕ್ಕೆ ಬಂದು ಅಲ್ಲಿ ಪ್ರಾಣವಾಯುವಿನೊಡನೆ ಐಕ್ಯಹೊಂದು ವುದು. ಈ ' ಅನಾಹತ ' ಚಕ್ರಸ್ಥಾನವು ಪ್ರಣವದ ಮಧ್ಯಾಕ್ಷರವಾದ ' ಉ. ' ಕಾರಸ್ಥಾನ.

' ಓಂ ' ಕಾರದಲ್ಲಿರುವ ' ಅ ' ಕಾರ ' ಉ ' ಕಾರ ಸೇರಿ ಆಗುವ ' ಓ ' ಕಾರ ಸ್ವರೂಪವಾದ ನಾದಬ್ರಹ್ಮವನ್ನು ಈ ಅನಾಹತವು ಸ್ತಂಭಿಸಿರು

ವುದರಿಂದ ಇದಕ್ಕೆ 'ಅನಾಹತ' ವೆಂದು ಹೆಸರಾಯಿತು. ಹೀಗೆ ಸ್ತಂಭಿಸಿರುವ 'ಓ' ಕಾರ ಶಕ್ತಿಯೇ ಪ್ರಾಣಶಕ್ತಿಯು. ಅನಾಹತ ಚಕ್ರವು ಪ್ರಾಣಮಯ ಕೋಶಕ್ಕೆ ಪ್ರಧಾನ ಸ್ಥಳ. ಮೂಲಾಧಾರದಿಂದ ಅನಾಹತಕ್ಕೆ ಬಂದ ಸಾಧಕನಿಗೆ 'ವಿಶತತ್ತ್ವ' ಉಪಾಧಿಯು ನಿವೃತ್ತವಾಗುವುದು.

[ಅನಾಹತ ಚಕ್ರದ ಬಳಿ ಹೃದಯದ ಹಿಂದೆ ಎರಡು ಪಾರ್ಶ್ವಗಳಲ್ಲಿಯೂ ವ್ಯಾಪಕವಾಗಿ "ಸೂರ್ಯಚಕ್ರ" ವಿದೆಯೆಂದು ಕೆಲವರು ಹೇಳುವರು. ಆದರೆ ಸಾಧಾರಣವಾಗಿ ಇದು ರೂಢಿಯಲ್ಲಿಲ್ಲ. ಈ ಚಕ್ರಕ್ಕೆ ಎಲ್ಲಾ ಆಂತರಿಕ ಅವಯವಗಳ ಮೇಲೂ ಅಧಿಕಾರವ್ಯಾಪ್ತಿ ಇದೆ. ಪ್ರಾಣತತ್ವದ ಕೋಶವು ಇದರಲ್ಲಿದೆ ಎನ್ನುತ್ತಾರೆ.

ಅನಾಹತ ಚಕ್ರವು ಹೃದಯ ಮತ್ತು ಹೃದಯ ಕ್ರಿಯೆಗಳಿಗೆ ಆಶ್ರಯ. ಇದು ಉತ್ತೇಜಿತವಾದರೆ ಹೃದಯದ ವ್ಯಾಪಾರವೆಲ್ಲಾ ವಶವರ್ತಿಯಾಗುವುದು.

ಪರಮಾತ್ಮನು ಪ್ರಾಣತತ್ವಕ್ಕೆ ಆಧಾರ ಭೂತನಾಗಿ, 'ಹಂಸ' ಎಂದರೆ ಜೀವರೂಪದಿಂದಿರುವನು. ಇದನ್ನೇ ಹಂಸಗಾಯತ್ರೀ ಧ್ಯಾನದಲ್ಲಿ 'ಪಶ್ಯಾಮಿ ತೇ ಸರ್ವಜನಾಂತರಸ್ಥಂ ನಮಾಮಿ ಹಂಸಂ ಪರಮಾತ್ಮರೂಪಂ' ಎಂದು ಸರ್ವಜನರ ಹೃದಯಲ್ಲಿರುವ ಜೀವಾತ್ಮನೆಂದು ತೋರುವ ಪರಬ್ರಹ್ಮನೆಂಬುದನ್ನು ತಿಳಿಸಿದೆ.

ಈ ಚಕ್ರಕ್ಕೆ ಅಧಿಷ್ಠಾತೃ ದೇವತೆ ಪಾರ್ವತೀ ಶಕ್ತಿಸಹಿತನಾದ ಸದಾಶಿವ. ಆಸನ ಪ್ರಾಣಾಯಾಮಗಳ ಬಲದಿಂದ ಈ ಚಕ್ರದಲ್ಲಿ ಪ್ರಾಣಾಪಾನಗಳು ಒಂದಾಗುವುವು.

ಮೂಲಾಧಾರದಿಂದ ಈ ಅನಾಹತ ಚಕ್ರದ ವರಗಿನ ಬೀಜಾಕ್ಷರರೂಪವಾದ ಶಕ್ತಿಗಳನ್ನೂ, ಆಯಾಯಾ ಅಧಿಷ್ಠಾತೃ ದೇವತೆಗಳನ್ನೂ, ಇಲ್ಲಿಂದ ಹೊರಡುವ ನಾಡೀಸಹಸ್ರದಲ್ಲಿ ಜೀವರೂಪವಾಗಿ ಸಂಚರಿಸುವ ಇತರ ಪ್ರಾಣವಾಯುಗಳನ್ನೂ. ಮೂಲಾಧಾರಚಕ್ರದ 'ಓಂ' ಕಾರದ 'ಅ' ಕಾರವನ್ನೂ ಕುಂಡಲಿನಿಯನ್ನೂ, ಈ ಅನಾಹತ ಚಕ್ರದಲ್ಲಿನ, ದೇಹಸ್ಥಿತಿಗೆ ಕಾರಣವಾದ. 'ಉ' ಕಾರರೂಪ ವಿಷ್ಣುಶಕ್ತಿಯಲ್ಲಿ ಲೀನಗೊಳಿಸಿ ಇವುಗಳೆಲ್ಲವನ್ನೂ ಈ ಅನಾಹತ ಚಕ್ರದಲ್ಲಿರುವ ದಾಕ್ಷಿಣಾಗ್ನಿಯನ್ನೂ, ಇಲ್ಲಿನ ಬೀಜಾಕ್ಷರಗಳನ್ನೂ ಒಟ್ಟಿನಲ್ಲಿ 'ಓಂ' ಕಾರರೂಪವಾಗಿ ಪರಬ್ರಹ್ಮವೆಂದು ಧ್ಯಾನಿಸಿ, ಆ ಪರಬ್ರಹ್ಮವೇ ತಾನೆಂದು ಭಾವಿಸಿ ಧ್ಯಾನನಿರತನಾಗಿ ಮುಂದುವರಿದರೆ ಅಂತಹ ಸಾಧಕನಿಗೆ 'ತೈಜಸತ್ವ' ವೆನಿಸುವ ಸ್ವಪ್ನ ಸದೃಶವಾದ ತನ್ನ ಸವಿಕಲ್ಪಸ್ಥಿತಿಯು ಉಪಸಂಹಾರವಾಗಲು ಪ್ರಾರಂಭವಾಗುವುದು. ಅಲ್ಲದೆ, ತನ್ನ ಸೂಕ್ಷ್ಮ ಶರೀರದ ಇಚ್ಛಾಶಕ್ತಿ ಲೀನವಾಗಲು ಉಪಕ್ರಮಿಸುವುದು. ಈ ಚಕ್ರದಲ್ಲಿ ಸಾಧಕನು ಶಾಂಭವೀ (ಷಣ್ಮುಖೀ)ಮುದ್ರೋಪಾಸನ ಮಾಡಿ, ಜ್ಞಾನೇಂದ್ರಿಯಗಳನ್ನು ಬಂಧಿಸಿ, ಅವಿದ್ಯಾ ಪ್ರವೃತ್ತಿಗಳಿಗೆ ಅವಕಾಶ

ಕೊಡದೇ ಹೋದರೆ ವಿರಾಮವಿಲ್ಲದೇ ಏಕವಾಗಿರುವ ಸ್ವತಃಸಿದ್ಧ ಶಬ್ದವೊಂದು ಶ್ರುತವಾಗುವುದು. ಇದೇ 'ಓಂ' ಕಾರನಾದ. ಈ ಓಂಕಾರ ನಾದವನ್ನೇ ಅನುಸಂಧಾನ ಮಾಡುತ್ತ ಬಂದರೆ ಒಂದು ತೇಜಸ್ಸು ಕಾಣಿಸುವುದು. ಇದರ ಗೋಚರದಿಂದ ಸಾಧಕನ ಸಂಶಯಗಳೆಲ್ಲಾ ನಿವೃತ್ತಿಹೊಂದುವುವು. ಈ ಬ್ರಹ್ಮ ತೇಜಸ್ಸನ್ನೇ ತಾನೆಂದು ಭಾವಿಸಿ "ಓಂ" ಕಾರ ಧ್ಯಾನವನ್ನು ಮುಂದುವರಿಸಿದರೆ ಧ್ಯಾನವು ಸಿದ್ಧಿಸುವುದು. ಆ ಸ್ಥಿರತೆಯನ್ನು 'ಸೋಹಂ' ಎಂದು ಕರೆಯುವರು. ಈ ಅನಾಹತ ಚಕ್ರದ ಮಧ್ಯದಲ್ಲಿ, ಅಷ್ಟದಳ ಪದ್ಮವಿರುವುದು. ಇದರಲ್ಲಿ ಬುದ್ಧಿಯು, ಮಧುವಿಗಾಗಿ ಬಯಸುವ ಭ್ರಮರದಂತೆ, ನಿರಂತರವೂ ಭ್ರಮಣ ಮಾಡುತ್ತಿರುವುದು. ಇದರ ಫಲಗಳು ಈ ಕೆಳಗೆ ಕಂಡಂತೆ ಇರುವುವು.

	ದಳದ ವರ್ಣ	ದಳದ ದಿಕ್ಕು	ಇದರಲ್ಲಿ ಬುದ್ಧಿ ಭ್ರಮಿಸಿದರೆ ಜೀವನಿಗೆ ಆಗುವ ಫಲ.
1)	ಶ್ವೇತ	ಪೂರ್ವ	ಧೈರ್ಯ, ಔದಾರ್ಯ, ಭಕ್ತಿ, ಪುಣ್ಯಾದಿ ದೈವೀ ಗುಣಗಳು.
2)	ಪೀತ	ಆಗ್ನೇಯ	ಆಲಸ್ಯ, ಉದ್ವೇಗ, ಶೋಕ, ಮೋಹಾದಿ ತಾಮಸೀ ಗುಣಗಳು
3)	ನೀಲ	ನೈಋತ್ಯ	ಧನ, ಪುತ್ರಾದಿಗಳಲ್ಲಿ ಮೋಹ
4)	ಪೀತ	ಪಶ್ಚಿಮ	ಕ್ರೀಡಾ ವಿನೋದಾದಿ ಆನಂದ
5)	ಶ್ಯಾಮಲ	ವಾಯವ್ಯ	ಸ್ಥಿರ ಮನಸ್ಸು, ತೀರ್ಥಯಾತ್ರೆ, ಸಾಧು ಸಮಾಗಮ
6)	ಶುಭ್ರ	ಉತ್ತರ	ಅಷ್ಟ ಭೋಗಗಳು
7)	ಸಿಂಧೂರ	ಈಶಾನ್ಯ	ಧಾರ್ಮಿಕಕಾರ್ಯಾಸಕ್ತಿ
8)	ಕೃಷ್ಣ	ದಕ್ಷಿಣ	ಕ್ರೋಧ, ದ್ವೇಷಾದಿ ದುಷ್ಟ ವಾಸನೆಗಳು

9) ದಳಗಳ ಮಧ್ಯಸಂಧಿಯಲ್ಲಿ ಮನಸ್ಸು ಪ್ರವೇಶ ಮಾಡಿದರೆ, ಜೀವನು ನಿದ್ರಾ ಸಮಾಧಿಸ್ಥಿತಿಯಲ್ಲಿ ವಿಶ್ರಾಂತನಾಗುವನು.

10) ಮಧ್ಯಕರ್ಣಿಕೆಯಲ್ಲಿ ಮನಸ್ಸು ಪ್ರವೇಶಿಸಿದರೆ ಜೀವನು ವ್ಯಾಧಿಗ್ರಸ್ತನಾಗುವನು.

ಈ ರೀತಿ ಭ್ರಮಿಸುವ ಬುದ್ಧಿಯನ್ನು ಒಂದು ಪ್ರಹರದವರೆಗೆ ಸ್ಥಿರವಾಗಿ ನಿಲ್ಲಿಸಿ, ಅನುಸಂಧಾನ ಮಾಡಿದರೆ, ಅಷ್ಟದಳ ಕಮಲ ದಳಗಳ ಜ್ಞಾನ ಉಂಟಾಗುವುದು. ಇಲ್ಲಿ ಅಧೋಮುಖವಾಗಿರುವ ಪದ್ಮವು ಊರ್ಧ್ವ ಮುಖವಾಗುವುದು. ಇಲ್ಲಿ ಜೀವನಿಗೆ ತಮೋಗುಣದ ಉಪಾಧಿ ಹೋಗುವುದು. ಇವನ್ನೇ ಶ್ರುತಿಯಲ್ಲಿ 'ಹೃದಯಂ ಚಾಪ್ಯಧೋ ಮುಖಂ' ಎಂದು ಅಷ್ಟದಳ ಪದ್ಮವನ್ನು ಹೇಳಿದ್ದಾರೆ.

ತೈತ್ತಿರೀಯ ಉಪನಿಷತ್ತಿನ 'ಸ ಯ ಏಷೋಽನ್ತರ್ಹೃದಯ ಆಕಾಶಃ' ಎಂಬುದರ ಭಾಷ್ಯದಲ್ಲಿ, ಶ್ರೀಮಚ್ಛಂಕರರು ಹೃದಯವೆಂದರೆ, 'ಪುಂಡರೀಕಾಕಾರೋ ಮಾಂಸಪಿಂಡಃ ಪ್ರಾಣಾಯತನಃ ಅನೇಕನಾಡಿಸುಷಿರಃ — ಊರ್ಧ್ವನಾಲಃ — ಅಧೋಮುಖಃ' ಎಂದಿದ್ದಾರೆ.

ಉತ್ತರ ಗೀತೆಯಲ್ಲಿ ಶ್ರೀ ಕೃಷ್ಣನು—"ಅಧೋಮುಖಂ ತು ಹೃತ್ಪದ್ಮಂ ಉದ್ಧೃತ್ಯ ಪ್ರಣವೇನ ತು" ಎಂದಿದ್ದಾನೆ.

ಇಂತಹ ಅಷ್ಟದಳ ಪದ್ಮದ ಮಧ್ಯದಲ್ಲಿ, ಹೆಬ್ಬೆಟ್ಟು ಮಾತ್ರ ಪ್ರಮಾಣದ 'ದಹರಾಕಾಶ' ವಿರುವುದು.

ವಿ. ಸೂ. : ಶಿರಸ್ಸಿನ ಮೆದುಳಿನ ಸುತ್ತಲೂ ತಮೋ ಆವರಣವಿದೆ. ಈ ಆವರಣವೇ ಕಾರಣ ಶರೀರ — ಕಾರಣಾಽವಿದ್ಯೆ. ಈ ಆವರಣವು ಅಂತಃಕರಣ, ಮನಸ್ಸು, ಬುದ್ಧಿ ಎಂಬ ಒಂದೇ ಅಂತಃಕರಣ ವಿಶೇಷಗಳ ಸಂಬಂಧದಿಂದ, ಸಹಸ್ರಾರದಿಂದ ಅನಾಹತ ಚಕ್ರದವರೆವಿಗೂ ವ್ಯಾಪಿಸಿದೆ. ಅದರಿಂದ ಇವೆಲ್ಲದರೊಳಗಿನ ಆಕಾಶಕ್ಕೆ ಒಟ್ಟಾಗಿ, 'ಹೃದಯಾಕಾಶ' ವೆನ್ನುವರು. ಹೀಗಾಗಿ ಶಿರಸ್ಸಿನಲ್ಲಿ ಪರಮಾತ್ಮ ಸ್ಥಾನವಾದ ಸಹಸ್ರಾರ ಚಕ್ರದಲ್ಲಿ ಹೃದಯಾಕಾಶವಿದೆ ಎಂದೂ ಹೇಳುವರು.

ಪರಬ್ರಹ್ಮ ಚೈತನ್ಯವು ಹೃದಯದ ಅಂತಃಕರಣದಲ್ಲಿ ಪ್ರತಿಫಲಿಸಿ, ಜೀವನಂತೆ ತೋರುತ್ತಿರುವ, ಮತ್ತು ಆ ಅನಾಹತ ಚಕ್ರದಲ್ಲಿ 'ಓಂ' ಕಾರದ 'ಅ' ಕಾರ 'ಉ' ಕಾರಗಳೊಡನೆ ಸೇರಿ 'ಓ' ಕಾರವಾಗಿ ಭಾಸವಾಗುವ ಪರಮಾತ್ಮನೇ ತಾನೆಂದು 'ಸೋಹಂ' ಭಾವದಿಂದ ಸಾಧಕನು ವಿಶುದ್ಧಿ ಚಕ್ರವನ್ನು ತಲುಪಬೇಕು.

ವಿಶುದ್ಧಿಚಕ್ರವು ಕಂಠಪ್ರದೇಶದಲ್ಲಿದೆ. ಇದಕ್ಕೆ 16 ದಳಗಳು. ಇವರ ಬೀಜಾಕ್ಷರಗಳು 'ಅ' ಕಾರದಿಂದ 'ಅಃ' ವರಗಿನ 16 ಸ್ವರಗಳು. ಇದು ಮನೋಮಯಕೋಶವು. ಆಕಾಶತತ್ವಕ್ಕೆ ಇದು ಪ್ರಧಾನವಾದುದು. ಇದಕ್ಕೆ ಅಭಿಮಾನಿ ಜೀವಾತ್ಮ. ಇಲ್ಲಿ ಲಯತತ್ವ ಪ್ರತಿಪಾದಕ ರುದ್ರಗ್ರಂಥಿ ಇದೆ. ಇಲ್ಲಿ ಉಪಾಸಕನು ತಾನು ಜೀವನಲ್ಲವೆಂದು ತಿಳಿದು, ತನ್ನ ಅವಿದ್ಯಾಕರ್ಮವೆಲ್ಲಾ ಲಯ ಹೊಂದಲು, ತನ್ನ ಬುದ್ಧಿರೂಪವಾದ ಮನಸ್ಸಿನಲ್ಲಿ, 'ಸೋಹಂ' ಭಾವವನ್ನು ಮಾತ್ರ ಹೊಂದಿ, ರುದ್ರಗ್ರಂಥಿಯನ್ನು ಭೇದಿಸಿಕೊಂಡು, ತಾನು ವಿಶುದ್ಧನಾಗಿ ಮುಂದೆ ಆಜ್ಞಾಚಕ್ರವನ್ನು ತಲಪಬೇಕು.

ಈ ಆಜ್ಞಾಚಕ್ರವು ಶಬ್ದಬ್ರಹ್ಮನಿವಾಸ : ಈ ಚಕ್ರದಲ್ಲಿ ಮೃದಂಗ ಧ್ವನಿಯಂತಿರುವ ಓಂ ಕಾರದ ಸೌಮ್ಯತೇಜೋನಾದವು ಅನುಭವಕ್ಕೆ ಬರುವುದು. ಇಲ್ಲಿ 'ಆಹವನೀಯಾಗ್ನಿ'ಯಿರುವುದು. ಈ ಆಜ್ಞಾಚಕ್ರಕ್ಕೆ ತಲಪುವ ಸಾಧಕನ

ಗಳಲ್ಲಿನ ಬೀಜಾಕ್ಷರಗಳನ್ನೂ 'ಅ' ಕಾರ 'ಉ' ಕಾರ 'ಮ' ಕಾರಗಳನ್ನೂ ಬ್ರಹ್ಮ ವಿಷ್ಣು, ರುದ್ರಗ್ರಂಥಿಗಳನ್ನೂ ಪ್ರಾಣವಾಯುಗಳನ್ನೂ, ಮಹಾಬಿಂದು ವನ್ನೂ ಚಕ್ರಗಳ ಅಧಿಷ್ಠಾತೃ ದೇವತೆಗಳನ್ನೂ ಅಗ್ನಿತ್ರಯಗಳನ್ನೂ (ಮೂಲಾ ಧಾರದ ಬಳಿ 'ಗಾರ್ಹಪತ್ಯಾಗ್ನಿ' ಅನಾಹತದಲ್ಲಿ 'ದಾಕ್ಷಿಣಾಗ್ನಿ' ಆಜ್ಞಾ ಚಕ್ರದಲ್ಲಿ 'ಆಹವನೀಯಾಗ್ನಿ' ಗಳಿವೆ. ಇದನ್ನೇ ಹೃದಯೇ ದಕ್ಷಿಣಾಗ್ನಿರುದರೇ ಗಾರ್ಹಪತ್ಯಂ ಮುಖೇ ಚಾಹವನೀಯಂ' ಎಂದು ಗರ್ಭೋಪನಿಷತ್ತಿನಲ್ಲಿ ಹೇಳಿದೆ.) ಕುಂಡಲಿನೀ ಶಕ್ತಿಯನ್ನೂ 'ಓಂ' ಕಾರವನ್ನೂ ಬ್ರಹ್ಮವೆಂದು ಧ್ಯಾನಿಸಿ ಆ ಬ್ರಹ್ಮವೇ ತಾನೆಂದು ಭಾವಿಸುತ್ತಾ ತನ್ನ ಮನಸ್ಸಿನ ಏಕಾಗ್ರತೆಯಿಂದ, ತಾನು 'ಓಂ' ಕಾರ ರೂಪಿಯಾಗಿ, ಸಹಸ್ರಾರಕ್ಕೆ ತಲಪಿ, ನಿಷ್ಕಲನೂ ಅಮೃತನೂ ಆಗುವನು.

ಏಕಾಗ್ರಮನಸ್ಸಿನಿಂದ ಯಾವ, ಅಸಂಗ, ಅವ್ಯಯ, ಅಸಂಸಾರಿ, ನಿತ್ಯ ಮುಕ್ತ, ನಿರ್ಭಯ ಬ್ರಹ್ಮಸ್ವರೂಪ 'ಓಂ'ಕಾರದ ಪರಮಾರ್ಥವುಂಟೋ ಅದೇ ನಾನೆಂದು ಚಿಂತಿಸುವ ಜ್ಞಾನಶಕ್ತಿಯೇ ಸಾಧಕನನ್ನು ಕಳಾಸೋಪಾನದಿಂದ ಮೇಲಕ್ಕೆತ್ತಿ ಪರಬ್ರಹ್ಮಸ್ವರೂಪದಲ್ಲಿ ಐಕ್ಯಗೊಳಿಸುವುದು. ಇದೇ 'ಓಂ' ಕಾರದ ನಿರ್ಗುಣೋಪಾಸನೆಯು.

ಇದನ್ನೇ ವಿಷ್ಣುಪುರಾಣದಲ್ಲಿ :—

'ಅ'ಕಾರಂ ಪುರುಷಂ ವಿಶ್ವಂ 'ಉ' ಕಾರೇ ಪ್ರವಿಲಾಪಯೇತ್ ।
'ಉ' ಕಾರಂ ತೈಜಸಂ ಸೂಕ್ಷ್ಮಂ 'ಮ' ಕಾರೇ ಪ್ರವಿಲಾಪಯೇತ್ ।
'ಮ' ಕಾರಂ ಕಾರಣಂ ಪ್ರಾಜ್ಞಂ ಚಿದಾತ್ಮನಿ ವಿಲಾಪಯೇತ್ ।

ಅಂದರೆ 'ಅ' ಕಾರರೂಪ ವಿಶ್ವನನ್ನು 'ಉ' ಕಾರರೂಪ ತೈಜಸನಲ್ಲಿಯೂ, 'ಉ' ಕಾರರೂಪ ತೈಜಸನನ್ನು 'ಮ' ಕಾರರೂಪ ಪ್ರಾಜ್ಞನಲ್ಲಿಯೂ, 'ಮ' ಕಾರರೂಪ ಪ್ರಾಜ್ಞನನ್ನು ಸಚ್ಚಿದಾನಂದ 'ಓಂ' ಕಾರರೂಪ ಪರಬ್ರಹ್ಮನಲ್ಲಿಯೂ ಲಯಮಾಡ ಬೇಕು ಎಂದಿದೆ.

ಇನ್ನು ಕಳಾಸ್ಥಾನವೆಂದರೆ :— ಜ್ಞಾತೃ, ಜ್ಞಾನ ಜ್ಞೇಯಗಳೆಂಬ ತ್ರಿಪುಟಿಗಳಲ್ಲಿ, ಧ್ಯಾನಬಲದಿಂದ 'ಅವಿದ್ಯಾನಿವೃತ್ತಿಯಾಗಿ ವಿಷಯ ವ್ಯವಹಾರಕ್ಕೆ ಕಾರಣವಾದ ಜ್ಞಾನ, ಜ್ಞೇಯಗಳು ನಾಶಹೊಂದಿ ಕೇವಲ 'ಅಹಂ' ಎಂಬ ಜ್ಞಾನ ಮಾತ್ರ ಉಳಿದಿರುತ್ತದೆ.

ಈ ಸ್ಥಿತಿಯೇ ಬಿಂದುನಾದ ಕಲೆಗಳಲ್ಲಿ ಕಲಾಸ್ಥಾನವು. ಈ ಸ್ಥಿತಿ ಯಲ್ಲಿ ಹೊರಗಿನ ಜ್ಞಾನವಿಲ್ಲದೆ, ಸ್ವಾತ್ಮಾನುಭವ ಆನಂದಮಯವಾಗಿ, ಜೀವನು ಉನ್ಮನ್ಯವಸ್ಥೆಯಲ್ಲಿರುವನು. ಈ ಅಹಂ ಜ್ಞಾನವೂ ಧ್ಯಾನಬಲದಿಂದ ಐಕ್ಯ ಗೊಳ್ಳಲು, ಪರಬ್ರಹ್ಮಪ್ರಾಪ್ತಿಯಾಗುವುದು.

ತದ್ಭಸ್ಮನಿ ಹುತಂ ಆತ್ಮಜ್ಞಾನಂ ವಿನಾ ಧ್ರುವಂ॥ ಎಂದರೆ,ತತ್ವಮಸಿ ಅಹಂ ಬ್ರಹ್ಮಾಸ್ಮಿ ಮುಂತಾದ ಮಹಾವಾಕ್ಯಗಳಿಂದ ಹುಟ್ಟುವ "ನಾನೇ ಬ್ರಹ್ಮ" ಎಂಬ ನಿಶ್ಚಯವಾದ ತಿಳುವಳಿಕೆಯನ್ನು ವೇದಾಂತ ಶ್ರವಣದಿಂದ ಹೊಂದಿ ಪರಬ್ರಹ್ಮನಲ್ಲಿ " ನಾನು " ಎಂಬುವನ್ನು ಲಯಮಾಡಬೇಕೆಂಬ ಉತ್ಕಟೇಚ್ಛೆಯಿಂದ ಧ್ಯಾನದಲ್ಲಿ ಮುಂದುವರಿಯ ದಿದ್ದರೆ, ಧ್ಯಾನದಲ್ಲಿ ಧರಿಸಿದ್ದ ಸಾವಿರಾರು ನಾದಬಿಂದುಗಳೂ, ಪ್ರಾಣಯಾಮವೇ ಮುಂತಾದ ಕೋಟ್ಯಂತರ ಅಭ್ಯಾಸಗಳೂ ನಿಷ್ಪ್ರಯೋಜಕಗಳು.

ಸಹಸ್ರಾರಚಕ್ರ

ಶರೀರದ ಕೊನೆಯ ಚಕ್ರವು ಸಹಸ್ರಾರ ಚಕ್ರವು. ಇದು ಸಹಸ್ರದಳ ವುಳ್ಳದ್ದಾಗಿ, ಲಲಾಟದ ಊರ್ಧ್ವದಲ್ಲಿ ನೆತ್ತಿಯಲ್ಲಿ ಸ್ವಲ್ಪ ಮುಂಭಾಗದಲ್ಲಿದೆ. ಇದನ್ನು 'ಭ್ರಮರಗುಹ' 'ಲಲಾಟ ಚಕ್ರ' 'ಬ್ರಹ್ಮರಂಧ್ರ' ಎಂದು ಕರೆ ಯುವರು. ಆತ್ಮೋನ್ನತಿ ಸಾಧಿಸಿದ ಸಾಧಕರು ತಮ್ಮ ಜೀವಾತ್ಮನನ್ನು ಇದರ ಮೂಲಕವೇ ಮುಕ್ತನನ್ನಾಗಿ ಮಾಡುವರು.

'ಆಜ್ಞಾ' ಚಕ್ರದಿಂದ ಈ ಚಕ್ರವನ್ನು ತಲಪುವ ಸಾಧಕನ 'ಪ್ರಾಜ್ಞತ್ವ' ಉಪಾಧಿಯು ಹೋಗಿ, ಪ್ರಾಜ್ಞತ್ವದ ಕಳಾಸೋಪಾನದಿಂದ ಪರಬ್ರಹ್ಮಪ್ರಾಪ್ತಿ ಸಿದ್ಧಿಸುವುದು. ಕಳಾಸೋಪಾನ ಪ್ರಾಪ್ತೈಸಿತೆಂದರೆ, 'ಓಂ' ಕಾರವೂ ಪರಬ್ರಹ್ಮ ನೊಡನೆ ಲೀನವಾಗುವುದು. ಯೋಗಾನುಷ್ಠಾನವು (ಕ್ರಿಯಾಶಕ್ತಿಯು) ಸಾಧ ಕನಿಗೆ ಈ ಕಳಾಸೋಪಾನದವರೆಗೆ ಮಾತ್ರ.

ಆಜ್ಞಾಚಕ್ರದಿಂದ ಈ ಸಹಸ್ರಾರ ಚಕ್ರವನ್ನು ತಲುಪುವ ಉಪಾಸಕ ನಿಗೆ, ಅಲ್ಲಿ ಆಜ್ಞಾ ಮತ್ತು ಸಹಸ್ರಾರಕ್ಕೆ ಸೇರಿದಂತೆ ತಾಲುಮೂಲ ಅಂದರೆ ಭ್ರೂ ಮಧ್ಯದ ಮೇಲ್ಗಡೆ 'ತಾಲು ಮೂಲೇ ತು ಚಂದ್ರಮಾ' ಎಂಬ ಶ್ರುತಿಯಂತೆ ನೆಲಸಿರುವ ಚಂದ್ರ ಮಂಡಲದಿಂದ ಸ್ರವಹಿಸುವ ಜ್ಞಾನಗಂಗೆಯ ಅಮೃತಪೂರಿತ ಅಲೆಗಳು ತಂಪನ್ನುಂಟುಮಾಡುತ್ತವೆ. ಇಲ್ಲಿ ಸರ್ವ ಉಪಾಧಿಗಳೂ ಲಯಹೊಂದಿ ಸಮಸ್ತ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣವಾದ ಬುದ್ಧಿಯೂ ಲಯಹೊಂದಿ, ಸಮಸ್ತ ಪ್ರಾಪಂಚಿಕ ಕ್ರಿಯೆಗಳೂ ಕಳೆದು, ಉಪಾಸಕನು ಅಖಂಡ ರೂಪವಾದ ಇಲ್ಲಿನ ಬ್ರಹ್ಮಚೈತನ್ಯದಲ್ಲಿ, ಬ್ರಹ್ಮಾನಂದದಲ್ಲಿ ಮುಳುಗಿ ಲೀನನಾಗುವನು.

ಹೀಗೆ ಸಾಧಕನು ಪ್ರಾಣಾಯಾಮವನ್ನು ಸರಿಯಾಗಿ ಅಭ್ಯಾಸ ಮಾಡಿ ಅದರ ಶಕ್ತಿಯಿಂದ ಮನಸ್ಸನ್ನೂ, ಪ್ರಾಣವನ್ನೂ, ಕ್ರಮ ಕ್ರಮವಾಗಿ ನಿಯಮಿಸಿ, ತನ್ನ ಶರೀರದಲ್ಲಿನ ಮೂಲಾಧಾರ ಚಕ್ರದಿಂದ ಸುಷುಮ್ನಾನಾಡಿಯ ಒಳಗಡೆ ಮೇಲಿಮೇಲಿನ ಚಕ್ರಗಳಲ್ಲಿ ಸ್ಥಾಪಿಸುತ್ತಾ ಹೋಗಿ, ಆ ಚಕ್ರಗಳನ್ನೂ ಆ ಚಕ್ರ

ಯಾಗುವುದು. ಈ ವಿಚಾರದಲ್ಲಿ ಸದಾಶಿವ ಪ್ರೋಕ್ತವಾದ 'ನಾದಾನುಸಂಧಾನ' ದಿಂದ ಲಭಿಸುವ ಸಮಾಧಿಯೇ ಶ್ರೇಷ್ಠವಾದುದು.

ಶ್ರೀಮಚ್ಛಂಕರರು ಯೋಗತಾರಾವಲಿಯಲ್ಲಿ :—

' ಸದಾಶಿವೋಕ್ತಾನಿ ಸಪಾದಲಕ್ಷ । ಲಯಾವಧಾನಾನಿ
ವಸಂತಿಲೋಕೇ ॥
ನಾದಾನುಸಂಧಾನಸಮಾಧಿಮೇಕಂ । ಮನ್ಯಾಮಹೇ ಮನ್ಯ
ತಮಂ ಲಯಾನಾಂ ॥
ನಾದಾನುಸಂಧಾನ ನಮೋಸ್ತು ತುಭ್ಯಂ । ತ್ವಂ ಸಾಧನಂ
ತತ್ತ್ವಪದಸ್ಯ ಜಾನೇ ।
ಭವತ್ಪ್ರಸಾದಾತ್ಪವನೇನ ಸಾಕಂ । ವಿಲೀಯತೇ ವಿಷ್ಣುಪದೇ
ಮನೋ ಮೇ ॥

ಎಂದರೆ, ಎಲೈ ನಾದಾನು ಸಂಧಾನವೇ ! ನಿನಗೆ ನಮಸ್ಕಾರ. ನೀನು ಪರಮಾತ್ಮಸಾಕ್ಷಾತ್ಕಾರಕ್ಕೆ ಸಾಧನವು. ನಿನ್ನ ಅನುಗ್ರಹದಿಂದ ಪ್ರಾಣಾಯಾಮ ಸಹಿತವಾಗಿ ಬುದ್ಧಿವೃತ್ತಿಯು ಪರಮಾತ್ಮನಲ್ಲಿ ಲೀನವಾಗುವುದು ಎಂದಿದ್ದಾರೆ.

ನಾದಾನುಸಂಧಾನದ ಕ್ರಮ

ಷಣ್ಮುಖೀ ಮುದ್ರೆಯಿಂದ ಕಿವಿಗಳನ್ನೂ ನಾಸಿಕಾರಂಧ್ರಗಳನ್ನೂ ಮುಚ್ಚಿ ಭ್ರೂಮಧ್ಯದಲ್ಲಿ ದೃಷ್ಟಿಯಿಟ್ಟು, ಅನಾಹತ, ಆಜ್ಞಾಚಕ್ರಗಳಲ್ಲಿ ಕೇಳುವ 'ಓಂ, ಕಾರ ನಾದವನ್ನು ಆಲೈಸುತ್ತಾ, ಓಂಕಾರನಾದ ಮತ್ತು ಭ್ರೂಮಧ್ಯದ ಸೂರ್ಯಚಕ್ರವಾದ ಆಜ್ಞಾಚಕ್ರದ ಜ್ಯೋತಿಯ ತನ್ಮಯತೆಯಿಂದ, ಆ ಜ್ಯೋತಿ ಮತ್ತು ನಾದದಲ್ಲಿ ಅಂತರ್ಗತವಾಗಿರುವ ಪರಮಾತ್ಮನನ್ನು ಹೊಂದುವ ಉತ್ಕಟವಾದ ಇಚ್ಛೆಯಿಂದ ಧ್ಯಾನಮಾಡುವುದು ನಾದಾನುಸಂಧಾನವೆನಿಸವುದು.

ಈ ಧ್ಯಾನಕಾಲದಲ್ಲಿ ರಜೋಗುಣ ಪ್ರಧಾನ ಶಕ್ತಿಯಾದ ವಿಕ್ಷೇಪ ಶಕ್ತಿ ಯೊಂದೇ ಉಳಿದು ಅದು ಬುದ್ಧಿಗೆ ನಾದಾನುಸಂಧಾನವನ್ನು ತಪ್ಪಿಸಲು ವಿಷಯ ಗಳನ್ನು ತಂದು ಒಡ್ಡುವುದು. ಆ ಕಾಲದಲ್ಲಿ ಸಾಧಕನಿಗೆ ಕೇವಲ ಆತ್ಮಜ್ಞಾನದ ದೃಢಭಯಕೆ ಇರಬೇಕು. ಏಕೆಂದರೆ ಆಗ ಮನಸ್ಸು ಮತ್ತು ಪ್ರಾಣಶಕ್ತಿಗಳು ಬುದ್ಧಿಯಲ್ಲಿ ಸೇರಿಹೋಗಿರುವುವು. ಬುದ್ಧಿಯೊಂದೇ ತೇಜೋನಾದವನ್ನು ಸೋಹಂ ಭಾವದಿಂದ ಧರಿಸಿಕೊಂಡು ಧ್ಯಾನಾಸಕ್ತವಾಗಿರುವುದು. ಅದು ವಿಷಯಗಳ ಕಡೆಗೆ ಹೋಗದೇ ಕೇವಲ ಆತ್ಮಜ್ಞಾನ ಸಂಪಾದನೆಯಲ್ಲಿಯೇ ನಿರತವಾಗಿರುವಂತೆ ಮಾಡ ಬೇಕು. ಇದನ್ನೇ " ನಾದಬಿಂದುಸಹಸ್ರಾಣಿ ಯೋಗಕೋಟಿಶತಾನಿ ಚ ॥ ಸರ್ವ

ತೈಜಸ ಉಪಾಧಿಯು ನಿವೃತ್ತಿಯಾಗುವುದು. ಅಲ್ಲಿನ 'ಮಹಾಬಿಂದು' ವಿನಿಂದ ರಜೋಗುಣಾತ್ಮಕ ಉಪಾಧಿಯು ಲಯವಾಗುವುದು. ಒಟ್ಟಿನಲ್ಲಿ ರಜಸ್ತಮೋ ಗುಣಾತ್ಮಕವಾದ ಅವಿದ್ಯೆಯ ಉಪಾಧಿಗಳು ಅನಾಹತ, ಆಜ್ಞಾಚಕ್ರಗಳಲ್ಲಿ ಲಯ ವಾಗುವುವು. ಇನ್ನು ಮುಂದೆ, ಮಹಾಬಿಂದುವಿನ ಪ್ರಭಾವದಿಂದ, ಬಂಧಕ ವಲ್ಲದಿದ್ದರೂ ಇರುವ ಶುದ್ಧಸತ್ವಗುಣಪ್ರಧಾನವಾದ ವಿದ್ಯಾಉಪಾಧಿಯೂ ನಿವೃತ್ತ ವಾಗಿ ಪರಬ್ರಹ್ಮಪ್ರಾಪ್ತಿಯಾಗುವುದು. ಈ ಮಹಾಬಿಂದುವನ್ನು ಈಶ್ವರನ ಹಣೆ ಗಣ್ಣು ಎನ್ನುವರು. (organ of clairvoyance)

ಆಜ್ಞಾಚಕ್ರವು ಭ್ರೂಮಧ್ಯದಲ್ಲಿದೆ. ಇದಕ್ಕೆ 2 ದಳಗಳು. ಅವುಗಳ ಬೀಜಾಕ್ಷರಗಳು 'ಹ' 'ಕ್ಷ'. ಇದು ಬ್ರಹ್ಮಸಾಕ್ಷಾತ್ಕಾರದ ಕೊನೆಯ ಚಕ್ರವು. ಇಲ್ಲಿ ಸಾಧಕನು ತ್ರಿನೇತ್ರನಾಗಿ ದಿವ್ಯದೃಷ್ಟಿಯನ್ನು ಹೊಂದುವನು. ಇದಕ್ಕೆ ಅಧಿ ಷ್ಠಾತೃ ಮೋಕ್ಷಲಕ್ಷ್ಮೀ ಸಮೇತ ಪರಮೇಶ್ವರ. ಇದು 'ಓಂ' ಕಾರದ 'ಮ' ಕಾರಸ್ಥಾನ. ಇದು ಬುದ್ಧಿತತ್ವಾತ್ಮಕವು. ಇಲ್ಲಿ ಉಪಾಸಕನಿಗೆ ಸಮಸ್ತಜ್ಞಾನವೂ ಲಭ್ಯವಾಗಿ, ಜ್ಞಾನಧಾರೆಯು ಪ್ರವಹಿಸುತ್ತದೆ. ಇಲ್ಲಿಂದ ಮುಂದೆ ಚಿಚ್ಛಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ವಿಶುದ್ಧಿಚಕ್ರದಲ್ಲಿ 'ಓಂ' ಕಾರದ ತೇಜೋನಾದಾನು ಸಂಧಾನ ಮಾಡುತ್ತಾ ಬರುವ ಉಪಾಸಕನಿಗೆ ಇಲ್ಲಿಯವರೆ ಸಮಸ್ತವನ್ನೂ ಬೀಜಾತ್ಮಕವಾಗಿ ಧರಿಸಿರುವ 'ಮಹಾಬಿಂದು'ವೆನಿಸಿದ ಈ ಆಜ್ಞಾಚಕ್ರದಲ್ಲಿ ಆ ನಾದವೂ ಮತ್ತು ಇದುವರೆಗೆ 'ಅ' ಕಾರ 'ಉ' ಕಾರಗಳಲ್ಲಿ ಬಂದ ಸಮಸ್ತ ಸೂಕ್ಷ್ಮಶಕ್ತಿಗಳೂ ಅತಿ ಸೂಕ್ಷ್ಮವಾಗಿ, ಇಲ್ಲಿ 'ಮ' ಕಾರದಲ್ಲಿ ಲಭ್ಯವಾಗುವ ಜ್ಞಾನಧಾರೆಯಿಂದ ತಾನೇ ಪರಮಾತ್ಮನೆಂಬ ಶುದ್ಧಜ್ಞಾನರೂಪವಾದ ಕಳಾರೂಪ ವಾಗಿ, 'ಓಂ' ಕಾರದಲ್ಲಿ ಅಂತರ್ಗತವಾಗಿ, ಸಹಸ್ರಾರಚಕ್ರದಲ್ಲಿ 'ಓಂ' ಕಾರ ರೂಪ ವಾಗಿ, ಸೇರಿಹೋಗುವುದು. ಇಲ್ಲಿ ಚಂದ್ರಸ್ವರೂಪ ಇಡಾನಾಡಿಯೂ, ಸೂರ್ಯ ಸ್ವರೂಪಪಿಂಗಳಾನಾಡಿಯೂ ಕೊನೆಗೊಳ್ಳುತ್ತವೆ. ಇಲ್ಲಿಯೇ ಅಗ್ನಿಸ್ವರೂಪ ಸುಷುಮ್ನಾ ನಾಡಿಯ ತುದಿಯು ಸಹಸ್ರಾರ ಚಕ್ರವನ್ನು ಮುಟ್ಟುತ್ತದೆ. ಇಲ್ಲಿ ಸಮಸ್ತ ಪ್ರಪಂಚವನ್ನೂ ಲಯಮಾಡುವ ಶಕ್ತಿಯುಳ್ಳ ನಾದಾಂತವಾದ ಕಳಾಸ್ವರೂಪದಿಂದ ಪರಮಾತ್ಮನು ಉಪಾಸಕನ ಸಮಸ್ತ ಸಂಕಲ್ಪಗಳನ್ನೂ ಲಯಮಾಡುವನು.

ಮೂಲಾಧಾರಚಕ್ರದಿಂದ ಭ್ರೂಮಧ್ಯದ ಆಜ್ಞಾಚಕ್ರದಲ್ಲಿನ ಮಹಾಬಿಂದು (ತೇಜೋಬಿಂದು)ವಿನವರೆಗೂ 'ಓಂ' ಕಾರ ಧ್ಯಾನೋಚ್ಚಾರಣೆಯು ಒಂದು ಕಂಬ ದಂತೆ ಏಕಾಕಾರವಾಗಿರುವುದು. ತೇಜೋಬಿಂದುವಿನ ಪೀಠಭಾಗವೇ ಮೂಲಾ ಧಾರಚಕ್ರವು ಮತ್ತು ಅದರಲ್ಲಿನ ಕುಂಡಲಿನೀಶಕ್ತಿಯು.

ಬುದ್ಧಿಯು ಪರಮಾತ್ಮನಲ್ಲಿ ಲಯವಾಗಲು ಅನಾಹತ, ಆಜ್ಞಾಚಕ್ರ ಗಳಲ್ಲಿ ಗೋಚರವಾಗುವ ತೇಜೋನಾದಗಳ ಅನುಸಂಧಾನವು ತುಂಬಾ ಫಲಕಾರಿ

ಸಹಸ್ರಾರಚಕ್ರದಲ್ಲಿನ ಪರಮಾಕಾಶಸ್ಥಳವು ಪಂಚಕೋಶಗಳಿಂದ ಆವೃತವಾಗಿದೆ. ಈ ಕೋಶಗಳು 'ಓಂ' ಕಾರ ಧ್ಯಾನದಿಂದ ಭೇದಿಸಲ್ಪಡಬೇಕು.

ಇದನ್ನೇ ಮುಂಡಕೋಪನಿಷತ್ತಿನಲ್ಲಿ:—

ಪ್ರಣವೋ ಧನುಃ ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ಬೋಧ್ಧವ್ಯಂ ಶರವತ್ತನ್ಮಯೋ ಭವೇತ್ ॥

ಅಂದರೆ 'ಓಂ' ಕಾರದ ಉಚ್ಚಾರಣೆಯೆಂಬ ಧನುಸ್ಸನ್ನು ಹಿಡಿದು, ಸಚ್ಚಿದಾನಂದ ಪರಬ್ರಹ್ಮವನ್ನು ಗುರಿಯಾಗಿಟ್ಟುಕೊಂಡು, ಆತ್ಮನನ್ನೇ ಬಾಣವನ್ನಾಗಿ ಮಾಡಿಕೊಂಡು, ವೈರಾಗ್ಯದಿಂದಲೂ ಏಕಾಗ್ರತೆಯಿಂದಲೂ ದೃಢವಾದ ಜ್ಞಾನದಿಂದಲೂ, ಪ್ರಯೋಗಿಸಿದರೆ ಸಾಧಕನು ಆ ಪ್ರಯೋಗಿಸಿದ ಬಾಣದಂತೆ, ತನ್ಮಯನಾಗುವನು. ಅಂದರೆ ಹೇಗೆ ಬಾಣಕ್ಕೆ ತನ್ನ ಗುರಿಯೊಡನೆ ಒಂದಾಗುವುದೆಂಬ ಫಲ ದೊರಕುವುದೋ ಹಾಗೆ ದೇಹವೇ ಮುಂತಾದವುಗಳು ತಾನೆಂಬ ಪ್ರತ್ಯಯವನ್ನು ಕಳೆದುಕೊಂಡು 'ಓಂ'ಕಾರವೆಂಬ ಅಕ್ಷರದೊಡನೆ ಒಂದಾಗುವುದೆಂಬ ಫಲವು ಸಿದ್ಧಿಸುವುದು.

'ಓಂ'ಕಾರೋಚ್ಚಾರಣೆಯಿಂದ ಪ್ರಾರಂಭವಾದ ಧ್ಯಾನವು ಅನಾಹತ ಚಕ್ರವನ್ನು ಭೇದಿಸಿ, ಅಲ್ಲಿನ ಅಷ್ಟದಳ ಪದ್ಮವನ್ನು ಊರ್ಧ್ವಮುಖವಾಗಿ ಮಾಡಿ ಆ ಅಷ್ಟದಳ ಪದ್ಮದ ಶೃಂಖಲೆಯಲ್ಲಿಪ್ಪ ಜೀವನಿಗೆ ತಮೋಗುಣದ ಉಪಾಧಿಯನ್ನು ಪರಿಹರಿಸುವುದು.

ಅಲ್ಲಿಂದ ಮುಂದೆ 'ಓಂ' ಕಾರನಾದವೂ ಅಡಗುವ 'ಆಜ್ಞಾ' ಚಕ್ರದ ಮಹಾಬಿಂದುವಿನಿಂದ, ರಜೋಗುಣದ ಉಪಾಧಿಯೂ ನಷ್ಟವಾಗುವುದು. ಅಂದರೆ ಒಟ್ಟನಲ್ಲಿ ರಜಸ್ತಮೋಗುಣಾತ್ಮಕವಾದ ಅವಿದ್ಯೋಪಾಧಿಯು ನಿವೃತ್ತವಾಗುವುದು. ಅಲ್ಲಿಂದ ಸಹಸ್ರಾರದಲ್ಲಿ ಶುದ್ಧಸತ್ವಗುಣಪ್ರಧಾನವಾದ 'ವಿದ್ಯಾ'ಉಪಾಧಿಯೂ ಹೋಗಿ ಪರಬ್ರಹ್ಮಪ್ರಾಪ್ತಿಯಾಗುವುದು.

ಇದನ್ನೇ

ತತೋರ್ವೃದ್ಧೇನ ಸತ್ವೇನ ತು ಗುಣಯುಗಳಂ ಭಕ್ತಿಭಾವಂ ಗತೇನ ।
ಛಿತ್ವಾ ಸತ್ವಂ ಚ ಹಿತ್ವಾ ಪುನರನುಪಹಿತೇ ವರ್ತಿತಾಹೇತ್ವಮೇವ ॥

ಎಂದರೆ ಓಂಕಾರದ ಅಹಂಗ್ರಹೋಪಾಸನೆಯಿಂದ (ಪರಾಭಕ್ತಿಯಿಂದ) ಸತ್ವಗುಣವನ್ನು ವೃದ್ಧಿಪಡಿಸಿಕೊಂಡು, ರಜಸ್ತಮೋಗುಣಯುಗಳವನ್ನು ಛೇದಿಸಿ ಆಮೇಲೆ ಸತ್ವಗುಣವನ್ನೂ ಬಿಟ್ಟು ಸಂಪೂರ್ಣವಾಗಿ ವರ್ತಿಸಿ ನಿರ್ಗುಣಬ್ರಹ್ಮವನ್ನೇ ಹೊಂದುತ್ತೇನೆ ಎಂಬುದಾಗಿ ಹೇಳಲ್ಪಟ್ಟಿರುವುದು.

ಈ ಸಂದರ್ಭದಲ್ಲಿ ಶ್ರೀಮಚ್ಛಂಕರರು ಭವಾನೀಭುಜಂಗ ಸ್ತೋತ್ರದಲ್ಲಿ ಹೀಗೆ ಹೇಳಿರುವರು.

ಷಡಾಧಾರಪಂಕೇರುಹಾಂತರ್ವಿರಾಜ |
ತ್ಸುಷುಮ್ನಾಂತರಾಲೇಪಿತೇಜೋಲ್ಲಸಂತೀಂ ||
ಸುಧಾಮಂಡಲಂ ದ್ರಾವಯಂತೀಂ ಪಿಬಂತೀಂ |
ಸುಧಾಮೂರ್ತಿಮೀಡೇ ಚಿದಾನಂದರೂಪಾಂ ||

ಈ ವಿಷಯವಾಗಿ 'ಯೋಗೇಶ್ವರ' ಮೂರ್ತಿಯ ನಕ್ಷೆಯೊಂದನ್ನು ಇದರೊಡನೆ ಸೇರಿಸಿ, ಷಟ್ಚಕ್ರವಿವೇಕದ ಪಟ್ಟಿಯೊಡನೆ ಪರಿಶಿಷ್ಟದಲ್ಲಿ ಕೊಡಲಾಗಿದೆ. ಈ ಪಟ್ಟಿಯಲ್ಲಿ ಚಕ್ರಗಳ ವಿಷಯದಲ್ಲಿ ಹೆಚ್ಚಿನ ವಿವರಗಳನ್ನು ಕೊಟ್ಟಿರುತ್ತೆ. ಅಲ್ಲದೆ ಪರಿಶಿಷ್ಟದಲ್ಲಿ ಶ್ರೀಮಚ್ಛಂಕರವಿರಚಿತ ರಾಮಕರ್ಣಾಮೃತದ ಯೋಗಖಂಡದ ಶ್ಲೋಕಗಳು, ದತ್ತಷಟ್ಚಕ್ರಚಿಂತನ, ವೇಗತಾರಾವಲೀ ಶ್ಲೋಕಗಳನ್ನು ಸೇರಿಸಿರುತ್ತೆ.

ಹಂಸ ಮಂತ್ರಾರ್ಥ

ನಮ್ಮ ಶರೀರದಲ್ಲಿರುವ ಚಕ್ರಗಳಲ್ಲಿ 'ಸ' ಕಾರವು ಮೂಲಾಧಾರದಲ್ಲಿದೆ.
'ಹ' ಕಾರವು ಆಜ್ಞಾಚಕ್ರದಲ್ಲಿದೆ.

'ಸ' ಕಾರವು ಚಂದ್ರಶಕ್ತಿ. ಇದೇ ಉಚ್ಛ್ವಾಸ ರೂಪಿನಲ್ಲಿ ಪ್ರಾಣವಾಯುವಿನ ಊರ್ಧ್ವಮುಖ ಸಂಚಾರವಾಗಿದೆ.

'ಹ' ಕಾರವು ಸೂರ್ಯಶಕ್ತಿ. ಇದು ನಿಶ್ವಾಸರೂಪಿನಲ್ಲಿ ಪ್ರಾಣವಾಯುವಿನ ಅಧೋಮುಖಸಂಚಾರವಾಗಿದೆ.

'ಹ'ಕಾರರೂಪ ಸೂರ್ಯನೂ, 'ಸ'ಕಾರಪಚಂದ್ರನೂ, ಒಬ್ಬರನ್ನೊಬ್ಬರು ಆಕರ್ಷಿಸುವುದರಿಂದ ಸ್ಪಂದನಶಕ್ತಿ ಉದ್ಭವಿಸುವುದು. ಇದರ ಫಲವಾಗಿ ಪಂಚಪ್ರಾಣಗಳ ಮತ್ತು ಶ್ವಾಸೋಚ್ಛ್ವಾಸಗಳ ಕಾರ್ಯಗಳು ಪ್ರಾರಂಭವಾಗುವುವು.

ಈ ಸ್ಪಂದನಕಾರ್ಯಗಳು ಸುಷುಮ್ನಾನಾಡಿಯ ಎಡಬಲಭಾಗಗಳಲ್ಲಿರುವ ಚಂದ್ರನಾಡಿ(ಇಡಾನಾಡಿ) ಸೂರ್ಯನಾಡಿ(ಪಿಂಗಳಾನಾಡಿ)ಗಳಿಂದ ನಡೆಯುವುವು. ಈ ಸ್ಪಂದನದಿಂದ ಉಂಟಾಗುವ "ಹಂಸಃ", 'ಹಂಸಃ' ಎಂಬ ಮಂತ್ರವನ್ನು ಜೀವನು ತನ್ನಷ್ಟಕ್ಕೆ ತಾನೇ ನಿತ್ಯವೂ 21600 ಸಾರಿ ಪುನರಾವೃತ್ತಿ ಮಾಡುವನು. ಈ ಪುನರಾವೃತ್ತಿಯನ್ನು ಸ್ವಲ್ಪಕಾಲ ಚಿತ್ತೈಕಾಗ್ರ್ಯತೆಯಿಂದ ಮಾಡುತ್ತಾ ಬಂದರೆ (ಅಹಂ — ಸಃ) ಎಂಬುದಾಗಿ ಕೊನೆಗೆ 'ಸೋಹಂ' ಆಗುವುದು. 'ಸೋಹಂ' ಅಂದರೆ ಕೂಟಸ್ಥ ಚೈತನ್ಯನೆನಿಸಿದ ಈಶ್ವರನೇ ನಾನು ಎಂದರ್ಥ. ಇದರಲ್ಲಿ 'ಸ್+ಅ+ಉ+ಹ+ಮ್' ಎಂಬುವುಗಳಿವೆ.

ಉಪಾಸಕನ ಉಪಾಸನಾಸಾಮರ್ಥ್ಯದಿಂದ, ಮೂಲಾಧಾರದಲ್ಲಿ, 'ಸ' ಅಕ್ಷರಶಕ್ತಿಯು ಅಲ್ಲಿರುವ ಅಕಾರದೊಡನೆ ಸೇರಿ, ಸುಷುಮ್ನಾನಾಡಿಯೊಳಗೆ ಪ್ರವೇಶಿಸಿ ಅನಾಹತಚಕ್ರದಲ್ಲಿ ಓಂಕಾರದ 'ಉ'ಕಾರವನ್ನು ಸೇರಿ 'ಸೋ ಆಗುವುದು.

ಅನಂತರ ಆಜ್ಞಾಚಕ್ರದಲ್ಲಿ 'ಹ' ಕಾರಶಕ್ತಿಯನ್ನೂ, ಅಲ್ಲಿನ ಓಂ ಕಾರದ 'ಮ' ಕಾರವನ್ನೂ ಸೇರಿ (ಸೋಹಮ್) ಆಗುವುದು. ಈ ರೀತಿ ಹಂಸ ಮಂತ್ರವು (ಅಜಪಾಗಾಯತ್ರೀ ಮಂತ್ರವು) ಓಂಕಾರ ಮಂತ್ರವನ್ನು ಸೇರಿ, ಅಂದರೆ 'ಹಂಸ' ಮಂತ್ರಾರ್ಥ ಜೀವನೂ 'ಓಂ' ಕಾರ ಮಂತ್ರಾರ್ಥದ ಪರ ಮಾತ್ಮನೂ ಸೇರಿ, ಸಹಸ್ರಾರದಲ್ಲಿ ಬ್ರಹ್ಮದೊಡನೆ ಅಭೇದವಾಗಿ ಐಕ್ಯಹೊಂದು ವನು.

ಓಂ	+	ಹಂಸ	=	ಸೋಹಂ
(ಪರಬ್ರಹ್ಮ ಸ್ವರೂಪ)		(ಜೀವಸ್ವರೂಪ)		(ಪರಬ್ರಹ್ಮವೇ ನಾನೆಂಬ ತತ್ವ)

ಅ+ಉ+ಮ್=ಓಂ + ಹ+ಮ್+ಸ=ಹಂಸ = ಸ್+ಅ+ ಉ+ಹ+ಮ್=ಸೋಹಂ.

'ಹಂತಿ ಅವಿದ್ಯಾದಿಕಾರಣಂ ಇತಿ ಹಂಸಃ' ಎಂಬಂತೆ

ಬಂಧಕ್ಕೆ ಕಾರಣಗಳಾದ ಅವಿದ್ಯಾದಿಗಳನ್ನು ನಾಶಮಾಡುವುದರಿಂದ ಪರ ಮಾತ್ಮನೂ 'ಹಂಸ'ನೆನಿಸಿದ್ದಾನೆ.

ಈ ಪರಮಾತ್ಮನೇ ಸರ್ವಜನರ ಅಂತಃಕರಣದಲ್ಲಿ [ಬುದ್ಧಿಯಲ್ಲಿ] ಜೀವ ರೂಪದಿಂದಿರುವನು ಎಂಬ ಅಂಶವನ್ನು

ರುದ್ರಮಹನ್ಯಾಸದಲ್ಲಿ ಬರುವ "ಗಮಾಗಮಸ್ಥಂ ಗಗನಾದಿಶೂನ್ಯಂ ಚಿದ್ರೂಪದೀಪಂ ತಿಮಿರಾಪಹಾರಂ। ಪಶ್ಯಾಮಿ ತೇ ಸರ್ವಜನಾಂತರಸ್ಥಂ ನಮಾಮಿ ಹಂಸಂ ಪರಮಾತ್ಮರೂಪಂ" ಪ್ರತಿಪಾದಿಸಿರುತ್ತದೆ.

'ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಸ್ಸನಾತನಃ' ಎಂಬಲ್ಲಿ ಜೀವನೇ ಸನಾತನನಾದ ಪರಮಾತ್ಮನೆಂದು ಹೇಳಿದೆ.

ಚಕ್ರರೀತ್ಯಾ ಯೋಗಸಾಧನೆಗೆ ಆಸನಪ್ರಾಣಾಯಾಮಾದಿಗಳ ಪ್ರಾಮುಖ್ಯತೆ

ಚಕ್ರರೀತ್ಯಾ ಯೋಗಸಾಧನೆ ಮಾಡಲು, ವೈರಾಗ್ಯವೂ, ಮನಸ್ಸಿನ ಏಕಾಗ್ರತೆಗೆ ಅತಿ ಅವಶ್ಯಕವಾದ ಆಸನಪ್ರಾಣಾಯಪ್ರತ್ಯಾಹಾರಗಳೂ, ಅವ ಶ್ಯಕವು.

ಯೋಗದಲ್ಲಿ ಮುಂದೆ ಹೇಳುವಂತೆ ಅನೇಕ ಆಸನಗಳನ್ನು ತಿಳಿಸಿದ್ದರೂ ಧ್ಯಾನಕ್ಕೆ ಮುಖ್ಯವಾಗಿ ಬೇಕಾದುವು ಮೂರೇ ಆಸನಗಳು. ಅವು ಯಾವುವು ಎಂದರೆ ಪದ್ಮಾಸನ, ಸಿದ್ಧಾಸನ, ಸ್ವಸ್ತಿಕಾಸನ.

ಇದನ್ನೇ ಶಿವತತ್ವಸುಧಾನಿಧಿಯಲ್ಲಿ 'ಪದ್ಮ ಸ್ವಸ್ತಿಕ ಸಿದ್ಧಂಚ ಆಸನಂ ಪರಿಕೀರ್ತಿತಂ' ಎಂದಿದ್ದಾರೆ.

ಮುಖ್ಯವಾದ ಮೂರು ಆಸನಗಳು

ಪದ್ಮಾಸನ : ಬೆನ್ನನ್ನು ನೇರವಾಗಿಟ್ಟುಕೊಂಡು ಕುಳಿತು, ಬಲಗಾಲನ್ನೆತ್ತಿ ಎಡಗಾಲಿನ ಮೇಲೆಯೂ, ಎಡಗಾಲನ್ನು ಬಲಗಾಲಿನ ಮೇಲೆಯೂ, ಅವುಗಳ ಹಿಮ್ಮಡಿಗಳು; ನಾಭಿಯ ಎರಡು ಪಕ್ಕಗಳಲ್ಲಿಯೂ ಹೊಟ್ಟೆಯನ್ನು ಸ್ಪರ್ಶಿಸುವಂತೆ ಇಟ್ಟುಕೊಂಡು, ಎರಡು ಕೈಗಳನ್ನೂ ಮಂಡಿಗಳ ಮೇಲೆ ಇಟ್ಟುಕೊಳ್ಳುವುದು ಪದ್ಮಾಸನ.

ಸಿದ್ಧಾಸನ : ನೆಲದ ಮೇಲೆ ಕುಳಿತು ಬಲಗಾಲಿನ ಹಿಮ್ಮಡಿಯನ್ನು ಗುದದ್ವಾರದ ಬಳಿ ತಗುಲಿಸಿ, ಎಡಗಾಲಿನ ಹಿಮ್ಮಡಿಯನ್ನು ಬಲಗಾಲಿನ ಮೇಲೆ ನಿಂದ ನಾಭಿಯನ್ನು ಮುಟ್ಟುವಂತೆ ಇಡುವುದು ಮತ್ತು ಬಲಗಾಲನ ಬೆರಳುಗಳನ್ನು ಎಡಗಾಲು ತೊಡೆಯ ಸಂಧಿಯಲ್ಲಿ ತೂರಿಸಿಡುವುದು ಆಮೇಲೆ ಕೈಗಳನ್ನು ಮಡಿ ಸದೆ ನೇರವಾಗಿಟ್ಟು ತರ್ಜನಿಗಳನ್ನು ಹೆಬ್ಬೆಟ್ಟುಗಳಿಗೆ ಒತ್ತಿ ಹಿಡಿದು ಮಂಡಿಗಳ ಮೇಲಿಟ್ಟುಕೊಳ್ಳುವುದು; ಎದೆ, ಹೊಟ್ಟೆ, ಕೊರಳು, ಮತ್ತು ತಲೆಗಳು ಒಂದೇ ಸರಳರೇಖೆಯಲ್ಲಿರುವಂತೆ ಮಾಡಿಕೊಳ್ಳುವುದು.

[ಧ್ಯಾನರತನಾದಾಗ, ತಲೆ ಬಗ್ಗಿಸಿ, ಅರ್ಧಕಣ್ಣು ಮುಚ್ಚಿ ನಿಮೀಲನೇತ್ರ ವುಳ್ಳವನಾಗಿ, ಭ್ರೂಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸಿ ಆತ್ಮಾವಲೋಕನ ಮಾಡು ವುದು]

ಸ್ವಸ್ತಿಕಾಸನ : ಎಡಪಾದವನ್ನು ದಕ್ಷಿಣ ಜಂಘೆಯ ತೊಡೆಯ ಸಂಧಿ ಯಲ್ಲಿಟ್ಟು, ಬಲಪಾದವನ್ನು ವಾಮಜಂಘೆಯ ತೊಡೆಯ ಸಂಧಿಯಲ್ಲಿಟ್ಟು ಎರಡು ಮಂಡಿಗಳ ಮೇಲೆ ಎರಡು ಕೈಗಳನ್ನಿರಿಸಿ, ಬೆನ್ನು ಎದೆ ಸೊಂಟವನ್ನು ನೇರವಾಗಿ ಕೂಡುವುದು. ಭ್ರೂ ಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸಿ ಕುಳಿತುಕೊಳ್ಳುವುದು.

ಮುದ್ರೆಗಳು

ಆಸನದ ಜೊತೆಗೆ ಚಿತ್ತದ ಪ್ರಸನ್ನತೆಗೆ ಕೆಲವು 'ಮುದ್ರೆ' ಗಳು ಬೇಕು. ಕುಂಡಲಿನೀ ಶಕ್ತಿಯು ತನ್ನ ಸುಪ್ತಾವಸ್ಥೆಯಿಂದ ಜಾಗೃತಿಗೊಳ್ಳಲು ಈ ಮುದ್ರೆ ಗಳು ಅವಶ್ಯಕ.

ಮುದ್ರೆಗಳಲ್ಲಿ ' ಖೇಚರೀ ಮುದ್ರೆ ', ' ಶಾಂಭವೀ ಮುದ್ರೆ ', ' ಮಹಾ ಮುದ್ರೆ ', ' ಅಶ್ವಿನೀ ಮುದ್ರೆ ', ' ಶಕ್ತಿಚಾಲಿನೀ ಮುದ್ರೆ ', ' ಯೋನಿ ಮುದ್ರೆ ' ' ಯೋಗಮುದ್ರೆ ', ' ಶಾಂಭವೀ ಮುದ್ರೆ ', ' ತಡಾಗೀ ಮುದ್ರೆ ', ' ವಿಪರೀತ ಕರಣಿ ಮುದ್ರೆ ', ' ವಜ್ರೋಳಿ ಮುದ್ರೆ ' ಮುಂತಾದ ಅನೇಕ ಮುದ್ರೆಗಳಿವೆ. ಇವುಗಳಲ್ಲಿ ಅವಶ್ಯಕವಾದ ಎರಡನ್ನು ಇಲ್ಲಿ ಕೊಟ್ಟಿದೆ.

ಖೇಚರೀ ಮುದ್ರೆ : ನಾಲಿಗೆಯನ್ನು ಸುರುಳಿ ಸುತ್ತಿಕೊಂಡು ನಾಲಿಗೆಯ ಹಳ್ಳದಲ್ಲಿ ಸೇರಿಸಿಡುವುದು.

ಶಾಂಭವೀ ಮುದ್ರೆ : ಗುಹ್ಯೇಂದ್ರಿಯಗಳನ್ನು ಸಂಕೋಚಿಸಿ, ಹೊಟ್ಟೆಯನ್ನು ಬೆನ್ನಿನೊಳಗೆ ಹತ್ತುವಂತೆ ಒಳಕ್ಕೆ ಎಳೆದುಕೊಂಡು ಸಿದ್ಧಾಸನ ಅಥವ ಪದ್ಮಾಸನ ಹಾಕಿ ಕುಳಿತುಕೊಳ್ಳಬೇಕು. ನಾಸಿಕಾಗ್ರದಲ್ಲಿ ಅಥವ ಭ್ರೂಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸಿ, ಧ್ಯಾನಾಸಕ್ತನಾಗಬೇಕು.

ಆಸನ, ಮುದ್ರೆಗಳಂತೆ 'ಬಂಧ'ಗಳೂ ಪ್ರಾಣಾಯಾಮ ಪ್ರತ್ಯಾಹಾರಗಳಿಗೆ ಸಹಕಾರಿಗಳು.

ಈ ಕೆಳಗೆ ಅವಶ್ಯಕವಾದ 3 ಬಂಧಗಳನ್ನು ವಿವರಿಸಿವೆ.

ಬಂಧಗಳು

ಮೂಲಬಂಧ : ಎಡಗಾಲಿನ ಹಿಮ್ಮಡಿಯನ್ನು ಮಲದ್ವಾರ ಮತ್ತು ಲಿಂಗದ ಮಧ್ಯದಲ್ಲಿಟ್ಟು, ಮಲದ್ವಾರವನ್ನು ಸಂಕೋಚಿಸಿ, ಗುದ ಮತ್ತು ಲಿಂಗದ ಕೆಳಗಿನ ಸ್ಥಾನವನ್ನು ದೃಢವಾಗಿ ಕುಗ್ಗಿಸಿ, ಅಧೋಗತವಾದ ಅಪಾನ ವಾಯುವನ್ನು ನಿಧಾನವಾಗಿ ಮೇಲಕ್ಕೆ ಎಳೆಯಬೇಕು. ಸಿದ್ಧಾಸನಕ್ಕೆ ಈ ಬಂಧವು ಚೆನ್ನಾಗಿ ಅನುಕೂಲಿಸುತ್ತದೆ.

ಇದರಿಂದ ಅಪಾನವಾಯುವು ಮೇಲೆ ಮೇಲೆ ಪ್ರಾಣದೊಂದಿಗೆ ಸೇರುತ್ತದೆ. ಕುಂಡಲಿನೀ ಶಕ್ತಿಯು ನೇರವಾಗಿ ಮೇಲೇರುತ್ತದೆ. ಅಲ್ಲದೆ ಮಲಬದ್ಧತೆಯನ್ನು ದೂರಮಾಡಲು ಜಠರಾಗ್ನಿಯನ್ನು ದೀಪ್ತಗೊಳಿಸಲು ಮತ್ತು ವೀರ್ಯವನ್ನು ಊರ್ಧ್ವಗತವಾಗಿ ಮಾಡಲು ಈ ಬಂಧವು ಉತ್ತಮವು. ಪ್ರಾಣಾಯಾಮ ಕಾಲದಲ್ಲಿ ' ಪೂರಕ ' ವನ್ನು ಮಾಡುವಾಗ ಈ ಬಂಧವನ್ನು ಉಪಯೋಗಿಸಬೇಕು.

ಉಡ್ಡೀಯಾನ ಬಂಧ : ಎರಡು ಅಂಗಾಲುಗಳೂ ಪರಸ್ಪರ ಸ್ಪರ್ಶಿಸುವಂತೆ, ಕಾಲುಗಳನ್ನು ಮಡಿಸಿ ಕುಳಿತು, ನಾಭಿಯ ಕೆಳಗಿನ ಮತ್ತು ಮೇಲಿನ 8 ಅಂಗುಲದ ಉದರದ ಭಾಗವನ್ನು ಬಲಪೂರ್ವಕ ಒಳಕ್ಕೆ ಎಳೆದುಕೊಂಡು ಬೆನ್ನು ಮೂಳೆಯೊಂದಿಗೆ ಹೊಟ್ಟೆಗೆ ಬದಲು ಒಂದು ಹಳ್ಳ ಕಂಡು ಬರುವಂತೆ

ಸೇರಿಸಬೇಕು. ಅಂಗಾಲುಗಳನ್ನು ಪರಸ್ಪರ ಸ್ಪರ್ಶಿಸದೆಯೂ ಈ ಬಂಧವನ್ನು ಸಾಧಿಸಬಹುದು.

ಇದರ ಫಲ : ಪ್ರಾಣ, ವೀರ್ಯಗಳ ಊರ್ಧ್ವಗತಿ ಮಂದಾಗ್ನಿನಾಶ ಕ್ಷುಧಾ ವೃದ್ಧಿ ಮತ್ತು ಶ್ವಾಸಕೋಶಗಳ ದಾರ್ಢ್ಯ.

'ರೇಚಕ' ಪ್ರಾಣಾಯಾಮ ಮಾಡುವಾಗ ಈ ಬಂಧವು ಉಪಕಾರಿ.

ಜಾಲಂಧರ ಬಂಧ : ಕೊರಳನ್ನು ತಗ್ಗಿಸಿ, ಗಲ್ಲವು ಹೃದಯದಿಂದ ಕೇವಲ 4 ಅಂಗುಲ ದೂರವಿರುವಂತೆ, ಅದನ್ನು ಕಂಠ ಕೂಪಕ್ಕೆ ಒತ್ತಿ ಹಿಡಿಯುವುದು ಮತ್ತು ಎದೆಯನ್ನು ಮುಂದಕ್ಕಿಡುವುದು. ಬಂಧವು ಕಂಠಸ್ಥಾನದ ನಾಡಿಗಳನ್ನು ಬಂಧಿಸುತ್ತದೆ. ಇದರಿಂದ ಧ್ವನಿಯು ಸುಸ್ವರವೂ, ಮಧುರವೂ ಆಗುವುದು. ಕಂಠ ಸಂಕೋಚನದಿಂದ ಇಡಾಪಿಂಗಳಾ ನಾಡಿಗಳು ಮುಚ್ಚಿಕೊಂಡು ಪ್ರಾಣವು ಸುಷುಮ್ನಾನಾಡಿಯಲ್ಲಿ ಪ್ರವೇಶಿಸುವುದು.

ಆಸನಗಳು, ಮುದ್ರೆಗಳು ಮತ್ತು ಬಂಧಗಳಲ್ಲದೆ, ಯೋಗದಲ್ಲಿ, ಶರೀರದ ಆಂತರಿಕ ಸಂಶೋಧನೆಗೆ ಅನೇಕ ' ಪ್ರಕ್ರಿಯೆ ' ಗಳನ್ನು ಹೇಳಿರುವರು.

ಉದಾಹರಣೆ : ಉಡ್ಡೀಯಾನ ಕ್ರಿಯೆ, ನೌಳೀಕ್ರಿಯೆ, ಬಸ್ತಿಕ್ರಿಯೆ, ನೇತಿಕ್ರಿಯೆ, ಧೌತಿಕ್ರಿಯೆ, ತ್ರಾಟಕ ಕ್ರಿಯೆ.

ಈ 6 ಕ್ರಿಯೆಗಳೂ ಹಠಯೋಗದಲ್ಲಿ ಪ್ರಧಾನಗಳು.

ಆಸನಪ್ರಾಣಾಯಾಮಗಳ ವಿಚಾರವನ್ನು ಮುಂದೆ ವಿಸ್ತಾರವಾಗಿ ತಿಳಿಸಲಾಗುತ್ತದೆ.

[ಯಾವುದೇ ಪ್ರಕಾರ ಪ್ರಾಣಾಯಾಮ ಮಾಡಬೇಕಾದರೂ ಮೊದಲು ಒಳಗಿನ ಶ್ವಾಸವನ್ನೆಲ್ಲಾ ಮೂಗಿನಿಂದ ಬಲಪೂರ್ವಕವಾಗಿ ಹೊರಡಿಸಿಯೇ ಕ್ರಿಯೆಯನ್ನು ಆರಂಭಿಸಬೇಕು.

ಪ್ರಾಣಾಯಾಮದಲ್ಲಿ ದುಡುಕು, ಹಠಗಳಿಗೆ ಅವಕಾಶ ಕೊಡದೆ ಗುರುಮುಖೇನ, ಕಷ್ಟವಿಲ್ಲದೆ ಎಷ್ಟು ಹೊತ್ತು ರೇಚಕ, ಕುಂಭಕ ಪೂರಕಗಳನ್ನು ಮಾಡಲು ಸಾಧ್ಯವೋ ಅಷ್ಟೇ ಹೊತ್ತು ಮಾಡುತ್ತಾ ಕ್ರಮ ಕ್ರಮವಾಗಿ ಕಾಲಾವಧಿಯನ್ನು ಹೆಚ್ಚಿಸಿಕೊಳ್ಳಬೇಕು. ಸದಾ ಮನಸ್ಸನ್ನು ಪ್ರಾಣಾಯಾಮಕ್ರಿಯೆಯಲ್ಲಿ ನಿಲ್ಲಿಸಿಯೇ ಪ್ರಾಣಾಯಾಮಮಾಡಬೇಕು

ಪ್ರಾಣಾಯಾಮವು ಪ್ರದರ್ಶನಕ್ಕಲ್ಲ ಈಶ್ವರ ದರ್ಶನಕ್ಕೆ. ಪ್ರಾಣಾಯಾಮ ಮಾಡುವವನು ' ಯಮ ' ' ನಿಯಮ ' ಗಳ ಅಭ್ಯಾಸ ಮಾಡಬೇಕು. ರಾತ್ರಿ ಭೋಜನ ವರ್ಜಿಸಿ, ಹಾಲು ಹಣ್ಣುಗಳನ್ನು ಸೇವಿಸಬೇಕು.

ಆಸನಪ್ರಾಣಾಯಾಮಗಳಿಂದ ಮನಸ್ಸನ್ನು ಏಕಾಗ್ರತೆಗೆ ತರಬೇಕು.

ಮನಸ್ಸೆಂಬ ಕೆರೆಯಲ್ಲಿನ 'ಶಕ್ತಿ' ಎಂಬ ನೀರನ್ನು ಹುಚ್ಚು ಹುಚ್ಚಾಗಿ ಹರಿಬಿಡುವ ಪಂಚಜ್ಞಾನೇಂದ್ರಿಯಗಳೆಂಬ ತೂಬುಗಳ, ವಿಷಯ ಸಂಬಂಧವೆಂಬ ಬಾಯನ್ನು ಮುಚ್ಚಿ, ಅವುಗಳ ಶಕ್ತಿಯನ್ನು ಮನಸ್ಸಿಗೆ ಹಿಂತಿರುಗಿಸಬೇಕು. ಇದೇ "ಪ್ರತ್ಯಾಹಾರವು"

ಇದರಲ್ಲಿ ಅಂತರ್ಮುಖೀವೃತ್ತಿಯು ಹೆಚ್ಚು ಕೆಲಸಮಾಡುವುದು.

ಹೀಗೆ ಚಕ್ರಗಳ ಮೂಲಕ ಕುಂಡಿಲಿನೀ ಶಕ್ತಿಯನ್ನು ಓಂಕಾರ ಧ್ಯಾನ ಪುರಸ್ಸರವಾಗಿ 'ಅ'ಕಾರದಲ್ಲಿ ಜಾಗೃತಗೊಳಿಸಿ ಮೇಲಕ್ಕೇರಿಸಬೇಕು. ಇದಕ್ಕೆ ಕುಂಡಲಿನೀಶಕ್ತಿಯೋಗವೆಂದು ಹೆಸರು. ಇಲ್ಲಿಗೆ ಕುಂಡಲಿನೀ ಶಕ್ತಿಯೋಗ ವಿಷಯ ಮುಗಿಯಿತು.

ಉಪಾಸನಾ

ಉಪಾಸನೆಯಲ್ಲಿ 2 ವಿಧ. 1) ನಿರ್ಗುಣೋಪಾಸನೆ
2) ಸಗುಣೋಪಾಸನೆ

ನಿರ್ಗುಣೋಪಾಸನೆ :

ನಿರ್ಗುಣ ಬ್ರಹ್ಮವು ನಿರಾಕಾರವಾದ್ದರಿಂದ ಅದರ ಉಪಾಸನೆ ಮಾಡುವುದು ಹೇಗೆ? ಬ್ರಹ್ಮಸೂತ್ರದಲ್ಲಿ ವ್ಯಾಸಮಹರ್ಷಿಗಳು ನಿರ್ಗುಣಬ್ರಹ್ಮದಲ್ಲಿ ನಿತ್ಯಶುದ್ಧ, ನಿತ್ಯಮುಕ್ತ, ನಿರಂಜನ, ಆನಂದ, ನಿತ್ಯಬುದ್ಧ, ವ್ಯಾಪಕ, ಪರ, ಚಿದೇಕರಸ, ಅದ್ವಿತೀಯ ಮುಂತಾದ ಗುಣಗಳನ್ನು ಗ್ರಹಿಸಿಕೊಂಡಾಗಲಿ, ಉಪಾಸನೆ ಮಾಡಬಹುದೆಂದಿದ್ದಾರೆ. ಗುಣಗಳು ಬ್ರಹ್ಮದಲ್ಲಿ ಇಲ್ಲದಿದ್ದರೂ, ಅವು ಬ್ರಹ್ಮವನ್ನು ನಿಲುಕಿಸಿಕೊಡುತ್ತವೆ. ಅಖಂಡೈಕರಸರೂಪವಾದ ಯಾವ ನಿರ್ಗುಣ ಬ್ರಹ್ಮವು, ಸಚ್ಚಿದಾನಂದರೂಪವಾದ ಇರತಕ್ಕ ಗುಣಗಳ ಮೂಲಕವೂ, ಸ್ಥೂಲ ಹ್ರಸ್ವಾದಿಗಳಲ್ಲವೆಂಬ ಇಲ್ಲದ ಗುಣಗಳ ಮೂಲಕವೂ ನಿಲುಕುವುದೋ, ಅದೇ ತಾನೆಂದೂ, ಮತ್ತು ತಾನೇ ಅದೆಂದೂ ಉಪಾಸನೆ ಮಾಡುವುದು ನಿರ್ಗುಣೋಪಾಸನೆಯು. ಷಟ್ಸಂಪತ್ತಿಯಲ್ಲಿನ 'ಸಮಾಧಾನ' ಸ್ಥಿತಿಯಲ್ಲಿ ಮನಸ್ಸು ನಿರ್ಗುಣ

ಬ್ರಹ್ಮದಲ್ಲಿ ಸ್ಥಾಪಿತವಾಗಿ, ಆ ನಿರ್ಗುಣಬ್ರಹ್ಮವೇ ತಾನೆಂದು ಸಾಧಕನು ಜಪಿಸಿದರೂ ಅವನಿಗೆ ಜೀವಬ್ರಹ್ಮರ ಅಭೇದವು ದೃಢವಾಗುವುದಿಲ್ಲ.

ಸಾಧನ ಚತುಷ್ಟಯವನ್ನು (ನಿತ್ಯಾನಿತ್ಯವಸ್ತುವಿವೇಕ, ವೈರಾಗ್ಯ, ಮುಮುಕ್ಷುತ್ವ ಶಮಾದಿ ಷಟ್ಸಂಪತ್ತಿ) ಪೂರ್ತಿ ಸಂಪಾದಿಸಿದ ಮೇಲೆಯೇ ಈ ಸಮಾಧಾನ ಚಿತ್ತನು, ನಿರ್ಗುಣೋಪಾಸನೆಯಿಂದ ಫಲವನ್ನು ದೃಢವಾಗಿ ಪಡೆಯುವನು. ಈ ನಿರ್ಗುಣೋಪಾಸನೆಯೇ 'ಅಹಂಗ್ರಹೋಪಾಸನೆ' ಅಥವಾ 'ಏಕಾಂತ ಭಕ್ತಿ' ಎನಿಸುವುದು. ಇದರಲ್ಲಿ ಸ್ವಸ್ವರೂಪ ಸಂಧಾನ ಹೇಗಿರಬೇಕೆಂಬುದನ್ನು 'ಯೋಗವಾಸಿಷ್ಠದ ನಿರ್ವಾಣ ಪ್ರಕರಣದಲ್ಲಿ ಹೀಗೆ ವಿವರಿಸಿದೆ.

'ಶುದ್ಧಾತ್ಮನಾದ ತಾನು ನಿಷ್ಕಲನು (ಭಾಗಗಳಿಲ್ಲದವನು) ಆದರೂ ಬುದ್ಧಿಯಲ್ಲಿ ಅಭಿಮಾನಿಸಿ ಸಕಲನು(ಭಾಗಗಳುಳ್ಳವನು) ಬುದ್ಧಿಯ ಉಪಾಧಿಯಿಂದ ತಾನು ದೇಹದಲ್ಲಿರುವವನು ಮಾಯೋಪಾಧಿಕನಾಗಿ ತಾನು ಆಕಾಶದ ತುಂಬ ತುಂಬಿರುವವನು, ಯಾವುದರಲ್ಲಿಯೂ ಆಸಕ್ತಿ ಇಲ್ಲದವನು ಆದರೆ ದೇಹಾಧ್ಯಾಸದಿಂದ ತಾನು ಎಲ್ಲದರಲ್ಲಿಯೂ ಆಸಕ್ತಿಯುಳ್ಳವನು, ನಿತ್ಯನು. ಅಂಗಾಂಗಗಳಲ್ಲಿ ಬೋಧರೂಪದಿಂದ ತಾನು ತುಂಬಿರುವವನು. ಬುದ್ಧಿಯಲ್ಲಿ ತಾನು ಬುದ್ಧಿಶಕ್ತಿಯಾಗಿರುವವನು. ಪ್ರಾಣಾಪಾನಗಳ ಮಧ್ಯದಲ್ಲಿ ತಾನು ಗೋಚರನಾಗುವವನು. ಹೃದಯ, ಕಂಠ ತಾಲು ಮಧ್ಯಗಳಲ್ಲಿ ಇರುವವನು. ಭ್ರೂಮಧ್ಯ ನಾಸಾಪುಟಗಳು ಎಂಬ ಪೀಠಗಳಲ್ಲಿ ಇರುವವನು. ಈ ರೀತಿ ತನ್ನ ಸ್ವರೂಪವನ್ನು ಧ್ಯಾನಿಸಬೇಕು. ಮತ್ತು ಮನಸ್ಸು ಎಂಬುವನು ತನ್ನ ದ್ವಾರಪಾಲಕನು. ಆ ದ್ವಾರಪಾಲಕನು ಜಗತ್ತ್ರಯಗಳಲ್ಲಿ ನಡೆಯುವುದನ್ನೆಲ್ಲಾ ತನಗೆ ತಿಳಿಸುತ್ತಾ, ತನ್ನ ಮನೆಯೆಂಬ ದೇಹದಲ್ಲಿ, ಬಾಗಲಲ್ಲಿ ನಿಂತಿರುವವನು. ಚಿಂತೆಯೆಂಬ ತನ್ನ ದೂತನು ಶುದ್ಧರೂಪದಿಂದ ಬಾಗಿಲಲ್ಲಿ ತನ್ನ ಅಪ್ಪಣೆಯನ್ನು ನಿರೀಕ್ಷಿಸುತ್ತಾ ನಿಂತಿರುವನು. ತನ್ನಿಂದಲೇ ಜನಿಸಿರುವ 'ಬುದ್ಧಿ' ಎಂಬ ಶಕ್ತಿಯು ತನಗಾಗಿ ಕೆಲಸ ಮಾಡುವುದು. ಚಿತ್ರ ವಿಚಿತ್ರವಾದ ಜ್ಞಾನಗಳು ತನ್ನ ಅಂಗಗಳಲ್ಲಿ ತೊಟ್ಟಿರುವ ಭೂಷಣಗಳು.

ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ದ್ವಾರಾ ತಾನು ದೇಶ ಕಾಲೋಪಾಧಿಗಳಿಂದ ತನ್ನ ಮೂಲ ಸ್ವಭಾವವನ್ನು ಬಿಟ್ಟು ಆಕೃತಿಯನ್ನು ವಹಿಸಿದಂತೆ ತೋರುತ್ತಿದ್ದರೂ, ತಾನೇ ಅನಂತನಾದ ಆತ್ಮನು. 'ಅಹಂ' ಶಬ್ದವಾಚ್ಯನಾದ ತಾನು ಈ ಬ್ರಹ್ಮಾಂಡವನ್ನೆಲ್ಲಾ ತುಂಬಿ ಏಕಾತ್ಮನಾಗಿ ಎಲ್ಲಕ್ಕೂ ಪೂರ್ಣತೆಯನ್ನು ಕೊಡುವ ಪೂರ್ಣನಾಗಿರುವನು. ಎಲ್ಲಾ ಪ್ರಾಣಿಗಳ ಒಳಗೂ

ಇರುವವನಾಗಿ, ಸರ್ವವೂ ತಾನೇ ಆಗಿ, ಇಷ್ಟಾರ್ಥ ಸಾಧನೆಗೆ ಏಕೈಕ ಸಾಧನ ವಾಗಿ ತಾನೇ ಇರುವೆನು.

ಚಿದ್ರೂಪಂ ಸೂರ್ಯಲಕ್ಷಾಭಂ ಸಮಸ್ತಾಭಾಸಭಾಸನಂ ।
ಅಂತಃಚಿತ್ಪ್ರಕಾಶಂ ತಂ ಅಹಂತಾ ಸಾರಮಾಶ್ರಯೇತ್ ॥

(ಯೋ. ವಾ. ನಿರ್ವಾಣ ಪ್ರಕರಣ 38 ನೇ ಸರ್ಗ 6 ನೇ ಶ್ಲೋಕ)

ಎಂಬಂತೆ ಚಿದ್ರೂಪನೂ, ಲಕ್ಷ ಸೂರ್ಯರಷ್ಟು ಪ್ರಕಾಶವುಳ್ಳವನೂ, ಬೆಳಗುವ ಸಮಸ್ತಕ್ಕೂ ಬೆಳಕು ಕೊಡುವವನೂ, ಅಂತಸ್ಥನಾಗಿ ಚಿತ್ಪ್ರಕಾಶದಿಂದ ಬೆಳಗುತ್ತಿರುವವನೂ; 'ಅಹಂ' ಎಂಬುದಕ್ಕೆ ಸಾರವಾಗಿರುವವನೂ, ತಾನೇ ಆಗಿ ರುವೆನು. ತಾನು ಅಸ್ತನಾಗುವುದಿಲ್ಲ, ಉದಯನಾಗುವುದೂ ಇಲ್ಲ, ವಿಕಾರ ರಹಿತನಾದ ಸರ್ವವೂ ತಾನೇ ಆಗಿರುವೆನು.

ಹೀಗೆ ತಿಳಿದಿರುವ ಬುದ್ಧಿಯಿಂದ ಸ್ವಸ್ವರೂಪಾನುಸಂಧಾನ ಮಾಡಬೇಕು.

ಜಗತ್ತಿನ ಸ್ಥಿತಿಗೆ ಕಾರಣವಾದ, ಮತ್ತು ಆ ಸ್ಥಿತಿಯಿಂದ ಸಂಭವಿಸುವ ಸಮಸ್ತ ವ್ಯಾಪಾರಗಳನ್ನೂ, ಆತ್ಮಾರಾಮನಾದ ತನಗೆ ಒಪ್ಪಿಸಿ, ಮೃತಿ, ಜೀವಿತ, ಸ್ವಪ್ನಾದಿಗಳಲ್ಲಿ ನಡೆಯುವ ಸಮಸ್ತ ಕಾರ್ಯಗಳ ಫಲಗಳನ್ನೂ ತನಗೇ ಸಮ ರ್ಪಿಸಿ ತನ್ನನ್ನು ಪೂಜಿಸಿ ಧ್ಯಾನಿಸಬೇಕು.

ದಾರಿದ್ರ್ಯೇಣಾಥ ರಾಜ್ಯೇನ ಪ್ರವಾಹಪತಿತಾತ್ಮನಾ ।
ವಿಚಿತ್ರಚೇಷ್ಟಾಪುಷ್ಪೇಣ ಶುದ್ಧಾತ್ಮಾನಂ ಸಮರ್ಚಯೇತ್ ।

(ಯೋ. ವಾ. ನಿರ್ವಾಣ ಪ್ರಕರಣ 39 ನೇ ಸರ್ಗ 48 ನೇ ಶ್ಲೋಕ)

ಎಂಬಂತೆ, ದರಿದ್ರನಾಗಲಿ, ರಾಜ್ಯ ಭೋಗಗಳನ್ನು ಭೋಗಿಸುತ್ತಲೇ ಇರಲಿ, ಪ್ರಾರಬ್ಧವಶದಿಂದ ಸಂಪ್ರಾಪ್ತನಾಗಿರುವ ತನ್ನ ಅವಸ್ಥೆಗೆ ಅನುಸಾರ ವಾಗಿ, ತಾನು ಮಾಡುವ ಚಿತ್ರವಿಚಿತ್ರಕಾರ್ಯರೂಪವಾದ ಪುಷ್ಪಗಳನ್ನು ತಾನೆಂಬ ಆತ್ಮಾರಾಮನಿಗೆ ಅರ್ಪಿಸಿ ಆತನನ್ನು ಧ್ಯಾನಿಸಬೇಕು.

ತನಗೆ ಪ್ರಾಪ್ತನಾಗಿರುವ ಭೋಗಗಳು ವಿಹಿತವಾಗಿರಲಿ, ನಿಷಿದ್ಧವಾಗಿ ರಲಿ, ಯಾವಾಗಲೂ ಅವುಗಳಲ್ಲಿ ತ್ಯಾಗಬುದ್ಧಿಯುಳ್ಳವನಾಗಿ, ವೈರಾಗ್ಯ ಸಂಪನ್ನ ನಾಗಿ ಶುದ್ಧನಾದ ಆತ್ಮಾರಾಮನನ್ನು ಅರ್ಚಿಸಬೇಕು. ವ್ಯವಹಾರದ ದೆಸೆಯಲ್ಲೂ ನಷ್ಟಗಳಲ್ಲಿಯೂ, ಪ್ರಾಪ್ತಿಗಳಲ್ಲಿಯೂ ನಿರ್ವಿಕಾರನಾಗಿರುವುದೇ ಆತ್ಮಾರಾಮನಿಗೆ ಬ್ರಹ್ಮಪ್ರಿಯವಾದ ಅರ್ಚನೆಯು.

ಅಯಂ ಸೋಽಹಮಯಂ ನಾಹಂ ವಿಭಾಗಮಿತಿ ಸಂತ್ಯಜೇತ್ ।
ಸರ್ವಂ ಬ್ರಹ್ಮೇತಿ ನಿಶ್ಚಿತ್ಯ ನಿತ್ಯಾತ್ಮಾರ್ಚಾವ್ರತಂ ಚರೇತ್ ॥
(ಯೋ. ವಾ. ನಿರ್ವಾಣ ಪ್ರಕರಣ 39 ನೇ ಸರ್ಗ ಶ್ಲೋಕ 49)

ಇದು ತಾನು ಇದು ತಾನಲ್ಲ ಎಂಬ ವಿಭಾಗವನ್ನು ಬಿಟ್ಟು, ಸರ್ವವೂ ಬ್ರಹ್ಮವೇ ಎಂದು ನಿಶ್ಚಯಿಸಿಕೊಂಡು ನಿತ್ಯವ್ರತವನ್ನು ಆಚರಿಸಬೇಕು.

ಅಲ್ಲದೆ ಅನಂತ ಶಕ್ತಿಯುತನೂ, ಅವಿದ್ಯೆಗೆ ನಿಯಂತೃವೂ, ಸರ್ವಪ್ರಪಂಚವನ್ನೂ ತಿಳಿದವನೂ, ಪರಿಪೂರ್ಣ ಆನಂದಘನನೂ, ಭಕ್ತೋದ್ಧಾರಕ್ಕಾಗಿ ಶ್ರೀ ರಾಮಕೃಷ್ಣಾದ್ಯನೇಕ ಅವತಾರಗಳನ್ನು ಧರಿಸಿದವನೂ, ಶಿವ, ವಿಷ್ಣು, ದೇವಿ, ಗಣಪತಿ, ಸುಬ್ರಹ್ಮಣ್ಯ, ಮುಂತಾದ ಅನೇಕ ದೇವತಾರೂಪಾತ್ಮಕನಾದವನ್ನು ಸುಗುಣ ಬ್ರಹ್ಮರೂಪದಲ್ಲಿ ತೋರಿಸಿಕೊಳ್ಳುವವನೂ, ತಾನೇ ಎಂದೂ, ನಿರ್ಗುಣ ಬ್ರಹ್ಮವನ್ನು ಉಪಾಸನೆ ಮಾಡಿದರೆ ಇಂತಹ ನಿರ್ಗುಣೋಪಾಸನೆಯೇ ಉತ್ತಮವಾದ ಏಕಾಂತ ಭಕ್ತಿ ಎನಿಸುವುದು.

ಸಮಸ್ತ ಕಾರ್ಯಗಳನ್ನೂ ಆ ಬ್ರಹ್ಮಕ್ಕೆ ಅರ್ಪಿಸಿ, ನಿಷ್ಕಾಮ ಕರ್ಮ ಮಾಡುತ್ತಾ, ಆ ಬ್ರಹ್ಮವನ್ನೇ ಅನನ್ಯ ಶರಣುಹೊಂದಿ, ಅದನ್ನೇ ನಿರಂತರ ಚಿಂತಿಸುತ್ತಾ, ಅದರ ಪ್ರೇಮದಿಂದ ಹುಟ್ಟಿದ ಮಹತ್ತಾದ ಆನಂದ ಸಮುದ್ರದಲ್ಲಿ ಮುಳುಗಿದರೆ ಉಪಾಸಕನ ಬುದ್ಧಿಯು ಜ್ಞಾನ ಪ್ರತಿಬಂಧಕವಾದ ಪಾಪಗಳನ್ನು ಕಳೆದುಕೊಂಡು, ಜ್ಞಾನಾನುಕೂಲವಾದ ಪುಣ್ಯಗಳಿಂದ ಯುಕ್ತವಾಗುತ್ತದೆ.

ಶಮ, ದಮ, ಸಮಾಧಾನ ಪೂರ್ವಕ ನಿಷ್ಕಾಮ ಕರ್ಮದಿಂದ ಹೊಳಪುಗೊಂಡ ನಿರ್ಗುಣ ಉಪಾಸನೆಯು ಬ್ರಹ್ಮಜ್ಞಾನಿಯಾದ ಗುರುವಿನ ಸಮೀಪದಲ್ಲಿ ಆಚರಿಸಲ್ಪಟ್ಟ ಶ್ರವಣ ಮನನಗಳಿಂದ ಸಂಸ್ಕಾರ ಹೊಂದುತ್ತದೆ.

ಹೀಗಾಗಲಾಗಿ ಇಂತಹ ಸಾಧಕನು ತನ್ನ ಸ್ವಚ್ಛವಾದ ಬುದ್ಧಿಯಲ್ಲಿ ನಿಧಿಧ್ಯಾಸನಗಳ ಸಾಧನೆಯಿಂದ ನಾನು ಬ್ರಹ್ಮನಾಗಿರುವೆನು.' ಎಂಬ ಸಾಕ್ಷಾತ್ಕಾರ ರೂಪವಾದ ವ್ಯಕ್ತಿಯನ್ನು ಪಡೆಯುವನು. ಇದೇ ಗುರುವಿನಿಂದ ಉಪದೇಶವಾಗುವ 'ತತ್ವಮಸಿ' ಎಂಬ ವೇದಾಂತ ಮಹಾವಾಕ್ಯಜನ್ಯ ಬ್ರಹ್ಮಜ್ಞಾನ.

ಇಂತಹ ಸಾಕ್ಷಾತ್ಕಾರವೆಂಬ ಬುದ್ಧಿ ವೃತ್ತಿಯಲ್ಲಿ ಚೈತನ್ಯವು ಪ್ರತಿಬಿಂಬಿಸಿದರೆ, ಸ್ವಾಶ್ರಯವೂ, ಸ್ವವಿಷಯವೂ, ಆದ ಕಾರಣಾವಿದ್ಯೆಯು ನಿವೃತ್ತಿಯಾಗುವುದು. ಆಗ ಆ ಕಾರಣಾವಿದ್ಯೆಯ ವೃತ್ತಿಯೂ ಅದರಿಂದ ಕೂಡಿದ ಸಮಸ್ತ ಕಾರ್ಯ ಪ್ರಪಂಚವೂ, ತನ್ನಷ್ಟಕ್ಕೆ ತಾನೇ ನಿವೃತ್ತವಾಗುವುದು.

ಜೀವನು ಸರ್ವ ಉಪಾದಿಗಳನ್ನೂ ಕಳೆದುಕೊಂಡು ಕೇವಲ ಸಚ್ಚಿದಾನಂದ ರೂಪದಲ್ಲಿ ನಿಲ್ಲುವನು.

ಇಂತಹ ನಿರ್ಗುಣೋಪಾಸನೆಯು ಮರಣಾದಿ ಕಾರಣಗಳಿಂದ ಸಾಕ್ಷಾತ್ಕಾರವಾಗುವವರಿಗೆ ಸಾಧಿತವಾಗದೇ ಹೋದರೂ ಅದು ಸಾಧಕನನ್ನು ಹಿರಣ್ಯಗರ್ಭಲೋಕಕ್ಕೆ ಕರೆದೊಯ್ದು ಅಲ್ಲಿ ಸಾಂಗವಾಗಿ ಸಾಕ್ಷಾತ್ಕಾರವನ್ನುಂಟುಮಾಡಿ ಮೋಕ್ಷವನ್ನು ಅಂದರೆ ನಿರ್ಗುಣ ಬ್ರಹ್ಮದಲ್ಲಿ ಏಕತ್ವವನ್ನು ಹೊಂದಿಸುತ್ತದೆ.

ರತ್ನದ ಕಾಂತಿಯನ್ನು ನೋಡಿ, ಆ ಕಾಂತಿಯೇ ರತ್ನವೆಂದು ಭ್ರಮಿಸಿ ರತ್ನವನ್ನು ಪಡೆಯಲು ಪ್ರಯತ್ನಿಸಿದ ಪುರುಷನಿಗೆ, ರತ್ನದ ಕಾಂತಿಯ ಮೂಲಕ ರತ್ನವೇ ದೊರತಂತೆ, ನಿರ್ಗುಣ ಬ್ರಹ್ಮದ ಉಪಾಸನೆಯಿಂದ ಸಾಧಕನಿಗೆ ನಿರ್ಗುಣ ಬ್ರಹ್ಮವೇ ಪ್ರಾಪ್ತಿಯಾಗುವುದು.

ಸದ್ಗುರು ಉಪದೇಶ ಮಾಡಿದರೂ, ಯಾವುದಾದರೂ ಪ್ರತಿಬಂಧಕದಿಂದ ನಿರ್ಗುಣ ಬ್ರಹ್ಮ ಸ್ವರೂಪವು, ಅನುಭವಕ್ಕೆ ಬಾರದೇ ಹೋದರೆ ಅವನು ಶ್ರುತಿ, ಗುರುಗಳ ವಾಕ್ಯ, ಇವುಗಳಲ್ಲಿ ನಂಬಿಕೆಯಿಟ್ಟು ತನ್ನ ನಿಜ ಸ್ವರೂಪವು ನಿರ್ಗುಣ ಬ್ರಹ್ಮವಾಗಿದೆಯೆಂದು ಸದಾ ಚಿಂತಿಸುತ್ತಿದ್ದರೆ, ಕೆಲವು ಕಾಲಗಳಲ್ಲಿ ಅತನಿಗಿದ್ದ ಸ್ವರೂಪ ಸಾಕ್ಷಾತ್ಕಾರ ಪ್ರತಿಬಂಧಕಗಳು ನಾಶವಾಗಿ ಅವನ ಬುದ್ಧಿಯು ಪರಿಶುದ್ಧವಾಗಿ ಅವನಿಗೆ ತನ್ನ ನಿರ್ಗುಣ ಬ್ರಹ್ಮ ಸ್ವರೂಪವು ಅನುಭವಕ್ಕೆ ಬರುವುದು.

ಅನುಭೂತೇರಭಾವೇಽಪಿ, ಬ್ರಹ್ಮಾಸ್ಮೀತ್ಯೇವ ಚಿಂತ್ಯತಾಂ ॥

ಎಂಬಂತೆ ಪರಬ್ರಹ್ಮ ಸ್ವರೂಪವು ತನ್ನ ಅನುಭವಕ್ಕೆ ಬಾರದೇ ಇದ್ದರೂ ತಾನು ಪರಬ್ರಹ್ಮನಾಗಿದ್ದೇನೆಂದು ಸದಾ ಚಿಂತಿಸುತ್ತಿದ್ದರೆ,

ಕೀಟ ಭ್ರಮರ ಯೋಗೇನ ಕೀಟೋಽಪಿ ಭ್ರಮರಾಯತೇ ॥

ಎಂಬ ಯುಕ್ತಿಯಂತೆ ಭ್ರಮರವಲ್ಲದ ಕೀಟವು ಭ್ರಮರ ಧ್ಯಾನದಿಂದ ಭ್ರಮರವಾಗುವಾಗ, ನಿರ್ಗುಣ ಬ್ರಹ್ಮ ಸ್ವರೂಪವೇ ಆಗಿರುವ ಪುರುಷನು ನಿರ್ಗುಣ ಬ್ರಹ್ಮನ ಉಪಾಸನೆ ಮಾಡಲು, ಅವನಿಗೆ ನಿರ್ಗುಣ ಬ್ರಹ್ಮ ಸ್ವರೂಪವು ಕ್ರಮ ಕ್ರಮವಾಗಿ ಸಾಕ್ಷಾತ್ಕಾರವಾಗುವುದರಲ್ಲಿ ಸಂದೇಹವಿಲ್ಲ.

ಇದನ್ನೇ ಜ್ಞಾನ ಪ್ರಸಾದೇನ ವಿಶುದ್ಧ ಸತ್ವಸ್ತತ ಸ್ತುತಂ ಪಶ್ಯತಿ ನಿಷ್ಕಲಂ ಧ್ಯಾಯಮಾನಃ ಎಂಬತೆ

ನಿರ್ಗುಣೋಪಾಸನೆಯಿಂದ ಯಾವನ ಚಿತ್ತವು ಪರಿಶುದ್ಧವಾಗಿದೆಯೋ ಅಂತಹ ಪುರುಷನು ನಿರ್ಗುಣ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಶ್ರೀಮದ್ಭಗವದ್ಗೀತೆಯಲ್ಲಿ ಜ್ಞಾನಕಾಂಡದಲ್ಲಿ ಹೇಳಿರುವ ಸಗುಣೋಪಾಸನೆ ಮತ್ತು ನಿರ್ಗುಣೊಪಾಸನೆಗಳ ಮುಖ್ಯ ಫಲವು ಚಿತ್ತೈಕಾಗ್ರತಾದ್ವಾರ ಬ್ರಹ್ಮಸಾಕ್ಷಾತ್ಕಾರವೇ ಆಗಿರುತ್ತೆ.

ಬ್ರಹ್ಮಲೋಕಾದಿ ಪ್ರಾಪ್ತಿಯು ಉಪಾಸನೆಗೆ ಅವಾಂತರ ಫಲವೇ ವಿನಾ ಮುಖ್ಯ ಫಲವಲ್ಲ. ಈ ವಿಷಯವನ್ನೇ ಮುಂದಿಟ್ಟುಕೊಂಡು ಬ್ರಹ್ಮ ಸೂತ್ರದಲ್ಲಿ ವ್ಯಾಸರು ಉಪಾಸನೆಗಳ ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ.

ಇದುವರೆಗೆ ನಿರ್ಗುಣೋಪಾಸನೆಯ ವಿಷಯವು ಪೂರೈಸಿತು.

ಸಗುಣ ಬ್ರಹ್ಮೋಪಾಸನೆ

" ಕ್ಲೇಶೋಧಿಕತರಸ್ತೇಷಾಮವ್ಯಕ್ತಾಸಕ್ತ ಚೇತಸಾಮ್ "

ಎಂಬ ಭಗವದ್ಗೀತೋಕ್ತಿಯಂತೆ ನಿರ್ಗುಣ ಬ್ರಹ್ಮೋಪಾಸನೆಯು ದೇಹಾಭಿಮಾನವುಳ್ಳವರಿಗೆ ಸುಲಭವಲ್ಲ ಯಮ, ನಿಯಮಾದಿಗಳಿಲ್ಲದೆ, ಪ್ರಾರಂಭದಲ್ಲಿಯೇ ಈ ಉಪಾಸನೆಯನ್ನು ಸಾಧಿಸುವುದು ಅತಿ ಪ್ರಯಾಸ. ನಿತ್ಯಾನಿತ್ಯವಸ್ತು ವಿವೇಕ, ವೈರಾಗ್ಯ, ಶಮಾದಿ ಷಟ್ಸಂಪತ್ತಿ ಮೋಕ್ಷೇಚ್ಛೆಗಳೆಂಬ ಸಾಧನಗಳಿಂದ ಕೂಡಿ ಶ್ರವಣ, ಮನನ, ನಿದಿಧ್ಯಾಸನಗಳನ್ನು ಸಾಧಿಸಲು ಸರ್ವಕರ್ಮ ಸಂನ್ಯಾಸ, ಗುರೂಪದೇಶ, ಮಹಾವಾಕ್ಯ ವಿಚಾರ, ಈಶ್ವರಾನುಗ್ರಹಗಳನ್ನು ಪಡೆಯಬೇಕು. ಇವುಗಳು ಅತಿ ಪ್ರಯಾಸದಿಂದ ಸಿದ್ಧಿಸತಕ್ಕವುಗಳು.

ಆದ ಕಾರಣ, ಶ್ರೀಕೃಷ್ಣನು ' ಅಭ್ಯಾಸೇಪ್ಯಸಮರ್ಥೋಸಿ ಮತ್ಕರ್ಮ ಪರಮೋಭವ ' ಎಂದು ಹೇಳಿರುವಂತೆ, ಚಿತ್ತಶುದ್ಧಿಗಾಗಿ ಪ್ರಥಮದಲ್ಲಿ ಸಗುಣ ಬ್ರಹ್ಮೋಪಾಸನೆಯನ್ನು ಮಾಡಬೇಕು

ಉಪನಿಷತ್ತುಗಳಲ್ಲಿ ಸಗುಣಬ್ರಹ್ಮೋಪಾಸನೆಗಳನ್ನು ಅಲ್ಲಲ್ಲಿ ಹೇಳಿವೆ. ಛಾಂದೋಗ್ಯದಲ್ಲಿ ಪಂಚಾಗ್ನಿ ಉಪಾಸನೆ, ಉದ್ಗೀಥೋಪಾಸನೆ (ಪ್ರಾಣೋಪಾಸನೆ) ಓಂಕಾರೋಪಾಸನೆಗಳಿವೆ. ಬೇರೆ ಕಡೆಗಳಲ್ಲಿ ಹಿರಣ್ಯಗರ್ಭೋಪಾಸನೆ ಶಾಂಡಿಲ್ಯ ಉಪಾಸನೆ, ' ತದ್ವನ ' ಉಪಾಸನೆಗಳಿವೆ. ಈಶಾವಾಸ್ಯದಲ್ಲಿ ವ್ಯಾಕೃತ ಅವ್ಯಾಕೃತ ಉಪಾಸನೆಗಳನ್ನು ಹೇಳಿದೆ. ಕಠೋಪನಿಷತ್ತಿನಲ್ಲಿ ಓಂಕಾರವನ್ನು ಬ್ರಹ್ಮನಿಗೆ ವಾಚಕವೂ, ಪ್ರತೀಕವೂ. ಆಗಿ ಅಳವಡಿಸಿವೆ.

ಈ ಉಪಾಸನೆಗಳು ಬ್ರಹ್ಮ ಸೂತ್ರದ ಮೂರನೇ ಅಧ್ಯಾಯದಲ್ಲಿ ಚರ್ಚಿತವಾಗಿವೆ. ಆದರೆ, ಈಗ ನೋಡುವಲ್ಲಿ ಇಂತಹ ವೈದಿಕ ಉಪಾಸನೆಗಳ ಅನುಷ್ಠಾನವು, ಬಹಳ ಅಪರೂಪವಾಗಿ, ಕೇವಲ ತಂತ್ರ ಶಾಸ್ತ್ರಕ್ಕೆ ಸಂಬಂಧಿಸಿದ ಉಪಾಸನೆಗಳೇ ಅನುಷ್ಠಾನದಲ್ಲಿ ಕಂಡು ಬರುತ್ತಿವೆ. ಈ ವೈದಿಕ ಉಪಾಸನೆಗಳನ್ನು ಸಾಧಿಸಿದವರು, ದೇಹಪಾತವಾಗುತ್ತಲೂ, ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ, ಅಲ್ಲಿ ನಿರ್ಗುಣ ಬ್ರಹ್ಮ ವಿಚಾರ ಸಾಧನೆಗಳಿಂದ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯುವರು.

2) ನಿತ್ಯಕರ್ಮದೊಡನೆ, ತಾಂತ್ರಿಕ ಸಗುಣ ಉಪಾಸನೆ ಮಾಡಿದವರು ಚಿತ್ತ ಶುದ್ಧಿಯನ್ನೂ ಪರಮೇಶ್ವರನ ಅನುಗ್ರಹವನ್ನೂ ಪಡೆದು ಸಾಧನ ಚತುಷ್ಟಯ ಸಂಪನ್ನರಾಗಿ ಮುಕ್ತಿ ಪಥದಲ್ಲಿ ಕ್ರಮ ಕ್ರಮವಾಗಿ ಮುಂದೆ ಸಾಗುತ್ತಾರೆ.

ಸಗುಣೋಪಾಸನೆಯಲ್ಲಿ ಫಲಾಕಾಂಕ್ಷಿಗಳಾದ ಮಂದಮತಿಗಳಿಗೆ, ತಾವು ಯಾವ ಯಾವ ಆಕಾರದಿಂದ, ಸಗುಣ ಮೂರ್ತಿಯನ್ನು ಉಪಾಸಿಸಿ ಸಾಕ್ಷಾತ್ಕರಿಸಿಕೊಳ್ಳುವರೋ, ಆಯಾ ಆಕಾರದಿಂದ ಆ ಮೂರ್ತಿಯು ಪ್ರಸನ್ನನಾಗಿ ಅವರವರ ಇಷ್ಟಾರ್ಥಗಳನ್ನು ಕೊಡುತ್ತಾನೆ.

ಇದನ್ನೇ ಗೀತೆಯಲ್ಲಿ,

ಯೋಯೋ ಯಾಂಯಾಂ ತನುಂಭಕ್ತ ಶ್ರದ್ಧಯೋರ್ಚಿತುಮಿಚ್ಛತಿ ।
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವವಿದ ಧಾಮ್ಯಹಮ್ ॥

ಎಂದು ಹೇಳಿದೆ.

ಸಾಧಕನಿಗೆ ತಾನು ಮಾಡುವ ಭಾವನೆಯ ತಾರತಮ್ಯದಿಂದ ಸಾರ್ಷ್ಟಿ ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಎಂಬ 4 ವಿಧ ಫಲಗಳು ಪ್ರಾಪ್ತವಾಗುವುವು.

ಅವನು ತನ್ನ ಮಂದ ಭಾವನೆಗಳ ತಾರತಮ್ಯಗಳಿಗೆ ಅನುಸಾರವಾಗಿ ಮೇಲ್ಕಂಡ 4 ಫಲಗಳಲ್ಲಿ ಯಾವುದಾದರೂ ಒಂದನ್ನು ಹೊಂದುವನು.

ಕೈಲಾಸ, ವೈಕುಂಠ, ಸತ್ಯಲೋಕ, ದೇವಿಲೋಕ, ಎಂಬ ಲೋಕಗಳಿಲ್ಲದೆ. ಹಿರಣ್ಯಗರ್ಭಲೋಕ ಒಂದೇ ಇರುತ್ತದೆ. ಪರಮೇಶ್ವರನನ್ನು ವಿಷ್ಣುರೂಪದಿಂದ ಉಪಾಸನೆ ಮಾಡಿದರೆ, ಹಿರಣ್ಯಗರ್ಭನೇ ವಿಷ್ಣುರೂಪದಿಂದ ತೋರುವನು. ಹಿರಣ್ಯಗರ್ಭ ಲೋಕವೇ ಆ ಸಾಧಕನಿಗೆ ವೈಕುಂಠವಾಗಿ ತೋರುವುದು ಪರಮೇಶ್ವರನನ್ನು ಶಿವರೂಪದಿಂದ ಉಪಾಸನೆ ಮಾಡಿದರೆ ಹಿರಣ್ಯಗರ್ಭನು ಶಿವರೂಪದಿಂದಲೇ ತೋರುವನು. ಹಿರಣ್ಯಗರ್ಭ ಲೋಕವೇ ಆ ಉಪಾಸಕನಿಗೆ ಕೈಲಾಸವಾಗಿ ತೋರುವುದು. ನಿಜವಾಗಿ ನೋಡುವಲ್ಲಿ ಈ ಲೋಕಗಳೆಲ್ಲಾ ಮಾಯಿಕ ಸಾಧಕನು ಈ ಲೋಕಗಳಲ್ಲಿ ಸುಖವನ್ನು ಅನುಭವಿಸಿಯಾದ ಮೇಲೆ, ಪುನಃ 'ಆ ಬ್ರಹ್ಮ ಭುವನಾಲ್ಲೋಕಾತ್ ಪುನರಾವರ್ತಿನೋರ್ಜುನ' ಎಂಬ ಗೀತೋಕ್ತಿಯಂತೆ ಭೂಲೋಕಕ್ಕೆ ಹಿಂತಿರುಗುವನು.

ಸಗುಣೋಪಾಸನೆಯಿಂದ ಆತ್ಮಸಾಕ್ಷಾತ್ಕಾರಕ್ಕೆ ಮಾರ್ಗನಕ್ಷೆ

1) ಆತ್ಮ ಸಾಕ್ಷಾತ್ಕಾರ (ಸಗುಣೋಪಾಸನೆಯ ಕೊನೆಯ ಗುರಿ)

2) ನಿಧಿ ಧ್ಯಾಸನ ಸಮಾಧಿಗಳು

3) ಮನನ

4) ಶ್ರವಣ (ಸದ್ಗುರು ಮುಖೇನ ವೇದಾಂತ ಮಹಾವಾಕ್ಯಾರ್ಥ ವಿಚಾರ ಶ್ರವಣ)

5) ನಿರ್ಗುಣೋಪಾಸನೆ (ಏಕಾಂತಭಕ್ತಿ, ಅಹಂಗ್ರಹೋಪಾಸನೆ)

6) ಸಾಧನ ಚತುಷ್ಟಯ (ನಿತ್ಯಾ ನಿತ್ಯವಸ್ತು ವಿವೇಕ, ವೈರಾಗ್ಯ ಶಮಾಧಿಷಟ್ಸಂಪತ್ತಿ, ಮುಮುಕ್ಷುತ್ವ)

ನಿತ್ಯಾ ನಿತ್ಯವಸ್ತು   ವೈರಾಗ್ಯ   ಶಮಾಧಿಷಟ್ಸಂಪತ್ತಿ   ಮುಮುಕ್ಷುತ್ವ

ಶಮಾಧಿಷಟ್ಸಂಪತ್ತಿ:

ಶಮ   ದಮ   ಉಪರತಿ   ತಿತಿಕ್ಷ   ಶ್ರದ್ಧ   ಸಮಾಧಾನ

(ನಿರ್ಗುಣ ಬ್ರಹ್ಮದಲ್ಲಿ ಮನಸ್ಸನ್ನು ಚೆನ್ನಾಗಿ ಸ್ಥಾಪಿಸುವುದು. ಇದೇ ಸಾಧನ ಚತುಷ್ಟಯದ ಗುರಿ.

7) ದುರಿತಕ್ಷಯ, ಚಿತ್ತಶುದ್ಧಿ ಪರಮೇಶ್ವರರ ಅನುಗ್ರಹದ ಸಾಧನೆಗಳು

A. ಉಪನಿಷತ್ತುಗಳಲ್ಲಿ ಸಗುಣ ಉಪಾಸನೆಗಳು

B. ಪ್ರಾಣಾಯಾಮ, ಪ್ರಣವ, ಗಾಯತ್ರೀ ಜಪಪೂರ್ವಕ, ಸಂಧ್ಯಾ ನಿತ್ಯಕರ್ಮ, ತದಂಗಗಳಾದ ಸ್ನಾನ, ಭಸ್ಮ ಧಾರಣಾದಿಗಳು ಶಾಸ್ತ್ರರೀತ್ಯಾ ನಿತ್ಯಕರ್ಮಗಳೆಂದರೆ ಸಂಧ್ಯೆ, ಸ್ನಾನಂ ಜಪೋ ಹೋಮೋ ದೇವತಾರ್ಚನಮೇವ ಚ, ಆತಿಥ್ಯಂ ವೈಶ್ವ ದೇವಂಚ ಷಟ್ಕರ್ಮಾಣಿ ದಿನೇ ದಿನೇ ಎಂಬುವು.

C. ತಾಂತ್ರಿಕ ಜಪ, ಪಾರಾಯಣಾದಿಗಳು.

D. ದೇವತಾರ್ಚನೆ, ಮೂರ್ತಿಪೂಜೆ ಮತ್ತು ಮೂರ್ತಿಧ್ಯಾನ ದರ್ಶನ ಸೇವಾದಿಗಳು.

E. ಪುರಾಣ ಶ್ರವಣ, ಪರಮಾತ್ಮ ಗುಣಗಾನ, ಹರಿಕಥಾ ಶ್ರವಣಾದಿಗಳು

F. ಶ್ರವಣ ದೇವತಾ ಸ್ತೋತ್ರಾದಿ ಶ್ರವಣ.

G. ಕೀರ್ತನ.

H. ಸ್ಮರಣ.

I. ಪಾದಸೇವನ.

J. ಅರ್ಚನ.

K. ವಂದನ.

L. ದಾಸ್ಯ.

M. ಸಖ್ಯ.

N. ಆತ್ಮ ನಿವೇದನ.

1) ಪ್ರಥಮತಃ ದುರಿತ ಕ್ಷಯ, ಪರಮೇಶ್ವರ ಪ್ರೀತಿ, ಚಿತ್ತ ಶುದ್ಧಿಗಳಿಗಾಗಿ ಮಾಡುವ ಸಮಸ್ತ ಕರ್ಮ, ಭಕ್ತಿ ಉಪಾಸನೆಗಳನ್ನೂ, ನಿತ್ಯಕರ್ಮಗಳೊಡನೆ ನಿಷ್ಕಾಮನಿಯಿಂದ ಅಂದರೆ ಫಲಾಪೇಕ್ಷೆಯಿಲ್ಲದೆ ಕೇವಲ ಪರಮೇಶ್ವರ ಪ್ರೀತ್ಯರ್ಥವಾಗಿ, ಶ್ರದ್ಧೆಯಿಂದ, ವಿಧಿ ಪೂರ್ವಕವಾಗಿ ಆಚರಿಸಿದರೆ, ಅವು ಫಲದಾಯಕವಾಗುವುದರಲ್ಲಿ ಸಂದೇಹವಿಲ್ಲ.

ಸಾಧಕನು ಚಿತ್ತಶುದ್ಧಿಯ ನಂತರ ಸಾಧನ ಚತುಷ್ಟಯವನ್ನು ಸಂಪಾದಿಸುತ್ತಾ, ಮುಂದೆ ಹೊರಟನೆಂದರೆ, ಕ್ರಮ ಕ್ರಮವಾಗಿ ಕೊನೆಗೆ ಆತ್ಮ ಸಾಕ್ಷಾತ್ಕಾರವನ್ನು ಪಡೆಯುವನು.

ಹೀಗೆ ಸಾಧನೆಯಲ್ಲಿ ಶ್ರದ್ಧೆಯಿಂದ ನಿರತನಾದವನು, ಸಾಧನಾಮಧ್ಯದಲ್ಲಿ ಮರಣ ಹೊಂದಿದರೂ, ಅವನಿಗೆ ಮೋಕ್ಷ ಸಾಧನೆಗೆ ಅನುಕೂಲವಾಗುವಂಥ ಉತ್ತಮ ಗತಿಯು ದೊರಕುವುದು.

ಮೇಲ್ಕಂಡವುಗಳನ್ನು ಕೇವಲ ಇಹ ಮತ್ತು ಸ್ವರ್ಗ ಫಲಕ್ಕಾಗಿ ಆಚರಿಸಿದರೆ, ಕೇವಲ ಅಲ್ಪ ಸ್ವಲ್ಪ ಫಲಗಳು ದೊರಕಿ ಅವುಗಳು ತೀರಿದ ಮೇಲೆ ಸಾಧಕನು ತನ್ನ ಪ್ರಾರಬ್ಧಾನುಸಾರ ಜನ್ಮವೆತ್ತುವನು. ಶ್ರದ್ಧೆಯಿಲ್ಲದೇ ಮಾಡಿದರಂತೂ ಅವನಿಗೆ ಯಾವ ಫಲವೂ ದೊರೆಯುವುದಿಲ್ಲ.

2) ಉಪನಿಷತ್ತುಗಳಲ್ಲಿನ ಸಗುಣೋಪಾಸನೆ ವಿಷಯ ಮೇಲೆಯೇ ತಿಳಿಸಿದೆ.

ಸಂಧ್ಯಾವಂದನ

3) ಪ್ರಾಣಾಯಾಮ, ಪ್ರಣವ, ಗಾಯತ್ರೀಜಪ ಪೂರ್ವಕ, ಸಂಧ್ಯಾ ವಂದನಾದಿ ನಿತ್ಯಕರ್ಮಗಳ ವಿಷಯ ಹೇಳುವುದಾದರೆ :—

ಉಪನಿಷತ್ತುಗಳಲ್ಲಿ ಉಕ್ತನಾದ ಸಗುಣೋಪಾಸನೆಗಳಿಗೆ ಪ್ರತೀಕವಾಗಿ ನಿರ್ಗುಣ ಬ್ರಹ್ಮ ಧ್ಯಾನಕ್ಕಾಗಿ ಮಹರ್ಷಿಗಳು ಬ್ರಾಹ್ಮಣನಿಗೆ ಗರ್ಭಾಷ್ಟಮದಿಂದ ಆಚರಿಸಲು ಅನುಕೂಲಿಸುವಂತೆ ಸಂಧ್ಯಾವಂದನ, ಗಾಯತ್ರೀ ಜಪಗಳನ್ನು ನಿತ್ಯ ಕರ್ಮವನ್ನಾಗಿ ತಿಳಿದು ವಿಧಿಸಿರುತ್ತಾರೆ.

ಅಲ್ಲದೆ ಇವುಗಳನ್ನು ಆಚರಿಸದೆ ಬಿಟ್ಟರೆ, 'ಪ್ರತ್ಯವಾಯ' ಉಂಟೆಂದು ತಿಳಿಸಿರುತ್ತಾರೆ. ಇವು ತೈತ್ತರೀಯ ಉಪನಿಷತ್ತಿನ ಚತುರ್ಥ ಪ್ರಶ್ನೆಯಲ್ಲಿಯೂ. ಇನ್ನೂ ಹಲವು ಕಡೆಗಳಲ್ಲಿಯೂ ಉಕ್ತವಾಗಿ ವೈದಿಕ ಉಪಾಸನೆಗಳೇ ಆಗಿರುತ್ತವೆ.

ಅಲ್ಲದೆ: ಗಾಯತ್ರಿಯು ಸಮಸ್ತ ವೇದಗಳ ಸಾರನೆಂದೂ ಮಂತ್ರರಾಜನೆಂದೂ ಪ್ರಸಿದ್ಧವಾಗಿದೆ. 'ಸಂಧ್ಯಾಯೇ ನಾದುಪಾಸೀತಾ ಮೃತಃ ಶ್ವಾನಾಭಿಜಾಯತೇ' ಅಂದರೆ ಸಂಧ್ಯಾ ಕರ್ಮವನ್ನು ಆಚರಿಸದ ಬ್ರಾಹ್ಮಣನು ಸತ್ತಮೇಲೆ ನಾಯಿ ಜನ್ಮವನ್ನು ತಾಳುವನೆಂದೂ, ಸಂಧ್ಯಾ ಹೀನೋಽಶುಚಿರ್ನಿತ್ಯಂ। ಅನರ್ಹಸ್ಸರ್ವ ಕರ್ಮಸು। ಅಂದರೆ ಸಂಧ್ಯಾ ಕರ್ಮವನ್ನು ಬಿಟ್ಟವನು ನಿತ್ಯವೂ ಅಶುಚಿಯು ಮತ್ತು ಯಾವ ಕರ್ಮಕ್ಕೂ ಯೋಗ್ಯನಲ್ಲ.

ಈ ಸಂಧ್ಯಾಕರ್ಮವು ಫಲಾಪೇಕ್ಷೆಗಳಿಲ್ಲದೆ, ಕೇವಲ ದುರಿತ ಕ್ಷಯ, ಚಿತ್ತಶುದ್ಧಿ, ಪರಮೇಶ್ವರ ಪ್ರೀತಿಗಾಗಿ ಆಚರಣೀಯವಾಗಿದೆ.

ಇದರಲ್ಲಿ ಅಂತಃಶುದ್ಧಿ, ಬಹಿಶ್ಶುದ್ಧಿಗಾಗಿ, ಸ್ನಾನ ವಿಧಿ, ಭಸ್ಮಧಾರಣ ವಿಧಿ, ಆಚಮನ, ಪ್ರೋಕ್ಷಣಗಳನ್ನೂ, ಚಿತ್ತೈಕಾಗ್ರತೆಗಾಗಿ ಪ್ರಾಣಾಯಾಮವನ್ನೂ ಪರಮೇಶ್ವರನ ಪ್ರೀತಿ ಸಂಪಾದನೆಗಾಗಿ, ಅರ್ಘ್ಯ, ದೇವತಾ ಸ್ತೋತ್ರ, ದೇವತಾ ನಮಸ್ಕಾರ, ಉಪಸ್ಥಾನಾದಿಗಳನ್ನೂ, ಸಾಧನ ಚತುಷ್ಟಯದಲ್ಲಿನ 'ಸಮಾಧಾನ' ಸ್ಥಿತಿಯನ್ನು (ಅಂದರೆ ನಿರ್ಗುಣ ಬ್ರಹ್ಮದಲ್ಲಿ ಮನಸ್ಸನ್ನು ಸ್ಥಾಪಿಸುವಿಕೆಯನ್ನು) ಸಾಧಿಸಲು ಗಾಯತ್ರೀ ಜಪವನ್ನು ವಿಧಿಸಿರುತ್ತಾರೆ.

ಈ ಗಾಯತ್ರೀ ಮಂತ್ರವು ಬ್ರಾಹ್ಮಣನಿಗೆ ನಿತ್ಯಾನುಷ್ಠಾನ ಮಂತ್ರವು. ಇದು ನಿರ್ಗುಣ ಬ್ರಹ್ಮವನ್ನು ಪ್ರತಿಪಾದಿಸುತ್ತದೆ.

'ಸರ್ವ ದೇವತಾತ್ಮನೂ, ಸರ್ವಾವಭಾಸಕನೂ, ತೇಜೋಮಯನೂ, ಆದ ಪರಮಾತ್ಮನ ಸರ್ವಾತ್ಮಕತ್ವವನ್ನು ಪ್ರಕಾಶ ಪಡಿಸಲು, ಸರ್ವಾತ್ಮಕ ಬ್ರಹ್ಮ ಪ್ರತಿಪಾದಕವಾದುದು ಈ ಗಾಯತ್ರೀ ಮಂತ್ರವು.

ಪ್ರಣವವೇ ಆದಿಯಾಗಿ, ಸಪ್ತವ್ಯಾಹೃತಿಗಳಿಂದಲೂ, ಶಿರಸ್ಸಿನಿಂದಲೂ ಕೂಡಿರುವ ಈ ಗಾಯತ್ರಿಯನ್ನು ಪ್ರಾಣಾಯಾಮದಿಂದಲೂ, ವ್ಯಾಹೃತಿಗಳಿಂದಲೂ ಉಪಾಸನೆ ಮಾಡಬೇಕು.

ಇದರಲ್ಲಿ ಶುದ್ಧ ಗಾಯತ್ರಿಯು ಜೀವ ಬ್ರಹ್ಮೈಕ್ಯವನ್ನು ಬೋಧಿಸುತ್ತದೆ. ಈ ಮಂತ್ರದಲ್ಲಿನ 'ಧಿಯೋ ಯೋನಃ ಪ್ರಚೋದಯಾತ್' ಎಂಬುದರಿಂದ ನಮ್ಮ ಬುದ್ಧಿಯನ್ನು ಅಂದರೆ ಸರ್ವಬುದ್ಧಿ ಸಂಜ್ಞಕವಾದ ನಮ್ಮ ಅಂತಃಕರಣವನ್ನು ಪ್ರೇರಿಸಲಿ ಅಂದರೆ ಪ್ರಕಾಶಿಸಲಿ ಎಂದರ್ಥವಾಗುತ್ತದೆ. ಈ ಗಾಯತ್ರೀ ವಿಷಯದಲ್ಲಿ ಮುಂದೆ 'ಪ್ರಾಣಾಯಾಮ' ವಿಷಯವನ್ನು ತಿಳಿಸುವಾಗ ಹೆಚ್ಚು ಸಂಗತಿಗಳನ್ನು ಹೇಳಿದೆ.

ಭಾಗವತಧರ್ಮಗಳು

ಚಿತ್ತಶುದ್ಧಿ, ಚಿತ್ತೈಕಾಗ್ರತೆ, ಪರಮೇಶ್ವರನ ಅನುಗ್ರಹಗಳು ಶೀಘ್ರವಾಗಿ ಬಲಯುಕ್ತವಾಗಿ ಸಾಧನವಾಗಲು ಸಾಧಕನಿಗೆ ಈ ಸಂಧ್ಯಾನಿತ್ಯ ಕರ್ಮದ ಜೊತೆಗೆ ಇತರ ನಿಷ್ಕಾಮ ಸಗುಣೋಪಾಸನೆಗಳು ಅಂದರೆ ತಾಂತ್ರಿಕ ಜಪಪಾರಾಯಣಾದಿಗಳು ದೇವತಾರ್ಚನೆ ಭಕ್ತಪ್ರಧಾನವಾದ ಭಾಗವತ ಧರ್ಮಗಳು ಪುರಾಣ ಹರಿಕಥಾ ಶ್ರವಣಾದಿಗಳು, ಪರಮಾತ್ಮನ ಗುಣಗಾನಗಳು ತೀರ್ಥ ಯಾತ್ರಾದಿಗಳು ಸಹಾಯವಾಗುತ್ತವೆ.

ಕೇವಲ ಮಂದಮತಿಯಾದವನು, ನಿಷ್ಕಾಮಕರ್ಮ ಮಾಡುತ್ತಾ ತನ್ನಲ್ಲಿರುವ ಶ್ರದ್ಧಾಭಕ್ತಿ, ಆಸ್ತಿಕತೆಗಳಿಂದ, ಪುರಾಣ, ಹರಿಕಥಾಶ್ರವಣ, ಭಗವಂತನ ಗುಣಗಾನ ಶ್ರವಣಾದಿಗಳಲ್ಲಿ, ತತ್ಪರನಾಗಿರುತ್ತಾ ಬಂದು ಕ್ರಮಕ್ರಮವಾಗಿ ಭಾಗವತ ಧರ್ಮವನ್ನು ಆಚರಿಸುತ್ತಾ ಬಂದರೆ ದುರಿತಗಳು ಕ್ಷಯವಾಗಿ, ಚಿತ್ತಶುದ್ಧಿಯಾಗಿ, ಪರಮೇಶ್ವರನ ಅನುಗ್ರಹವಾಗಿ ಮೋಕ್ಷ ಮಾರ್ಗದತ್ತ ಸಾಗಲು ಯೋಗ್ಯನಾಗುತ್ತಾನೆ.

ಭಗವಂತನ ಪ್ರತಿಮೆಗಳಲ್ಲಿ ಈಶ್ವರ ಬುದ್ಧಿಯನ್ನಿಟ್ಟು ಅವುಗಳಿಗೆ ಅನನ್ಯ ಶರಣತೆಯಿಂದಲೂ, ನಿರತಿಶಯ ಪ್ರೀತಿಯಿಂದಲೂ, ಸಾತ್ವಿಕವಾದ ಶ್ರದ್ಧೆಯಿಂದಲೂ ಪೂಜಾದಿಗಳನ್ನು ಸಲ್ಲಿಸುವುದೇ ಭಾಗವತ ಧರ್ಮವು.

ಅಜ್ಞಾನಂ ಭಾವನಾರ್ಥಾಯ ಪ್ರತಿಮಾಂ ಪರಿಕಲ್ಪಿತಾಂ ।

ಎಂಬ ಸೂತ ಸಂಹಿತೋಕ್ತಿಯಂತೆ, ಮಂದಮತಿಗಳಿಗೆ ಅಂತಃಕರಣ ವೃತ್ತಿಗಳು ವಿಷಯ ಪ್ರವೃತ್ತಿಗಳ ಕಡೆ ಪ್ರಚಲವಾಗದಂತೆ ಮಾಡುವುದೇ ಮೂರ್ತಿ ಪೂಜಾಧ್ಯಾನಗಳ ಸಾರ, ಪ್ರತಿಮೆಗಳಲ್ಲಿ 'ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದ ಸೇವನಂ । ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ ॥ ಎಂಬ ನವವಿಧ ಭಕ್ತಿ ರೂಪವಾದ ಭಾಗವತ ಧರ್ಮವನ್ನು ಆಚರಿಸಬೇಕು ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ವಿವರಿಸಿರುವ, ಗಣಪತಿ, ಶಿವ, ವಿಷ್ಣು, ಆದಿತ್ಯ, ಅಂಬಿಕ, ಸುಬ್ರಹ್ಮಣ್ಯ, ಸೂರ್ಯ, ರಾಮಕೃಷ್ಣ ದ್ಯವತಾರ ಪುರುಷರುಗಳ ಪ್ರತಿಮೆಗಳನ್ನು ಪೂಜಿಸುವುದು ಸೂಕ್ತವು. ಶಾಸ್ತ್ರರೀತ್ಯಾ ಇವುಗಳಲ್ಲಿ ಭಗವತ್ಸಾನ್ನಿಧ್ಯವು ಅತಿಶಯವಾಗಿರುತ್ತದೆ. ಈ ಭಕ್ತಿ ಪ್ರಧಾನವಾದ ಪೂಜಾದಿಗಳನ್ನೇ ಶಾಸ್ತ್ರಗಳಲ್ಲಿ 'ಮೋಕ್ಷ ಸಾಧನಾ ಸಾಮಗ್ರ್ಯಾಂ ಭಕ್ತಿರೇವಗರೀಯಸಿ' ಎಂದು ಹೇಳಿದೆ. ಮೋಕ್ಷಗಾಮಿಗೆ ಇದರಿಂದ ಕ್ರಮ ಕ್ರಮವಾಗಿ ಚಿತ್ತಶುದ್ಧಿ ದ್ವಾರಾ ಸಾಧನ ಚತುಷ್ಟಯಗಳು ಕರಗತವಾಗುತ್ತವೆ.

ಉಪಾಸಕರ ಸಾಧನೆಯ ಫಲ

ನಿರ್ಗುಣಬ್ರಹ್ಮವನ್ನು ಸಾಕ್ಷಾತ್ಕಾರ ಪಡೆದ ದೃಢ ಅಪರೋಕ್ಷ ಜ್ಞಾನಿಗಳು ಈ ಲೋಕವಲ್ಲಿಯೇ ಲಿಂಗಶರೀರವನ್ನು ಕಳೆದುಕೊಂಡು ಬ್ರಹ್ಮದೊಡನೆ ಒಂದಾಗುವರು. ಅವರು ಪರಲೋಕಕ್ಕೆ ಹೋಗುವ ಅಗತ್ಯವೇ ಇಲ್ಲ.

ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗುವ ಸಗುಣೋಪಾಸಕರ ಹಿಂದೆ ಸಗುಣ ಬ್ರಹ್ಮೋಪಾಸನೆಯೂ ಹೋಗುತ್ತದೆ.

ಭೂಲೋಕದಿಂದ ಬ್ರಹ್ಮಲೋಕಕ್ಕೆ ಹೋಗುವಲ್ಲೂ ಸಿಕ್ಕುವ ಲೋಕಗಳ ವ್ಯಾಪ್ತಿಯನ್ನು ಬೃ. ಉಪನಿಷತ್ತಿನ ಮುನಿ ಕಾಂಡದಲ್ಲಿ ಹೇಳಿದೆ.

ಪೃಥಿವೀಲೋಕದಿಂದ ಜಲ ಲೋಕ ವ್ಯಾಪ್ತಿ ಅಲ್ಲಿಂದ ತೇಜೋಲೋಕ ಅಲ್ಲಿಂದ ವಾಯುಲೋಕ, ಅಲ್ಲಿಂದ ಅಂತರಿಕ್ಷಲೋಕ, ಅಲ್ಲಿಂದ ಗಂಧರ್ವಲೋಕ.

ಕಸ್ಮಿನ್ನು ಖಲ್ವಂತರಿಕ್ಷಲೋಕಾ ಓ ತಾಶ್ಚ ಪ್ರೋತಾಶ್ಚೇತಿ ಆದಿತ್ಯ ಲೋಕೇಷು ಗಾರ್ಗೀತಿ (ಅಂತರಿಕ್ಷ ಲೋಕವು ಯಾವುದರಿಂದ ವ್ಯಾಪ್ತವಾಗಿದೆ ? ಆದಿತ್ಯಲೋಕವಿಂದ.

ಕಸ್ಮಿನ್ನು ಖಲ್ವಾದಿತ್ಯಲೋಕಾ ಓತಾಶ್ಚ ಪ್ರೋತಾಶ್ಚೇತಿ ಚಂದ್ರಲೋಕೇಷು ಗಾರ್ಗೀತಿ (ಆದಿತ್ಯಲೋಕವು ಯಾವುದರಿಂದ ವ್ಯಾಪ್ತವಾಗಿದೆ ? ಚಂದ್ರಲೋಕದಿಂದ)

ಅಲ್ಲಿಂದ ಮುಂದೆ ನಕ್ಷತ್ರಲೋಕ, ದೇವಲೋಕ. ಇಂದ್ರಲೋಕ, ಪ್ರಜಾಪತಿ ಲೋಕಗಳನ್ನು ಹೀಗೆಯೇ ಕ್ರಮವಾಗಿ ಹೇಳಿ.

ಕಸ್ಮಿನ್ನು ಖಲು ಪ್ರಜಾಪತಿ ಲೋಕಾ ಓತಾಶ್ಚ ಪ್ರೋತಾಶ್ಚೇತಿ ಬ್ರಹ್ಮಲೋಕೇಷು ಗಾರ್ಗೀತಿ ಎಂದು ಪ್ರಜಾಪತಿ ಲೋಕವು ಯಾವುದರಿಂದ ವ್ಯಾಪ್ತವಾಗಿದೆ ಎಂಬ ಗಾರ್ಗಿಯ ಪ್ರಶ್ನೆಗೆ ಯಾಜ್ಞ್ಯವಲ್ಕ್ಯರು ಬ್ರಹ್ಮಲೋಕವೆಂದಿದ್ದಾರೆ.

ಇಲ್ಲಿ ಗಮನಿಸತಕ್ಕ ವಿಷಯವೇನೆಂದರೆ ನಾವು ನೋಡುವ ವಿಮಾನದಿಂದ ತಲುಪಿರುವ ಚಂದ್ರಗ್ರಹವು ಚಂದ್ರ ಲೋಕವಲ್ಲ. ಚಂದ್ರಲೋಕವು ಆದಿತ್ಯ ಲೋಕಕ್ಕಿಂತ ಅತಿ ದೂರದಲ್ಲಿದೆ. ಆ ಲೋಕವೇ ಸ್ವರ್ಗ.

ಕತ್ತಲೆಯ ದಾರಿಯಿಂದ ಸ್ವರ್ಗಕ್ಕೆ ಹೋಗುವ ಕರ್ಮಿಯ ಹಿಂದೆ ಅವನ ಕರ್ಮವು ಬೆನ್ನು ಹತ್ತುತ್ತದೆ.

ಸಗುಣ ಬ್ರಹ್ಮೋಪಾಸನೆಯು ಬ್ರಹ್ಮಲೋಕದ ಪ್ರಾಪ್ತಿಗೆ ಸ್ವತಂತ್ರ ಸಾಧನವಾದರೆ ಕರ್ಮಗಳು ಸ್ವರ್ಗಕ್ಕೆ ಸ್ವತಂತ್ರ ಸಾಧನವು ಜೀವನೂ ಬ್ರಹ್ಮನೂ ಒಂದೇ ಎಂಬ ಸಾಕ್ಷಾತ್ಕಾರ ಬಂದೊಡನೆ ಸಮಸ್ತ ಕರ್ಮಗಳೂ ಅಳಿದು ಹೋಗುತ್ತವೆ.

ಒಟ್ಟಿನಲ್ಲಿ ಸಂಗ್ರಹವಾಗಿ ಅದ್ವೈತ ತತ್ವ ಸಾರವನ್ನು ಇಲ್ಲಿ ತಿಳಿಸಿದೆ. ಇನ್ನಷ್ಟು ವಿಷಯಗಳನ್ನು ಯೋಗಶಾಸ್ತ್ರದ ವಿಷಯವಾಗಿ ಮುಂದಿನ ಅಧ್ಯಾಯದಲ್ಲಿ ಅಲ್ಲಲ್ಲೇ ತಿಳಿಸುತ್ತದೆ. ಕೆಲವು ಕಡೆ ಪುನರುಕ್ತಿ ದೋಷವೆಂದು ಅಲ್ಲಲ್ಲಿ ಕಂಡರೂ ವಿಷಯಗಳು ಚೆನ್ನಾಗಿ ಮನದಟ್ಟಾಗಲು ವೇದಾಂತ ವಿಷಯಿಕ ಬರಹಗಳಲ್ಲಿ ಸಾಧಾರಣವಾಗಿ ರೂಢಿಯಿರುವಂತೆ ಇಲ್ಲಿಯೂ ಹೇಳಿದ್ದಾಗಿದೆ.

ಇನ್ನು ಮುಂದೆ ಮುಖ್ಯವಾಗಿ ಪತಂಜಲಿಯ ಯೋಗ ಸೂತ್ರಗಳನ್ನು ತೆಗೆದುಕೊಂಡು ಅಲ್ಲಿನ ಪ್ರಕ್ರಿಯೆಗಳು ಅದ್ವೈತ ಶಾಸ್ತ್ರಕ್ಕೆ ಎಷ್ಟರ ಮಟ್ಟಿಗೆ ಸಂಬಂಧಿಸುವುದೆಂಬುದನ್ನು ವಿವರಿಸಲಾಗಿದೆ.

ಪ್ರಥಮಾಧ್ಯಾಯವು ಮುಗಿದುದು.